Editor: NITYANANDASWAMI Publisher: U. BASAVARAJA
RNI No. KARKAN/2006/17926


ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 24 | ಜೂನ್ 6-12, 2022 | ಪುಟ 16 | ರೂ.10/-
Volume: 16 Issue: 24 June 6-12, 2022 Pages: 16 Price: 10/-
https://janashakthi.wordpress.com e-mail : js_weekly@yahoo.com

ಮೋದಿ ಸರಕಾರದ ಎಂಟು ವರ್ಷ:

ಪ್ರಜಾಪ್ರಭುತ್ವದ ಮೇಲೆ ಸತತ ದಾಳಿಯೊಂದೇ ಸಾಧನೆ







ಪಠ್ಯ ಪರಿಷ್ಕರಣೆ: ನಾಡಿಗೆ ಕೇಡು ಬಗೆಯುವ ಮುಖ್ಯಮಂತ್ರಿಗಳ ನಿರ್ಧಾರ





ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಸಮಾವೇಶ:

ದಮನಿತ ಸಮುದಾಯದ ಸ್ಥಿತಿ-ಗತಿಗಳ ಅನಾವರಣ



ಆಸ್ಟ್ರೇಲಿಯಾ: ಎರಡು ಪಕ್ಷಗಳ ವ್ಯವಸ್ಥೆ ಕೊನೆ

ಕೇರಳ – LDF ಸರ್ಕಾರ

ಕೃಷಿ ಮತ್ತು ರೈತರಿಗೆ ಹೊಸ ಭರವಸೆ



ಹರ್ಯಾಣ ಮತ್ತು ದಿಲ್ಲಿ ಸರಕಾರಗಳಿಂದ ಅಂಗನವಾಡಿ ನೌಕರರ ವಜಾ: ಐಎಲ್‌ಒಗೆ ಸಿಐಟಿಯು ದೂರು

ಕಾರ್ಮಿಕರ ಮೂಲಭೂತ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿದೆ–ತಪನ್ ಸೇನ್

ಹರ್ಯಾಣ ಮತ್ತು ದಿಲ್ಲಿ ಸರಕಾರ ಅನುಕ್ರಮವಾಗಿ 975 ಮತ್ತು 991 ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಮುಷ್ಕರ ನಿರತರಾಗಿದ್ದ ಅಂಗನವಾಡಿ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದು ಹಾಕಿರುವುದರ ವಿರುದ್ಧ ಸಿಐಟಿಯು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯನ್ನು (ಐಎಲ್‌ಒ) ಸಂಪರ್ಕಿಸಿದೆ. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಅವರು ಐಎಲ್‌ಒದ ಬ್ಯೂರೋ ಫಾರ್ ವರ್ಕರ್ಸ್ ಆಕ್ಟಿವಿಟೀಸ್(ಕಾರ್ಮಿಕರ ಚಟುವಟಿಕೆಗಳ ಕಚೇರಿ–ACTRAV) ನ ನಿರ್ದೇಶಕಿ ಮರಿಯಾ ಹೆಲೆನಾ ಆಂಡ್ರೆ ಅವರಿಗೆ ನೀಡಿರುವ ದೂರಿನಲ್ಲಿ ಇದು ಕೇಂದ್ರ ಸರಕಾರದ ಅರಿವಿಗೆ ಬಂದಿದ್ದು, ಅದರ ಪ್ರಚೋದಬೆಯ ಅಡಿಯಲ್ಲಿಯೇ ನಡೆದಿವೆ ಎಂದೂ ಹೇಳಿದ್ದಾರೆ.

ಈ ರೀತಿ ಕೆಲಸದಿಂದ ತೆಗೆದು ಹಾಕಿರುವುದು (ರಿಟ್ರೆಂಚ್ ಮೆಂಟ್‌ಗಳು) ಐಎಲ್‌ಒ ಅಧಿನಿರ್ಣಯಗಳು, ಶಿಫಾರಸುಗಳು ಮತ್ತು ಘೋಷಣೆಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಕಾರ್ಮಿಕರ ಮೂಲಭೂತ ಹಕ್ಕುಗಳ ಹಲವಾರು ನೀತಿಗಳು ಸಂಪೂರ್ಣ ಉಲ್ಲಂಘನೆಯಾಗಿದೆ ಎಂದು ತಪನ್ ಸೇನ್ ಹೇಳಿದ್ದಾರೆ. ಮುಷ್ಕರ ಕಾನೂನುಬಾಹಿರವಾಗಿವೋ ಎಂಬುದನ್ನು ಕುರಿತಂತೆ ಅಂತಿಮ ನಿರ್ಣಯವನ್ನು ಸರಕಾರ ಕೈಗೊಳ್ಳಬಾರದು, ವಿಶೇಷವಾಗಿ ಸರ್ಕಾರವೇ ವಿವಾದದಲ್ಲಿ ಪಕ್ಷವಾಗಿರುವ ಸಂದರ್ಭಗಳಲ್ಲಿ– ಎಂಬ ಸಂಘ ಸ್ವಾತಂತ್ರ್ಯ ಕುರಿತಾದ ಸಮಿತಿಯ ಹೇಳಿರುವುದನ್ನು ಈ ಸರ್ಕಾರಗಳು ನಿರ್ಲಕ್ಷಿಸಿವೆ ಎಂದು ಅವರು ಹೇಳಿದ್ದಾರೆ.

"ತ್ರಿಪಕ್ಷೀಯ ಸಮಾಲೋಚನೆಯ ತತ್ವವನ್ನು ಉಲ್ಲಂಘಿಸಿ ಅವರು ಆಯಾ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚೆಯನ್ನು ನಿರಾಕರಿಸಿದ್ದಾರೆ. ಅವರು ಈ ವರ್ಗದ ಕಾರ್ಮಿಕರಿಗೆ ಸಂಬಂಧಿಸದ ಕಾಯ್ದೆಗಳನ್ನು ವಿಧಿಸಿದ್ದಾರೆ. ನೈಸರ್ಗಿಕ ನ್ಯಾಯದ ತತ್ವವನ್ನು ಅನುಸರಿಸದೆ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಅವರು ತಿಂಗಳುಗಟ್ಟಲೆ ವೇತನವನ್ನು ನೀಡದೆ ಕಾರ್ಮಿಕರನ್ನು ಬಡತನ ಮತ್ತು ಹಸಿವಿನಿಂದ ತಳ್ಳಿದ್ದಾರೆ" ಎಂದಿರುವ ತಪನ್ ಸೇನ್, ಐಎಲ್‌ಒ ಭಾರತ ಸರ್ಕಾರವನ್ನು ಸಂಪರ್ಕಿಸಬೇಕು ಮತ್ತು ಎಲ್ಲಾ ಕಾನೂನುಬಾಹಿರ ಕ್ರಮಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಬೇಕು ಹಾಗೂ ಹಾಗೆ ಮಾಡುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಕರ್ತರು ಸಂಪರ್ಕಿಸಿದಾಗ, ದೆಹಲಿ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಕೈಲಾಶ್ ಗೆಹ್ಲೋಟ್ ಈ ವಿಷಯವು ನ್ಯಾಯಾಲಯದ ಪರಿಶೀಲನೆಯಲ್ಲಿ ಇರುವುದರಿಂದ ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. ರಿಟ್ರೆಂಚ್‌ಮೆಂಟನ್ನು ವಿರೋಧಿಸಿ ಅಂಗನವಾಡಿ ಕಾರ್ಯಕರ್ತೆಯರು ದೆಹಲಿ ಹೈಕೋರ್ಟ್‌ನ ಮೊರೆ ಹೋಗಿದ್ದಾರೆ.

ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಯಾವುದೇ ಹೆಚ್ಚುವರಿ ವೇತನ ಅಥವಾ ಅಪಾಯ ಭತ್ಯೆ ಇಲ್ಲದೆ ಸಂಬಂಧಪಟ್ಟ ಆರೋಗ್ಯ ಇಲಾಖೆಗಳ ಸಮನ್ವಯದೊಂದಿಗೆ ಮುಂಚೂಣಿಯಲ್ಲಿ ಕೆಲಸ ಮಾಡಿದ್ದಾರೆ, ಇದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ ಎಂದು ತಪನ್ ಸೇನ್ ಹೇಳಿದರು.

"ಈ ಕಾರ್ಮಿಕರಿಗೆ ಗೌರವಧನ ಎಂದು ಕರೆಯಲಾಗುವ ವೇತನವನ್ನು ನೀಡಲಾಗುತ್ತದೆ, ಇದು ದೇಶದ ಕನಿಷ್ಠ ವೇತನಕ್ಕಿಂತ ಕಡಿಮೆಯಾಗಿದೆ. ಭಾರತ ಸರ್ಕಾರವು ಅವರ ಸಂಭಾವನೆಯನ್ನು ಕೊನೆಯ ಬಾರಿಗೆ ಹೆಚ್ಚಿಸಿದ್ದು 2018ರಲ್ಲಷ್ಟೇ. ಆದರೆ ದೆಹಲಿ ಮತ್ತು ಹರಿಯಾಣ ರಾಜ್ಯಗಳು ಸೇರಿದಂತೆ ಹಲವಾರು ರಾಜ್ಯ ಸರ್ಕಾರಗಳು ಈ ಹೆಚ್ಚಳವನ್ನು ಜಾರಿಗೆ ತಂದಿಲ್ಲ. ಇದಲ್ಲದೆ, ಹರ್ಯಾಣ, ದೆಹಲಿ, ಕರ್ನಾಟಕ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಹಲವಾರು ತಿಂಗಳುಗಳ ವೇತನ ಮತ್ತು ಭತ್ಯೆಗಳನ್ನು ಪಾವತಿಸಲಾಗಿಲ್ಲ," ಎಂದು ದೂರಿನಲ್ಲಿ ಹೇಳಲಾಗಿದೆ. ಅಲ್ಲದೆ ಕ್ರಮ ಪ್ರಕಾರ ನೌಕರರು ಮುಷ್ಕರದ ಸೂಚನೆಯನ್ನು ಕೊಟ್ಟ ನಂತರವೇ ನಂತರ ಕೊನೆಯ ದಾರಿಯಾಗಿ ಅವರು ಮುಷ್ಕರ ನಡೆಸಿದರು ಎಂದೂ ದೂರಿನಲ್ಲಿ ತಿಳಿಸಲಾಗಿದೆ.

ದಿಲ್ಲಿ ಸರ್ಕಾರ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ(ಎಸ್ಮ)ವನ್ನು ಹೇರಿತು. ಆದರೆ ಆರೋಗ್ಯ ಅಥವಾ ಪೌಷ್ಟಿಕಾಂಶದ ಪೂರಕಗಳ ಸೇವೆಗಳನ್ನು ಈ ಕಾಯಿದೆ ಅಥವಾ ಅದರ ಪಟ್ಟಿಯಲ್ಲಿ ಒಳಗೊಂಡಿಲ್ಲ. "ಕಾರ್ಮಿಕ ಸಂಘಗಳನ್ನು ಕುರಿತಾದ ಕಾಯ್ದೆ ಕಾರ್ಮಿಕ ಸಂಘದ ಚಟುವಟಿಕೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಅನ್ವಯಿಸುವುದನ್ನು ನಿಷೇಧಿಸುತ್ತದೆ. ದಿಲ್ಲಿ ಸರ್ಕಾರದ ಈ ಕ್ರಮವು ಕಾನೂನುಬಾಹಿರವಾಗಿದೆ. ಏಕೆಂದರೆ 2022 ರ ಜನವರಿಯಿಂದ ವೇತನವನ್ನು ನೀಡದ ಕಾರಣ ತಮ್ಮ ಉಳಿವಿಗಾಗಿ ತಮ್ಮ ಬೇಡಿಕೆಗಳ ಮೇಲೆ ಶಾಂತಿಯುತವಾಗಿ ಆಂದೋಲನ ನಡೆಸುತ್ತಿದ್ದ ಜನರ ಮೇಲೆ ಎಸ್ಮಾವನ್ನು ಹೇರುವುದು ಅಸಮರ್ಥನೀಯವಾಗಿದೆ"ಎಂದು ತಪನ್ ಸೇನ್ ಹೇಳುತ್ತಾರೆ.

ಸಂಘಟನೆಗಳು ಮುಷ್ಕರವನ್ನು ಹಿಂಪಡೆದು ಮರುದಿನವೇ ನೌಕರರು ಕರ್ತವ್ಯಕ್ಕೆ ಸೇರಿದರೂ, ಮಾರ್ಚ್ 12 ರಂದು ರಾಜ್ಯವು 991 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಹೊರಹಾಕಿದೆ. ಹರ್ಯಾಣ ಸರ್ಕಾರವು 975 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರನ್ನು ವಜಾಗೊಳಿಸಿದೆ, ಅವರೆಲ್ಲರೂ ಟ್ರೇಡ್ ಯೂನಿಯನ್ ನಾಯಕರು.

ಅಂಚಿಗೆ ತಳ್ಳಲ್ಪಟ್ಟ ಜನರ ಮೇಲೆ ದಬ್ಬಾಳಿಕೆ, ಭೂಕಬಳಿಕೆ –ಭೂಮಿ ಅಧಿಕಾರ ಆಂದೋಲನದ ಖಂಡನೆ

ಭೂಮಿ ಅಧಿಕಾರ ಆಂದೋಲನ(ಬಿ.ಎ.ಎ.) ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ಜನರ ಮೇಲೆ ಪ್ರಭುತ್ವದ ದಬ್ಬಾಳಿಕೆ ಮತ್ತು ಅವರ ಭೂಮಿಯ ಅಕ್ರಮ ಭೂಸ್ವಾಧೀನವನ್ನು ಖಂಡಿಸಿದೆ ಮತ್ತು ಅಸ್ಸಾಂ, ಛತ್ತೀಸ್‌ಗಢ, ಮಧ್ಯಪ್ರದೇಶ, ಒಡಿಶಾ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ಸರಕಾರದ ದಬ್ಬಾಳಿಕೆಯನ್ನು ಪ್ರತಿರೋಧಿಸುತ್ತಿರುವ ಜನಗಳೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದೆ.

'ಭೂಮಿ ಅಧಿಕಾರ ಆಂದೋಲನ'ದ ಪ್ರಧಾನ ಗುಂಪಿನ ಸಭೆ ಮೇ 18ರಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕಚೇರಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಎಐಯುಎಫ್‌ಡಬ್ಲ್ಯುಪಿ ಯ ಅಶೋಕ್ ಚೌಧರಿ ವಹಿಸಿದ್ದರು. ಇದರಲ್ಲಿ ಎಈಕೆಎಸ್‌ನ ಹನ್ನನ್ ಮೊಲ್ಲಾ, ಕೃಷ್ಣ ಪ್ರಶಾದ್ ಮತ್ತು ಕಾಂ ಎನ್.ಕೆ. ಶುಕ್ಲಾ, ಎಐಕೆಎಂ ನ ಪ್ರೇಮ್ ಸಿಂಗ್, ಎಐಯುಎಫ್‌ಡಬ್ಲ್ಯೂಪಿ ಯರೋಮಾ ಮಲಿಕ್ ಮತ್ತು ಡೆಲ್ಲಿ ಸಾಲಿಡಾರಿಟಿ ಗ್ರೂಪ್‌ನ ಇತರ ಸದಸ್ಯರು ಭಾಗವಹಿಸಿದ್ದರು.

ಈ ವರ್ಷ ದೇಶಾದ್ಯಂತ ಭೂರಕ್ಷಕರ ಹಿಂಸಾತ್ಮಕ ದಮನದ ಕಳವಳಕಾರೀ ಅಲ ಕಂಡು ಬಂದಿದೆ. ಹೊರತೆಗೆಯುವ ಕೈಗಾರಿಕಾ ಮಾದರಿಯು ಪ್ರಭುತ್ವ ದಮನದೊಂದಿಗೆ ಅರಣ್ಯ, ನೆಲ ಮತ್ತು ಜಲವನ್ನು ನಾಶಪಡಿಸುತ್ತಿದೆ. ಸಭೆಯಲ್ಲಿ ಭೂಕಬಳಿಕೆ ಮತ್ತು ಅದರ ವಿರುದ್ಧದ ಜನಾಂದೋಲನದ ಪ್ರಸಕ್ತಸನ್ನಿವೇಶದ ಕುರಿತು ಜಂಟಿ ವಿಶ್ಲೇಷಣೆ ನಡೆಸಲಾಯಿತು.

ಸಭೆಯ ಆರಂಭದಲ್ಲಿ, ಭಾರತದಾದ್ಯಂತ ಕಾರ್ಪೊರೇಟ್‌ಗಳಿಗೆ ಲಾಭದಾಯಕವಾಗಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸಿದ ಭೂಕಬಳಿಕೆಯ ಪ್ರಯತ್ನಗಳ ಕುರಿತು ಸಂಕ್ಷಿಪ್ತ ಮೌಲ್ಯಮಾಪನವನ್ನು ಮಾಡಲಾಯಿತು. ಅಸ್ಸಾಂನ ಸಿಲ್ಚಾರ್‌ನಲ್ಲಿರುವ ಡೋಲು ಟೀ ಎಸ್ಟೇಟ್‌ನಲ್ಲಿ ಟೀ ಗಾರ್ಡನ್ ಕಾರ್ಮಿಕರ ಯಾವುದೇ ಒಪ್ಪಿಗೆಯಿಲ್ಲದೆ ಚಹಾ ತೋಟಗಳನ್ನು ಬಲವಂತವಾಗಿ ಉತ್ಖನನ ಮಾಡುವುದು ಮುಂತಾದವು ಸಭೆಯಲ್ಲಿ ಚರ್ಚಿಸಿದ ಕೆಲವು ಪ್ರಮುಖ ವಿಷಯಗಳಾಗಿವೆ.

ಕಲ್ಲಿದ್ದಲು ಗಣಿಗಾರಿಕೆಗಾಗಿ ಛತ್ತೀಸ್‌ಗಡ ಸರ್ಕಾರವು ಹಸ್ದೇವ್ ಅರಣ್ಯ ಪ್ರದೇಶದಲ್ಲಿ 170000 ಹೆಕ್ಟೇರ್ ಪ್ರದೇಶದಲ್ಲಿ 4.5 ಲಕ್ಷಕ್ಕೂ ಹೆಚ್ಚು ಸಸ್ಯಗಳನ್ನು ನೆಲಸಮ ಮಾಡುತ್ತಿದೆ.

ಬೀರ್‌ಭೂಮ್‌ನ ದಿಯೋಚಾದಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರವು ಸಂತ್ರಸ್ತ ಕುಟುಂಬಗಳು ಮತ್ತು ಪರಿಸರ ತಜ್ಞರೊಂದಿಗೆ ಯಾವುದೇ ಸಮಾಲೋಚನೆಯಿಲ್ಲದೆ ಓಪನ್ ಕಾಸ್ಟ್ ಗಣಿಗಾರಿಕೆಯ ಯೋಜನೆ ಹಾಕಿದೆ. ಈ ಯೋಜನೆಯು 4,314 ಕುಟುಂಬಗಳ ಮೇಲೆ ಪರಿಣಾಮ ಬೀರಲಿದೆ. ಇದು 21,000 ಜನರನ್ನು ಸ್ಥಳಾಂತರಿಸಲು ಕಾರಣವಾಗುತ್ತದೆ, ಅವರಲ್ಲಿ 9,034 ಸಂತಾಲ್ ಸಮುದಾಯಕ್ಕೆ (ಪರಿಶಿಷ್ಟ ಪಂಗಡ) ಮತ್ತು 3,601 ಪರಿಶಿಷ್ಟ ಜಾತಿಗೆ ಸಖುತರಿದವ ಬಡಜನರು.

ಒಡಿಶಾದಲ್ಲಿ, ಬಾಕ್ಸೈಟ್ ಮತ್ತು ಕಬ್ಬಿಣದ ಅದಿರು ಗಣಿಗಾರಿಕೆಗಾಗಿ ಏಳು ಇದುವರೆಗೆ ಮುಟ್ಟಿರದ ಕಾಡುಗಳನ್ನು ರಾಜ್ಯ ಸರ್ಕಾರ ಹರಾಜು ಮಾಡಿದೆ. ಅಂತೆಯೇ, ಧಿಂಖಿಯಾದಲ್ಲಿ, ಜಿಂದಾಲ್ ಗುಂಪುಗಳು ತಮ್ಮ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಳ್ಳದಂತೆ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಜಿಂದಾಲ್ ವಿರೋಧಿ ಪ್ರತಿಭಟನಾಕಾರರ ಮೇಲೆ ಕ್ರೂರ ಪೊಲೀಸ್ ದಬ್ಬಾಳಿಕೆ ನಡೆಸಲಾಯಿತು. ಕೋರಾಪುಟ್‌ನಲ್ಲಿ ಸಾರ್ವಜನಿಕ ವಿಚಾರಣೆಯಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡದೆ ಪರಿಸರ ಅನುಮತಿ ಪಡೆಯಲು ಸರ್ಕಾರ ಸಾರ್ವಜನಿಕ ವಿಚಾರಣೆ ನಡೆಸಿತು. 2021 ರಲ್ಲಿ ಗ್ರಾಮ ಸಭೆಯ ಯಾವುದೇ ಒಪ್ಪಿಗೆಯಿಲ್ಲದೆ 50 ವರ್ಷಗಳ ವರೆಗೆ 6 ಮಿಲಿಯನ್ ಟನ್ ಬಾಕ್ಸೈಟ್‌ಗೆ ಹೊಸ ಗುತ್ತಿಗೆ ನೀಡಲಾಯಿತು.

ಬಿಹಾರದಲ್ಲಿ ಸರ್ಕಾರಿ ಬಂಜರು ಭೂಮಿಯಲ್ಲಿ ವಾಸಿಸುತ್ತಿದ್ದ ಜನರನ್ನು ಯಾವುದೇ ಸೂಚನೆ ನೀಡದೆ ಬಲವಂತವಾಗಿ ಹೊರಹಾಕಲಾಗುತ್ತಿದೆ.

ಗುಜರಾತ್‌ನ ನರ್ಮದಾ ಜಿಲ್ಲೆಯಲ್ಲಿ, ಏಕತಾ ಪ್ರತಿಮೆಯ ಸುತ್ತಲಿನ ಪ್ರದೇಶವನ್ನು ಮೇಲ್ದರ್ಜೆಗೆ ಏರಿಸುವ ಹೆಸರಿನಲ್ಲಿ ಸ್ಥಳೀಯ ಜನರಿಗೆ ರಾಜ್ಯದ ಆಡಳಿತ ಯಂತ್ರಗಳು ಕಿರುಕುಳ ನೀಡುತ್ತಿವೆ.

ರಾಜಸ್ಥಾನದಲ್ಲಿ, ಬನ್ಸ್ವಾರಾದಲ್ಲಿ ಪರಮಾಣು ಸ್ಥಾವರವನ್ನು ಸರ್ಕಾರವು ಪ್ರಸ್ತಾಪಿಸಿದೆ, ಅದು ಮಹಿ ಬನ್ಸ್ವಾರಾ ರಾಜಸ್ಥಾನ ಪರಮಾಣು ವಿದ್ಯುತ್ ಯೋಜನೆಗಾಗಿ 107.3 ಹೆಕ್ಟೇರ್ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತದೆ.

ತಮಿಳುನಾಡಿನಲ್ಲಿ, ಹೈಕೋರ್ಟ್ ಅರಣ್ಯ ಪ್ರದೇಶಗಳಲ್ಲಿ ಜಾನುವಾರುಗಳನ್ನು ಮೇಯಿಸುವುದನ್ನು ನಿಷೇಧಿಸಿದೆ ಮತ್ತು ಜಾನುವಾರುಗಳನ್ನು ಸಾಕುವವರು ತಮ್ಮ ಜಾನುವಾರುಗಳನ್ನು ಕಾಡಿನೊಳಗೆ ಮೇಯಿಸಲು ಕೊಂಡೊಯ್ಯುವುದನ್ನು ನಿಷೇಧಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕಾರ್ಮಿಕ ವರ್ಗದ ಮೇಲೆ ಕೋಮು ದಾಳಿ ನಡೆಸುವುದು ಮತ್ತು ಕಾರ್ಪೊರೇಟ್ ಲಾಭಗಳಿಗಾಗಿ ಅವರ ಮನೆಗಳನ್ನು ಕೆಡವಲು ಬುಲ್ಡೋಜರ್‌ಗಳನ್ನು ಬಳಸುತ್ತಿರುವ ವಿಷಯಗಳನ್ನು ಕೈಗೆತ್ತಿಕೊಳ್ಳವಿ ಬಗ್ಗೆ ಸಭೆಯಲ್ಲಿ ತೀವ್ರ ಚರ್ಚೆ ನಡೆಯಿತು. ಸರ್ಕಾರದ ಈ ಇಂತಹ ಕೃತ್ಯವನ್ನು ಮತ್ತು ಈ ರೀತಿಯ ರಾಜಕೀಯವನ್ನು ಖಡಾಖಂಡಿತವಾಗಿ ವಿರೋಧಿಸಲು ನಿರ್ಧರಿಸಲಾಯಿತು.

ಜುಲೈನಲ್ಲಿ ರಾಷ್ಟ್ರೀಯ ಮಟ್ಟದ ಸಮಾವೇಶವನ್ನು ಆಯೋಜಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಮತ್ತು 'ಹಸ್ದೇವ್ ಅರಂದ್ ಬಚಾವೋ ಸಂಘರ್ಷ ಸಮಿತಿ'ಯ ಹೋರಾಟಗಳಿಗೆ ಸೌಹಾರ್ದವನ್ನು ವ್ಯಕ್ತಪಡಿಸಲು ಜೂನ್ ತಿಂಗಳಲ್ಲಿ ಛತ್ತೀಸ್‌ಗಢದ ರಾಯ್‌ಪುರದಲ್ಲಿ ರಾಜ್ಯ ಮಟ್ಟದ ಸಮಾವೇಶಗಳನ್ನು ಆಯೋಜಿಸಲು ನಿರ್ಧರಿಸಲಾಯಿತು. ಮತ್ತು ಕ್ರೂರ ಪ್ರಭುತ್ವ ದಮನದ ವಿರುದ್ಧ ಧಿಂಖಿಯಾದ ಮೂಲನಿವಾಸಿಗಳ ದೀರ್ಘಕಾಲದ ಹೋರಾಟಗಳಿಗೆ ಬೆಂಬಲವಾಗಿ ಸಭೆಗಳನ್ನು ಆಯೋಜಿಸಲು ನಿರ್ಧರಿಸಲಾಯಿತು.

ರಾಷ್ಟ್ರೀಯ ಸಮಾವೇಶದ ಮೊದಲು ಎಲ್ಲ ಭೂ ಕಬಳಿಕೆ ಪ್ರಶ್ನೆಗಳನ್ನು ಕುರಿತಾದ "ಕಾರ್ಪೊರೇಟ್ ಹಿತಾಸಕ್ತಿಗಾಗಿ ಭೂಕಬಳಿಕೆಯ ಪ್ರಶ್ನೆಗಳು" ಎಂಬ ಶೀರ್ಷಿಕೆಯ ಒಂದು ವಿವರವಾದ ವರದಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಹನ್ನಾನ್ ಮೊಲ್ಲಾ ಪ್ರಕಟಿಸಿದರು.

ಬಿಕೆಯು ನಾಯಕ ರಾಕೇಶ್ ಟಿಕಾಯತ್ ಮೇಲೆ ಬೆಂಗಳೂರಿನಲ್ಲಿ ಹಲ್ಲೆ – ಹೇಡಿತನದ ಕೃತ್ಯ ಎಂದು ಎಐಕೆಎಸ್ ಖಂಡನೆ

ಬೆಂಗಳೂರಿನಲ್ಲಿ ಭಾರತ್ ಕಿಸಾನ್ ಯೂನಿಯನ್(ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಮತ್ತು ಇತರ ರೈತ ಮುಖಂಡರ ಮೇಲೆ ನಡೆದ ದಾಳಿಯನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಬಲವಾಗಿ ಖಂಡಿಸಿದೆ. ಸುಮಾರು ಹನ್ನೆರಡು ಮಂದಿ ದುಷ್ಕರ್ಮಿಗಳು ಪತ್ರಿಕಾಗೋಷ್ಠಿಗೆ ನುಗ್ಗಿ ದಾಳಿ ನಡೆಸಿದ್ದಾರೆ. ರಾಕೇಶ್ ಟಿಕಾಯತ್ ಅವರ ಮುಖಕ್ಕೆ ಕಪ್ಪು ಬಣ್ಣ ಎರಚಿದ ದುಷ್ಕರ್ಮಿಗಳು ಮೋದಿ ಪರ ಘೋಷಣೆಗಳನ್ನು ಕೂಗಿದ್ದಾರೆ ಎಂದು ವರದಿಯಾಗಿದೆ. ಈ ದಾಳಿಯು ಗಂಭೀರ ಭದ್ರತಾ ಲೋಪವಾಗಿದೆ ಮತ್ತು ಕರ್ನಾಟಕದ ಬಿಜೆಪಿ ಸರ್ಕಾರದ ವೈಫಲ್ಯವಾಗಿದೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಈ ಘಟನೆಯ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಬಲವಾದ ಪ್ರತಿಬಂಧಕ ಕ್ರಮವನ್ನು ಕೈಗೊಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಈ ಘಟನೆಯಲ್ಲಿ ಬಿಜೆಪಿಯ ಪಾತ್ರವೂ ಬಹಿರಂಗವಾಗಬೇಕಿದೆ. ರಾಕೇಶ್ ಟಿಕಾಯತ್ ಪ್ರಮುಖ ಭಾಗವಾಗಿದ್ದ ಐತಿಹಾಸಿಕ ರೈತ ಚಳವಳಿಯನ್ನು ಬಿಜೆಪಿ–ಆರ್‌ಎಸ್‌ಎಸ್ ವಿರೋಧಿಸುತ್ತಲೇ ಬಂದಿವೆ.

ರೈತ ನಾಯಕರ ಮೇಲಿನ ಇಂತಹ ಬೆದರಿಕೆಗಳು ಮತ್ತು ದಾಳಿಗಳನ್ನು ಸಹಿಸುವುದಿಲ್ಲ ಎಂದು ಘಟನೆಯ ಹಿಂದಿರುವ ಶಕ್ತಿಗಳಿಗೆ ಎಐಕೆಎಸ್ ಎಚ್ಚರಿಕೆ ನೀಡಿದೆ. ಇಂತಹ ಹೇಡಿತನದ ದಾಳಿಗಳು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ರೈತರು ಧ್ವನಿ ಎತ್ತುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.

ಸಂಪಾದಕೀಯ

ಪಠ್ಯ ಪರಿಷ್ಕರಣೆ: ನಾಡಿಗೆ ಕೇಡು ಬಗೆಯುವ ನಿರ್ಧಾರ, ಧಿಕ್ಕರಿಸಲೇಬೇಕು

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಪಠ್ಯಕ್ರಮಗಳನ್ನು ಪರಿಷ್ಕರಿಸಲು ನೇಮಿಸಿದ್ದ ರೋಹಿತ್ ಚಕ್ರತೀರ್ಥ ರವರ ನೇತೃತ್ವದ ಸಮಿತಿ ನಡೆಸಿದ ಅವಾಂತರಗಳನ್ನು ಸಂಪೂರ್ಣ ಕೈ ಬಿಡುವ ಬದಲು ಕೇವಲ ತಾಂತ್ರಿಕ ನಿರ್ಧಾರವನ್ನು ಪ್ರಕಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕ್ರಮ ಅತ್ಯಂತ ನಿರಾಶಾದಾಯಕವಾಗಿದೆ. ಯಾವುದೇ ವೈಚಾರಿಕ ವಿಮರ್ಶೆಗಳಿಗೆ ಕಿವಿಗೊಡದೇ ಮರು ಪರಿಷ್ಕರಣ ಸಮಿತಿಯ ನಿರ್ಧಾರಗಳನ್ನೇ ಸದಾ ಪ್ರತಿಪಾದಿಸುತ್ತಿದ್ದ ಶಿಕ್ಷಣ ಸಚಿವ ನಾಗೇಶ್ ರವರ ಅಭಿಪ್ರಾಯದಂತೆ ಮುಖ್ಯಮಂತ್ರಿಗಳು ನಿರ್ಧಾರ ಕೈಗೊಂಡಿದ್ದಾರೆ ಎನ್ನುವುದೂ ಸ್ಪಷ್ಟ. ಈ ಮೂಲಕ ಅವರು ಆರ್.ಎಸ್.ಎಸ್.ನ ಕಾರ್ಯಸೂಚಿಯ ಜಾರಿಗೆ ಬದ್ಧರೆಂಬುದನ್ನು ತೋರಿಸಿದ್ದಾರೆ. ಮುಖ್ಯಮಂತ್ರಿಗಳು ತೀರ್ಮಾನ ಕೈಗೊಳ್ಳುವ ಮೊದಲೇ ಶಿಕ್ಷಣ ಸಚಿವರು ಬದಲಾವಣೆ ಅಸಾಧ್ಯ ಎಂದು ಘೋಷಿಸುತ್ತಿದ್ದರು ಎನ್ನುವುದು ಗಮನಾರ್ಹ.

ವಿವಾದ ಮತ್ತು ನಾಡಿನ ಪ್ರಜ್ಞಾವಂತರ ಪ್ರತಿರೋಧ ಭುಗಿಲೆದ್ದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ವಿವೇಕ ಹಾಗೂ ವಿವೇಚನೆಯ ನಿರ್ಧಾರವನ್ನು ಕೈಗೊಳ್ಳುವ ನಿರೀಕ್ಷೆ ಇತ್ತು. ಆದರೆ ಹಾಗೆ ಮಾಡದೇ 'ಸಂಘ' ದ ಕೈಗೊಂಬೆ ಎಂಬುದನ್ನು ಮತ್ತೆ ಸಾಬೀತುಪಡಿಸಿದ್ದಾರೆ.

ಪಠ್ಯ ಪರಿಷ್ಕರಿಸುವ ನೆಪದಲ್ಲಿ ಸಂಘಪರಿವಾರದ ಫ್ಯಾಸಿಸ್ಟ್ ಮಾದರಿಯ ಚಿಂತನೆಗಳನ್ನು ಎಳೆಯ ಮನಸ್ಸುಗಳಲ್ಲಿ ರೂಢಿಸುವ ದುಷ್ಟ ಯೋಜನೆ ಇದೆ. ಈ ದೆಸೆಯಲ್ಲಿ ನಿಜ ಚರಿತ್ರೆ ಮತ್ತು ವೈಚಾರಿಕತೆಯನ್ನು ವಿಕೃತಗೊಳಿಸುವುದಕ್ಕೆ ಆದ್ಯತೆ ಕೊಟ್ಟಿರುವುದು ನಾಡದ್ರೋಹ. ಆರೋಗ್ಯಪೂರ್ಣ ಚಿಂತನೆಗಳಿಂದ ನಾಡಿನ ಸಾಮಾಜಿಕ ಸ್ವಾಸ್ಥ್ಯ ಕಾಯುವ, ಮಕ್ಕಳ ಭವಿಷ್ಯವನ್ನು ರೂಪಿಸುವ ಕಾಳಜಿ ಹೊಣೆ ಇರುವ ಸರಕಾರದ ನಡೆ ಅತ್ಯಂತ ಖಂಡನೀಯ, ಬೇಜವಾಬ್ದಾರಿಯುತ ಮತ್ತು ಹೊಣೆಗೇಡಿತನದಿಂದ ಕೂಡಿದೆ.

ಮೊದಲನೆಯದಾಗಿ ಸಮಿತಿಯ ಅದ್ಯಕ್ಷರ ಆಯ್ಕೆಯ ಅರ್ಹತೆಯೇ ಪ್ರಶ್ನೆಗೊಳಗಾಗಿತ್ತು. ಮೇಲಾಗಿ ಪರಿಷ್ಕರಣೆ ಮಾಡುವಲ್ಲಿ ಅನುಸರಿಸ ಬೇಕಿದ್ದ ಮೂಲ ನೀತಿ ನಿಯಮಗಳನ್ನೇ ಉಲ್ಲಂಘಿಸಲಾಗಿತ್ತು. ಸಮಾನತೆ, ಸಾಮಾಜಿಕ ನ್ಯಾಯದ ಕಲ್ಪನೆಯನ್ನೇ ಬುಡಮೇಲು ಮಾಡಲಾಗಿತ್ತು. ಸಂವಿಧಾನಿಕ ಚೌಕಟ್ಟುಗಳನ್ನು ಮೀರಲಾಗಿತ್ತು. ಚಾರಿತ್ರಿಕ ಸಂಗತಿಗಳನ್ನು ವಿಕೃತಗೊಳಿಸಿದ್ದಲ್ಲದೇ ಬಸವಣ್ಣ, ಸಾವಿತ್ರಿಬಾಯಿ ಪುಲೆ, ನಾರಾಯಣ ಗುರು ರಂತಹ ಸಮಾಜ ಸುಧಾರಕರ, ಡಾ.ಅಂಬೇಡ್ಕರ್, ಭಗತ್ ಸಿಂಗ್ ರಂಥಹ ಸ್ವಾತಂತ್ರ್ಯ ಹೋರಾಟಗಾರರ, ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರಂತಹವರ ಪಠ್ಯ ಕೈಬಿಡುವ, ಮನ ಬಂದಂತೆ ತಿದ್ದುವ, ಮಹಿಳಾ ಸಂವೇದನೆಯೇ ಇಲ್ಲದ ಹಾಗೂ ಸೌಹಾರ್ದತೆ ಸಾರುವ ಕೆ.ನೀಲಾ, ಅನುಪಮಾ ಮುಂತಾದ ಮಹಿಳಾ ಲೇಖಕರ ಕಥೆ, ಬರಹಗಳನ್ನೇ ಇಲ್ಲವಾಗಿಸಿದ, ಆದಿವಾಸಿಗಳ ಬಗ್ಗೆ ಒಂದಿಷ್ಟೂ ಮಾಹಿತಿ ಇಲ್ಲದ, ಆದರೆ ಅವರನ್ನು ಹೀಗೆಳೆಯುವ, ಮುಂತಾದ ಭಾರೀ ಪ್ರಮಾದಗಳನ್ನು ಮಾಡಲಾಗಿದೆ. ಇದರಿಂದಾಗಿ ಕನ್ನಡದ ಅನೇಕ ಲೇಖಕರು, ಕವಯಿತ್ರಿಗಳು ಪ್ರತಿಭಟನಾರ್ಥವಾಗಿ ತಮ್ಮ ಪಠ್ಯ ಮತ್ತು ಕವಿತೆಗಳನ್ನು ವಾಪಸ್ ಪಡೆದಿದ್ದಾರೆ. ಆದರೂ ಬದಲಾಗದ ಸರಕಾರದ ನಿರ್ಧಾರವನ್ನು ಕೂಲಂಕುಶವಾಗಿ ಅವಲೋಕಿಸಿದರೆ ಪುರೋಗಾಮಿ ವಿಚಾರಗಳು ಮತ್ತು ಚಾರಿತ್ರಿಕ, ಸಾಮಾಜಿಕ–ಸಾಂಸ್ಕೃತಿಕ ವಾಸ್ತವಗಳನ್ನು ಮತ್ತು ವೈಚಾರಿಕ ಪ್ರಜ್ಞೆಯನ್ನು ಇಲ್ಲವಾಗಿಸಿ ಆ ಜಾಗದಲ್ಲಿ ಮೌಢ್ಯತೆ, ಮತೀಯವಾದಿಗಳ ವಿಜೃಂಬಣೆ ಚಿಂತಕರು ಮತ್ತು ಅವರ ಚಿಂತನೆಗಳನ್ನು ವಿಕೃತ ಗೊಳಿಸುವುದೇ ಮೂಲ ಆಶಯ ವಾಗಿರುವುದು ಕಂಡುಬರುತ್ತದೆ. ಹುತಾತ್ಮ ವೀರ ಭಗತ್ ಸಿಂಗರನ್ನು ಕೈ ಬಿಟ್ಟು, ಸ್ವಾತಂತ್ರ್ಯ ಹೋರಾಟವನ್ನೇ ಮಾಡದ ಆರೆಸ್ಸೆಸ್ಸಿನ ಸಂಸ್ಥಾಪಕ ಹೆಡ್ಗೆವಾರ್ ಅವರನ್ನು ಓದಿಸುವಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಮೋಚನಾ ಹೋರಾಟವನ್ನು ನೇಪಥ್ಯಕ್ಕೆ ತಳ್ಳುವ ಹುನ್ನಾರವು ಗೋಚರಿಸುತ್ತದೆ. ಅಂದರೆ ಶೈಕ್ಷಣಿಕ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನುಭವಗಳನ್ನು ಒಳಗೊಂಡ ನೂರಾರು ತಜ್ಞರ ಚಿಂತನ–ಮಂಥನ ದಿಂದ ರೂಪಿಸಲಾದ ಪಠ್ಯಕ್ರಮಗಳನ್ನು ಕಸದ ಬುಟ್ಟಿಗೆ ತಳ್ಳಿ ಸಂಘಪರಿವಾರ ಪ್ರಣಿತ ಕಪೋಲ ಕಲ್ಪಿತ ಬೋಧನೆಗಳನ್ನು ಕಲಿಸುವ ಉದ್ದೇಶವಿದೆ.

ಅಪಾರ ತಪ್ಪುಗಳುಳ್ಳ ಹೊಸ ಪರಿಷ್ಕರಣೆಯನ್ನು ರದ್ದುಗೊಳಿಸಿ ಹಿಂದಿನದನ್ನೇ ಮುಂದುವರಿಸ ಬೇಕಿತ್ತು. ಆದರೆ ಮುಖ್ಯಮಂತ್ರಿ ಹಾಗೂ ಶಿಕ್ಷಣ ಮಂತ್ರಿಗಳು ನೀಡಿದ ನಿರ್ಧಾರದ ಟಿಪ್ಪಣೆಯಲ್ಲಿ ಚಕ್ರತೀರ್ಥರ ಪರಿಷ್ಕಣೆಯಲ್ಲಿ ಆದ ಬಹು ದೊಡ್ಡ ಪ್ರಮಾದಗಳನ್ನು ಸರಿಪಡಿಸುವ ಚಿಂತನೆಯ ಯಾವ ಒಂದು ಸಣ್ಣ ಎಳೆಯೂ ಅಲ್ಲಿಲ್ಲ. ವಿಕೃತ ಮನಸ್ಸಿನ ಚಕ್ರತೀರ್ಥರ ಹುಚ್ಚಾಟಗಳಿಗೆ ಛೀಮಾರಿ ಹಾಕುವ, ಪ್ರಮಾದಗಳನ್ನು ಸರಿಪಡಿಸುವ ಬದಲು ಸಮಿತಿಯ ಕಾರ್ಯ ಮುಗಿದಿರುವುದರಿಂದ ವಿಸರ್ಜಿಸಲಾಗಿದೆ ಎನ್ನುವ ತಾಂತ್ರಿಕ ನಿರ್ಧಾರದಿಂದ ಚಕ್ರತೀರ್ಥ ಸಮಿತಿಯ ಪಠ್ಯಗಳನ್ನೇ ಒಪ್ಪಿ ಬೋಧಿಸುವ ಮಾನ್ಯತೆಯನ್ನು ನೀಡಲಾಗಿದೆ. ಈ ಫಠ್ಯಗಳು ವಿದ್ವಾಂಸರ ಚಿಂತನ ಮಂಥನಗಳಿಂದ ರೂಪುಗೊಳ್ಳದೇ ಕೇಶವ ಶಿಲ್ಪದ ಕಾಷ್ಟದಲ್ಲಿ ಎರಕ ಹೊಯ್ದು ಹೊರ ಬಂದಂತಿವೆ. ಮುಖ್ಯಮಂತ್ರಿಗಳ ನಿರ್ಧಾರವು ನಾಡಿನ ಹಿರಿಯ ಸಾಹಿತಿಗಳು, ಚಿಂತಕರ ಜಾಗೃತಿ ಮತ್ತು ವಿವೇಕದ ಮಾತುಗಳನ್ನು ಧಿಕ್ಕರಿಸಿ ಆರೆಸ್ಸೆಸ್ ಸಿದ್ಧಾಂತಕ್ಕೆ ಪುರಸ್ಕಾರ ನೀಡಿದೆ. ಇಂತಹ ಪಠ್ಯಗಳಿಂದ ನಮ್ಮ ನಾಡು, ನುಡಿ ಮತ್ತು ಮಕ್ಕಳ ಭೌದ್ಧಿಕತೆ ಏನಾದೀತು ಎನ್ನುವ ಕನಿಷ್ಠ ಕಾಳಜಿಯೂ ಇವರಲ್ಲಿ ಇಲ್ಲವಾಗಿರುವುದು ಸಾಹಿತಿ ದೇವನೂರರು ಹೇಳಿದಂತೆ ಕೇಡಿನ ಸಂಕೇತ.

ಈಗಲೂ ಕುವೆಂಪು, ಬಸವಣ್ಣ ನವರ ಕುರಿತ ಆಕ್ಷೇಪಗಳನ್ನು ಪರಿಶೀಲಿಸಿ ಸರಿ ಪಡಿಸುವ, ಕೆಂಪೇಗೌಡರ ಪಾಠ ಸೇರಿಸುವ, ಮಾತುಗಳು ಲಿಂಗಾಯತ, ಒಕ್ಕಲಿಗ ಜಾತಿಗಳ ಜನರನ್ನು ಯಾಮಾರಿಸುವ ಕಣ್ಣೊರೆಸುವ ಉದ್ದೇಶದ್ದಷ್ಟೇ. ಇಂತಹ ಗಿಮಿಕ್ ತಂತ್ರಗಳಿಗೆ ಜನತೆ ಬಲಿಯಾಗಬಾರದು. ಸರಕಾರದ ಈಗಿನ ನಿರ್ಧಾರ ಎಳ್ಳಷ್ಟೂ ಒಪ್ಪುವಂತಹುದಲ್ಲ. ಈಗಾಗಲೇ ಪುಸ್ತಕಗಳು ಮದ್ರಣ ಆಗಿದ್ದು ವಿತರಣೆ ಮಾಡಲಾಗುವುದು ಎಂದು ಶಿಕ್ಷಣ ಸಚಿವರು ಹೇಳಿರುವಾಗ ಮು.ಮಂ.ಹೇಳಿದ ಪರಿಷ್ಕರಣೆಯಾದರೂ ಹೇಗೆ ಸಾಧ್ಯ? ಇಷ್ಟೊಂದು ಗೊಂದಲ, ಗೋಜಲಿನ ನಡುವೆ ಶೈಕ್ಷಣಿಕ ವಾತಾವರಣಕ್ಕೂ, ಕಲಿಕೆಗೂ ಮಾರಕವಾಗಿರುವ ಈ ಇಡೀ ಪರಿಷ್ಕೃತ ಪಠ್ಯಗಳನ್ನು ರದ್ದುಗೊಳಿಸಿ ಪ್ರೊ.ಬರಗೂರು ನೇತೃತ್ವದ ಸಮಿತಿಯ ಹಿಂದಿನ ಪಠ್ಯಗಳನ್ನೇ ಮುಂದುವರಿಸಬೇಕು. ಅದಕ್ಕಾಗಿ ಜನತೆಯ ಆಂದೋಲನ ವ್ಯಾಪಕವಾಗಿ ಮುಂದುವರಿಯಬೇಕು. ಸರಕಾರ ಒಪ್ಪಿರುವ ಪಠ್ಯಗಳ ಹೂರಣ, ಅದರ ಉದ್ದೇಶಗಳನ್ನು ಜನರೆದುರು ತೆರೆದಿಡುವಂತಹ ಪ್ರಯತ್ನಗಳೂ ಸಾಗಬೇಕು. ಇವೆಲ್ಲವೂ ಭಂಡ ಸರಕಾರಕ್ಕೆ ಬುದ್ದಿ ಕಲಿಸುವ ರಾಜಕೀಯ ಪ್ರತಿಕ್ರಿಯೆಯಾಗಬೇಕು.

ಪಠ್ಯ ಪರಿಷ್ಕರಣೆ ವಿವಾದ: ತಪ್ಪು ಮಾಹಿತಿಗಳ ಬಗ್ಗೆ ಸ್ಪಷ್ಟನೆ ನೀಡಿದ ಬರಗೂರು ರಾಮಚಂದ್ರಪ್ಪ




ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಮರು ಪರಿಷ್ಕರಣಾ ಸಮಿತಿ ನಡೆಸಿದ ಪಠ್ಯಗಳ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆಗೊಳಿಸಿರುವ ಹೇಳಿಕೆಗೆ ಸಂಬಂಧಿಸಿದಂತೆ, ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪಠ್ಯ ಪರಿಷ್ಕರಣೆಯಲ್ಲಿ ಆದ ಕೆಲವೊಂದು ತಪ್ಪುಗಳ ಪಟ್ಟಿಯನ್ನು ಮಾಡಿ ಹೇಳಿಕೆಯನ್ನು ಬಿಡುಗಡೆಗೊಳಿಸಿದ್ದಾರೆ.

ಪಠ್ಯ ಪರಿಷ್ಕರಣೆ ಗೊಂದಲದ ಬಗ್ಗೆ ಪ್ರತಿಕ್ರಿಯೆ ನೀಡಿದ ಬರಗೂರು ರಾಮಚಂದ್ರಪ್ಪ, ಮುಖ್ಯಮಂತ್ರಿ ಹೇಳಿಕೆಯಲ್ಲಿರುವ ತಪ್ಪು ಮಾಹಿತಿಗಳ ಬಗ್ಗೆ ಪಟ್ಟಿ ಮಾಡಿದ್ದೇನೆ. ಬಸವಣ್ಣ, ಕುವೆಂಪು ತತ್ವಗಳಿಗೆ ವಿರುದ್ಧವಾಗಿ ಪಠ್ಯಪರಿಷ್ಕರಣೆ ಮಾಡಲಾಗಿದೆ. ಪರಿಷ್ಕರಣೆ ವಿರೋಧಿಸುತ್ತಿರುವವರನ್ನು ಕರೆದು ಚರ್ಚಿಸಬೇಕು. ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಒತ್ತಾಯಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ ಅವರು ಪಟ್ಟಿ ಮಾಡಿರುವ ತಪ್ಪುಗಳ ಪಟ್ಟಿ ಹೀಗಿವೆ;

1. ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರು ಮತ್ತು ನಾಡಿನ ಇತರೆ ಸ್ವಾಮೀಜಿಯವರು ಬಸವಣ್ಣನವರ ವಿಷಯದಲ್ಲಿ ಎತ್ತಿದ ಪ್ರಶ್ನೆಗೆ 'ಪ್ರೊ.ಬರಗೂರು ರಾಮಚಂದ್ರಪ್ಪ ಇವರ ಸಮಿತಿಯಿಂದ ರಚಿತವಾದ ಪಠ್ಯಪುಸ್ತಕ ಹಾಗೂ ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ಸಾಮಾನ್ಯ ಅಂಶಗಳಿವೆ' ಎಂದಿದ್ದಾರೆ. ವಾಸ್ತವ ಹೀಗಿದೆ: 6ನೇ ತರಗತಿಯ ಸಮಾಜ ವಿಜ್ಞಾನ ಭಾಗ–2ರಲ್ಲಿ ನಾವು ಅಳವಡಿಸಿದ್ದ ವಿವರಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಮರುಪರಿಷ್ಕರಣೆಯಲ್ಲಿ ಉಳಿಸಿಕೊಂಡಿದ್ದರೂ 9ನೇ ತರಗತಿಯ ಸಮಾಜ ವಿಜ್ಞಾನ– ಭಾಗ–1 ರಲ್ಲಿದ್ದ ಬಸವಣ್ಣನವರ ವಿವರಗಳಲ್ಲಿ ಕೆಲವು ಮುಖ್ಯ ಸಂಗತಿಗಳನ್ನು ಬಿಡಲಾಗಿದೆ. ಮರುಪರಿಷ್ಕರಣೆಯ ಪಠ್ಯದಲ್ಲಿ ಬಸವಣ್ಣನವರು ವೈದಿಕ ಮೂಲ ಮೌಢ್ಯಾಚರಣೆಗಳನ್ನು ವಿರೋಧಿಸಿದ್ದು, ಯಜ್ಞೋಪವೀತವನ್ನು ಕಿತ್ತೆಸೆದದ್ದು, ಉನ್ನತಾಧಿಕಾರದಲ್ಲಿದ್ದರೂ ಚಳವಳಿ ಕಟ್ಟಿದ್ದು, 'ದೇಹವೇ ದೇಗುಲ' ಎಂಬ ಹೊಚ್ಚ ಹೊಸ ಪರಿಕಲ್ಪನೆ ನೀಡಿದ್ದು, ಜನಸಾಮಾನ್ಯರಿಗೆ ತಲುಪುವ ಸರಳ ಕನ್ನಡದಲ್ಲಿ ವಚನಕಾರರು ಬರೆದದ್ದು–ಮುಂತಾದ ವಿಷಯಗಳನ್ನು ಮರುಪರಿಷ್ಕರಣೆಯಲ್ಲಿ ಬಿಡಲಾಗಿದೆ. ನಾವು ಪರಿಷ್ಕರಣೆ ಮಾಡಿದಾಗ ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕಕ್ಕೆ 'ಬಸವಣ್ಣನವರ ಜೀವನ ದರ್ಶನ' ಕುರಿತ ಹೊಸ ಪಾಠವನ್ನು ಸೇರಿಸಿದ್ದೆವು ಎಂಬ ವಿಷಯವನ್ನು ಇಲ್ಲಿ ತಿಳಿಸಬಯಸುತ್ತೇನೆ.
2. ರಾಷ್ಟ್ರಕವಿ ಕುವೆಂಪು ಅವರ ಹತ್ತು ರಚನೆಗಳು ಮರುಪರಿಷ್ಕರಣೆಯ ಒಟ್ಟು ಕನ್ನಡ ಭಾಷಾ ಪಠ್ಯಗಳಲ್ಲಿ ಇರುವುದು ನಿಜ, ನಾವು ಪರಿಷ್ಕರಣೆ ಮಾಡಿದಾಗ ಮೂಲ ಪಠ್ಯಪುಸ್ತಕದಲ್ಲಿ ಇಲ್ಲದ ಕೆಲವು ಮುಖ್ಯ ಸಾಹಿತಿಗಳ ಪಾಠ ಸೇರಿಸುವುದಕ್ಕಾಗಿ ಸಾಮಾನ್ಯ ಮಾನದಂಡವನ್ನು ರೂಪಿಸಿಕೊಂಡೆವು. ರಾಷ್ಟ್ರಕವಿ ಕುವೆಂಪು ಅವರ ಅಪೂರ್ವ ಸಾಧನೆಗೆ ಚ್ಯುತಿಯುಂಟು ಮಾಡದೆ, ಮೂಲ ಪಠ್ಯಪುಸ್ತಕಗಳಲ್ಲಿ ಇಲ್ಲದೆ ಇದ್ದ, ಕಲ್ಯಾಣ ಕರ್ನಾಟಕದ ಸಿಂಪಿ ಲಿಂಗಣ್ಣ, ಶಾಂತರಸ, ಚೆನ್ನಣ್ಣ ವಾಲೀಕಾರ ಅವರಲ್ಲದೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೋಪಾಲಕೃಷ್ಣ ಅಡಿಗ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಕೆಲವು ಲೇಖಕಿಯರ ಪಾಠಗಳನ್ನು ಸೇರಿಸಿದೆವು. ಈ ನಮ್ಮ ನಡೆಯು ಕುವೆಂಪು ಅವರ ಅಖಂಡ ಕರ್ನಾಟಕ ಪರಿಕಲ್ಪನೆ ಮತ್ತು ಸಾಮಾಜಿಕ ನ್ಯಾಯ ಕಲ್ಪನೆಗೆ ಅನುಗುಣವಾಗಿತ್ತು. ಇಲ್ಲಿಯೇ ಒಂದು ಮಾತು: ಕುವೆಂಪು ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ನೀಡಿದ ಸಂಖ್ಯಾ ಮಾಹಿತಿಯಿಂದ, ನಾಡಗೀತೆ, ನಾಡಧ್ವಜ, ಕನ್ನಡ ಭಾಷೆಗಳಿಗೆ ಮಾಡಿದ ಅವಮಾನಕ್ಕೆ ಖಂಡಿತ ರಿಯಾಯಿತಿ ಸಿಗುವುದಿಲ್ಲ.
3. ಇನ್ನು ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೊಸದಾಗಿ ಪಾಠ ಸೇರಿಸಿರುವುದಾಗಿ ಹೇಳಿದ್ದಾರೆ. ವಾಸ್ತವವೆಂದರೆ, 7ನೇ ತರಗತಿಯ ಸಮಾಜ ವಿಜ್ಞಾನ ಭಾಗ–1 ರಲ್ಲಿ 'ಯಲಹಂಕ ನಾಡಪ್ರಭುಗಳು' ಎಂಬ ಪಾಠವನ್ನು ನಮ್ಮ ಪರಿಷ್ಕರಣೆಯ ಕಾಲದಲ್ಲೇ ಸೇರಿಸಿದ್ದೇವೆ. ಕೆಂಪೇಗೌಡರ ವಂಶಾವಳಿ ಮತ್ತು ಆಳ್ವಿಕೆಯ ವಿವರಗಳನ್ನು ನೀಡಿದ್ದೇವೆ ಆದರೆ ಮರುಪರಿಷ್ಕರಣೆಯಲ್ಲಿ ನಾವು ಕೊಟ್ಟಿದ್ದ ವಿವರಗಳನ್ನು ಕಡಿತ ಮಾಡಲಾಗಿದೆ. ಜೊತೆಗೆ ಯಲಹಂಕ ನಾಡಪ್ರಭುಗಳ ಆಳ್ವಿಕೆಯ


ಪುಟ 4 ಕ್ಕೆ



ಪ್ರೊ. ಬರಗೂರು ರಾಮಚಂದ್ರಪ್ಪ
Prof. Baraguru Ramachandrappa

ಪತ್ರಿಕಾ ಪ್ರಕಟಣೆ

ಮಾನ್ಯ ಮುಖ್ಯಮಂತ್ರಿಯವರು ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯ ಕೆಲವು ಅಂಶಗಳಿಗೆ ಸ್ಪಷ್ಟನೆ ನೀಡುವುದು ಅನಿವಾರ್ಯವಾಗಿದೆ.



2

4. ಇನ್ನು ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ತಿಳಿಸಲೇಬೇಕಾಗಿದೆ. ಪರಿಷ್ಕರಣೆ ಎಂದಾಗ ಕೆಲವನ್ನು ಬಿಡುವುದು ಮತ್ತು ಸೇರಿಸುವುದು ಇರುತ್ತದೆ. ಆದರೆ ಈ ಕ್ರಿಯೆಗೆ ನ್ಯಾಯಸಮ್ಮತ ಮಾನದಂಡವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಂಥದೊಂದು ನ್ಯಾಯಸಮ್ಮತ ಮಾನದಂಡವು ಮರುಪರಿಷ್ಕರಣೆಯಲ್ಲಿ ಕಾಣಿಸುವುದಿಲ್ಲ. ಕನ್ನಡ ಭಾಷಾ ಪಠ್ಯಗಳಲ್ಲಿ ದೇವನೂರರನ್ನು ಹೊರತುಪಡಿಸಿ ಎಲ್ಲಾ ದಲಿತ ಮೂಲದ ಸಾಹಿತಿಗಳ ರಚನೆಗಳನ್ನು ತೆಗೆಯಲಾಗಿದೆ. ಬಹುಪಾಲು ಮಹಿಳಾ ಸಾಹಿತಿಗಳ ರಚನೆಗಳನ್ನು ಬಿಡಲಾಗಿದೆ.

(ಬರಗೂರು ರಾಮಚಂದ್ರಪ್ಪ)

ಜನ ವಿರೋಧಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಹಾಗೂ ಅದರ ಪಠ್ಯಕ್ರಮಗಳನ್ನು ರದ್ದುಪಡಿಸಿ – ಸಿಪಿಐ(ಎಂ)

ನಾಡಿನ ಗಣ್ಯ ಸಾಹಿತಿಗಳು, ಪ್ರಗತಿಪರರು, ಸಂಘ ಸಂಸ್ಥೆಗಳು ರಾಜ್ಯದಾದ್ಯಂತ ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿದ್ದರೂ, ಕರ್ನಾಟಕ ಸರಕಾರ ನಾಚಿಕೆ ಇಲ್ಲದೇ ಪಠ್ಯ ಪುಸ್ತಕ ಪರಿಸ್ಕರಣೆ ಸಮಿತಿಯನ್ನು ಮತ್ತು ಅದು ಮಾಡಿದ ಪರಿಷ್ಕರಣ ಪಠ್ಯ ಕ್ರಮಗಳನ್ನು ಕೈ ಬಿಡದೇ ಮುಂದು ವರೆಸುತ್ತಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ ಮತ್ತು ಈ ಕೂಡಲೆ ಪರಿಷ್ಕರಿಸಿದ ಪಠ್ಯ ಕ್ರಮಗಳನ್ನು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯನ್ನು ಈ ಕೂಡಲೇ ರದ್ದುಪಡಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ರವರು ನೀಡಿದ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಮೊದಲ ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದ, ನಾಡಿನ ಗಣ್ಯ ಮಾನ್ಯರಾದ ಡಾ. ಕುವೆಂಪುರವರ ಕುರಿತಂತೆ ಮತ್ತು ಅವರ ನಾಡ ಗೀತೆಯ ಕುರಿತಂತೆ ನಿಂದನೆ ಹಾಗೂ ಅಪಮಾನ ಮಾಡುವುದೆಂದರೆ ನಾಡಿಗೆ ಅಪಮಾನ ಮಾಡಿದಂತೆ, ಇಂತಹವರನ್ನು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರನ್ನಾಗಿಸುವುದು ಮತ್ತು ನಿಂದಿಸಿದವರ ಮೇಲೆ ಯಾವುದೇ ಕಾನೂನಿನ ಕ್ರಮಗಳನ್ನು ತಗೆದುಕೊಳ್ಳದಿರುವುದು, ರಾಜ್ಯದ ಬಿಜೆಪಿ ಪಕ್ಷ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿಗೆ ಮತ್ತು ಪಠ್ಯಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿರುವುದು ಎಲ್ಲವೂ ಪುಂಡಾಟಿಕೆಯನ್ನು ಸಮರ್ಥಿಸುವಂತಿವೆ ಮತ್ತು ನಾಡಿನ ಗಣ್ಯರನ್ನು ದುರುದ್ದೇಶದಿಂದಲೇ ಅಪಮಾನ ಮಾಡಲಾಗಿದೆಯೆಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ತನ್ನ ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿದೆ.

ರೈತ ನಾಯಕ ರಾಕೇಶ್ ಟಿಕಾಯತ್ ಮತ್ತು ಇತರ ಮೇಲಿನ ಗೂಂಡಾ ಧಾಳಿ – ಸಿಪಿಐ(ಎಂ) ಖಂಡನೆ

ನೆನ್ನೆ ದಿನ ಬೆಂಗಳೂರಿನ ಗಾಂಧೀ ಭವನದಲ್ಲಿ ಪತ್ರಿಕಾ ಗೋಷ್ಟಿಗೆ ಮುಂದಾಗುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚದ ಪ್ರಮುಖ ನಾಯಕರಾದ ಶ್ರೀ ರಾಕೇಶ್ ಸಿಂಗ್ ರಿಕಾಯತ್ ಹಾಗೂ ಶ್ರೀ ಯುದ್ಧವೀರ ಸಿಂಗ್ ಮುಂತಾದ ನಾಯಕರ ಮೇಲೆ ಕೆಲ ಬಿಜೆಪಿಯ ಹಾಗೂ ಆರ್ ಎಸ್ ಎಸ್ ಮೂಲದ ಗುಂಡಾಗಳು ಧಾಳಿ ನಡೆಸಿ ಹಲ್ಲೆ ಮಾಡಿರುವುದನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ ಮತ್ತು ಕೂಡಲೇ ಧಾಳಿಯಲ್ಲಿ ತೊಡಗಿದ ಗುಂಡಾಗಳನ್ನು ಬಂಧಿಸಿ, ಕ್ರಿಮಿನಲ್ ಕೇಸ್ ದಾಖಲಿಸಿ ಕಾನೂನಿನ ಕ್ರಮ ವಹಿಸಲು ಒತ್ತಾಯಿಸಿದೆ.

ದೇಶದ ರೈತ ಚಳುವಳಿಯ ಒತ್ತಡದ ಹಿನ್ನೆಲೆಯಲ್ಲಿ ಸ್ವತಃ ಪ್ರಧಾನ ಮಂತ್ರಿಗಳು ಜಗತ್ತಿನ ಮುಂದೆ ತಪ್ಪಾಗಿದೆಯೆಂದು ಕೈ ಮುಗಿದು ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಮತ್ತು ರೈತ ವಿರೋಧಿಯಾದ ಕೃಷಿಕಾಯ್ದೆಗಳನ್ನು ವಾಪಾಸು ಪಡೆದು ಕೊಂಡ ನಂತರ ಬಿಜೆಪಿ ಹಾಗೂ ಆರ್.ಎಸ್.ಎಸ್. ಹತಾಷೆ ಗೊಂಡಿರುವುದನ್ನು ಈ ಧಾಳಿ ತೋರಿಸುತ್ತದೆ ಎಂದು ಸಿಪಿಐ(ಎಂ) ವಿಶ್ಲೇಷಿಸಿದೆ.

ಜಾತ್ಯಾತೀತ ಶಕ್ತಿಗಳನ್ನು ದುರ್ಬಲ ಗೊಳಿಸುವ ಕುತಂತ್ರವನ್ನು ಸೋಲಿಸಲು ರಾಜ್ಯದ ಜನತೆಗೆ ಸಿಪಿಐ(ಎಂ) ಕರೆ

ಬಿಜೆಪಿ ಹಾಗೂ ಆರ್.ಎಸ್.ಎಸ್. ಮತ್ತು ಮುಸ್ಲಿಂ ಕೋಮುವಾದಿ ಶಕ್ತಿಗಳು ಮುಂಬರುವ ಚುನಾವಣೆಗಳಲ್ಲಿ ಜಾತ್ಯಾತೀತ ಶಕ್ತಿಗಳನ್ನು ದುರ್ಬಲಗೊಳಿಸುವ ಹುನ್ನಾರವನ್ನು ರಾಜ್ಯದ ಜನತೆ ಪ್ರಬುದ್ಧತೆಯಿಂದ ಸೋಲಿಸಬೇಕೆಂದು ರಾಜ್ಯದ ಜನತೆಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಹಿಂದುತ್ವವಾದಿ ಮತಾಂಧಶಕ್ತಿಗಳು ರಾಜ್ಯವನ್ನು ಲೂಟಿಗೀಡುವ ಲೂಟಿಕೋರರೊಂದಿಗೆ ಕೈ ಜೋಡಿಸಿ ಅವರ ಲೂಟಿಕೋರ ನೀತಿಗಳಾದ ಮೂರು ರೈತ ವಿರೋದಿ ಕಾಯ್ದೆಗಳು ಹಾಗೂ ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳು ಅಲ್ಲದೇ ಮಹಿಳೆಯರು, ದಲಿತರು ಹಾಗೂ ಎಲ್ಲ ಬಡವರ ವಿರೋಧಿಯಾದ ಲೂಟಿಕೋರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಸಂರಕ್ಷಣೆಗೆ ನಿಂತು ಜನತೆಯನ್ನು ವಿಭಜಿಸಿ ಆಳುವ ಕೆಲಸವನ್ನು ಬಲ ಪಡಿಸಿವೆ. ಇದಕ್ಕೆ ಮುಸ್ಲಿಂ ಕೋಮುವಾದಿ ಶಕ್ತಿಗಳು ಕೈ ಜೋಡಿಸಿ, ರಾಜ್ಯದಲ್ಲಿ ಕೋಮುವಾದ ಹರಡುವಿಕೆಗೆ ಮತ್ತು ಆ ಮೂಲಕ ಜನತೆಯ ನಿಜವಾದ ಪ್ರಶ್ನೆಗಳು ನೇಪತ್ಯಕ್ಕೆ ಸರಿಯುವಂತೆ ಮಾಡುವಲ್ಲಿ ಶ್ರಮಿಸುತ್ತಿವೆ. ಆ ಮೂಲಕ ಜಾತ್ಯಾತೀತ ಶಕ್ತಿಗಳನ್ನುವದುರ್ಬಲಗೊಳಿಸುವ ಹುನ್ನಾರ ಹೆಣೆದಿವೆ.

ರಾಜ್ಯ ಸರಕಾರವೂ ಕೂಡಾ ಭಾರತದ ಸಂವಿಧಾನ ವಿರೋಧಿ ನಡೆಗಳನ್ನು ಜನತೆಯ ಪ್ರಜಾಪ್ರಭುತ್ವ ಹಾಗೂ ಬದುಕುವ ಹಕ್ಕುಗಳ ಮೇಲೆ ಧಾಳಿಯನ್ನು ಮುನ್ನಡೆಸಿದೆ. ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಹಾಗೂ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಸುಗ್ರೀವಾಜ್ಞೆಗಳನ್ನು ಈ ದಿಶೆಯಲ್ಲಿ ಗಮನಿಸಬಹುದು. ಈಗ ಪಠ್ಯ ಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ಮುಗ್ಧ ಮಕ್ಕಳ ಮನಸ್ಸುಗಳ ಮೇಲೆ ಕೋಮುವಾದ ಹೇರುವ ತಂತ್ರಗಳನ್ನು ಹೆಣೆದಿದೆ.

ನಾಡಿನ ಗಣ್ಯ ಸಾಹಿತಿಗಳು ಈ ಪರಿಷ್ಕರಣೆಯನ್ನು ತೀವ್ರವಾಗಿ ಪ್ರತಿರೋಧಿಸುತ್ತಿದ್ದಾರೆ. ಕವಿತೆ, ಪಠ್ಯಗಳಿಗೆ ತಮ್ಮ ಲೇಖನಗಳನ್ನು ಒದಗಿಸಿದ್ದ ಲೇಖಕರು ತಮ್ಮವಕೊಡುಗೆಗಳನ್ನು ವಾಪಾಸು ಪಡೆದಿದ್ದಾರೆ. ಇಷ್ಠಾದರೂ ಅವುಗಳನ್ನು ವಾಪಾಸು ಪಡೆಯದಿರುವುದು ನಾಚಿಕೆಗೇಡಿನ ವಿಚಾರವಾಗಿದೆ. ಮಾತ್ರವಲ್ಲಾ ಶಾಂತಿಯುತವಾಗಿ ಪ್ರತಿಭಟನೆ ನಿರತರನ್ನು ಅವಾಚ್ಯವಾಗಿ ನಿಂದಿಸುವುದನ್ನು ಮತ್ತು ದಾರಿತಪ್ಪಿಸಿ ಹೊಸ ವಿಷಯಗಳ ಕಡೆ ಗಮನಸೆಳೆಯುವ ಕುತಂತ್ರವನ್ನು ಸಿಪಿಐಎಂ ಖಂಡಿಸುತ್ತದೆ. ಕೂಡಲರ ಪರಿಷ್ಕೃತ ಪಠ್ಯಕ್ರಮವನ್ನು ವಾಪಾಸು ಪಡೆದು ಹಳೆಯ ಪಠ್ಯ ಕ್ರಮವನ್ನು ಮುಂದುವರೆಸಲು ಮತ್ತು ರಾಷ್ಟ್ರ ಕವಿ ಕುವೆಂಪುರಚರನ್ನು ನಿಂದಿಸಿದವರ ನೆರತೃತ್ವದಲ್ಲಿರುವ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯನ್ನು ರದ್ದು ಪಡಿಸುವಂತೆ ಒತ್ತಾಯಿಸಿದೆ.

ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ ಸಿಪಿಐಎಂ ಪ್ರಚಾರಾಂದೋಳನ

ಎರಡು ದಿನಗಳ ಕಾಲ ಮಂಗಳೂರಿನಲ್ಲಿ ನಡೆದ ಮುಸ್ಲಿಂ ಅಲ್ಪ ಸಂಖ್ಯಾತರ ಹಕ್ಕುಗಳ ವಿಷಯದಲ್ಲಿ ಸಂಘಟಿಸಲಾಗಿದ್ದ ಸಿಪಿಐ(ಎಂ) ಸಮಾವೇಶವು ರಾಜ್ಯದಾದ್ಯಂತ ಅಲ್ಪ ಸಂಖ್ಯಾತರ ಮತ್ತು ಮುಸ್ಲಿಂ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಾದ್ಯಂತ ವ್ಯಾಪಕವಾಗಿ ಪ್ರಚಾರಾಂದೋಳವನ್ನು ಮತ್ತು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆಯನ್ನು ಮುಂಬರುವ ಫೆಬ್ರವರಿಯಲ್ಲಿ ಸಂಘಟಿಸಲು ನಿರ್ಧರಿಸಿದೆ.

ತಪ್ಪು ಮಾಹಿತಿಗಳ ಬಗ್ಗೆ ಸ್ಪಷ್ಟನೆ ನೀಡಿದ ಬರಗೂರು ರಾಮಚಂದ್ರಪ್ಪ............. ಪುಟ 3 ರಿಂದ

ವಿಸ್ತೀರ್ಣವನ್ನು ಬೆಂಗಳೂರು ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ನಮ್ಮ ಪರಿಷ್ಕರಣೆ ಪಠ್ಯದಲ್ಲಿ ಬೆಂಗಳೂರು, ರಾಮನಗರ, ತುಮಕೂರು, ಅವಿಭಜಿತ ಕೋಲಾರ ಜಿಲ್ಲೆಗಳು ಕೂಡ ನಾಡಪ್ರಭು ಕೆಂಪೇಗೌಡರ ಆಳ್ವಿಕೆಗೆ ಒಳಪಟ್ಟಿದ್ದನ್ನು ವಿವರಿಸಲಾಗಿತ್ತು. ಇದನ್ನು ಮರುಪರಿಷ್ಕರಣೆಯಲ್ಲಿ ಬಿಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುವ ಹೊಸಪಾಠವನ್ನು ಎಲ್ಲಿ ಸೇರಿಸಿದ್ದಾರೆಂದು ಸ್ಪಷ್ಟವಿಲ್ಲ.

4. ಇನ್ನು ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ತಿಳಿಸಲೇಬೇಕಾಗಿದೆ. ಪರಿಷ್ಕರಣೆ ಎಂದಾಗ ಕೆಲವನ್ನು ಬಿಡುವುದು ಮತ್ತು ಸೇರಿಸುವುದು ಇರುತ್ತದೆ. ಆದರೆ ಈ ಕ್ರಿಯೆಗೆ ನ್ಯಾಯಸಮ್ಮತ ಮಾನದಂಡವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಂಥದೊಂದು ನ್ಯಾಯಸಮ್ಮತ ಮಾನದಂಡವು ಮರುಪರಿಷ್ಕರಣೆಯಲ್ಲಿ ಕಾಣಿಸುವುದಿಲ್ಲ. ಕನ್ನಡ ಭಾಷಾ ಪಠ್ಯಗಳಲ್ಲಿ ದೇವನೂರರನ್ನು ಹೊರತುಪಡಿಸಿ ಎಲ್ಲಾ ದಲಿತ ಮೂಲದ ಸಾಹಿತಿಗಳ ರಚನೆಗಳನ್ನು ತೆಗೆಯಲಾಗಿದೆ. ಬಹುಪಾಲು ಮಹಿಳಾ ಸಾಹಿತಿಗಳ ರಚನೆಗಳನ್ನು ಬಿಡಲಾಗಿದೆ. ಬುದ್ಧ, ಅಂಬೇಡ್ಕರ್ ಅಂಥವರ ವಸ್ತುವುಳ್ಳ ಕವನಗಳನ್ನು ಕೈಬಿಡಲಾಗಿದೆ. 6ನೇ ತರಗತಿಯ ಸಮಾಜ ವಿಜ್ಞಾನದಿಂದ ಬೌದ್ಧಧರ್ಮ ಮತ್ತು ಜೈನಧರ್ಮದ ವಿವರಗಳನ್ನು ತೆಗೆಯಲಾಗಿದೆ. ನಾವು ಹೊಸದಾಗಿ ಸೇರಿಸಿದ್ದ ಸಾವಿತ್ರಿಬಾಯಿ ಫುಲೆ ಮುಂತಾದ ಸುಧಾರಕಿಯರ ಪಾಠಕ್ಕೆ ಕೊಕ್ ಕೊಡಲಾಗಿದೆ. ಅಂಬೇಡ್ಕರ್ ಅವರ ಮಹಾಡ್ ಸತ್ಯಾಗ್ರಹ, ನಾಸಿಕ್ ದೇವಾಲಯ ಪ್ರವೇಶದಂತಹ ಅನೇಕ ಸಾಲುಗಳು ಮರುಪರಿಷ್ಕರಣೆಯಲ್ಲಿ ಇಲ್ಲವಾಗಿವೆ. ನಾವು ಸೇರಿಸಿದ್ದ ನಾರಾಯಣ ಗುರು ಕುರಿತ ಪಾಠವನ್ನು ಬಿಟ್ಟಿದ್ದು ಮತ್ತೆ ಸೇರಿಸುವುದಾಗಿ ಹೇಳುತ್ತಿದ್ದಾರೆ. ಇಲ್ಲಿ ತೆಗೆದದ್ದು, ಸೇರಿಸಿದ್ದು ಯಾರನ್ನು ಮತ್ತು ಎಂಥ ಪಾಠವನ್ನು ಎಂಬುದನ್ನು ಪರಿಶೀಲಿಸಬೇಕು.

ಈ ಎಲ್ಲ ಅಂಶಗಳ ಆಧಾರದ ಮೇಲೆ ಹೇಳುವುದಾದರೆ ಇದು ದಲಿತ ವಿರೋಧಿ, ಮಹಿಳಾ ವಿರೋಧಿ ಮತ್ತು ಸಂವಿಧಾನಾತ್ಮಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ವಿರೋಧಿ ಕ್ರಮವಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಗೌಣವಾಗಿದೆ. ಅಷ್ಟೇ ಅಲ್ಲ, ಬಸವಣ್ಣ, ಕುವೆಂಪು ಅವರ ಆದರ್ಶಕ್ಕೂ ವಿರುದ್ಧವಾಗಿದೆ.

ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಚಿವರ ಮಾಹಿತಿ ಆಧರಿಸಿ ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಆದರೆ ಪ್ರತಿರೋಧಿಸುತ್ತಿರುವ ಸಂಸ್ಥೆ ಹಾಗೂ ವ್ಯಕ್ತಿಗಳನ್ನು ಕರೆದು ಮಾತಾಡಿ ತೀರ್ಮಾನಕ್ಕೆ ಬರುವುದು ಪ್ರಜಾಸತ್ತಾತ್ಮಕ ಸರ್ಕಾರದ ಜವಾಬ್ದಾರಿ. ಆದ್ದರಿಂದ ಇಲ್ಲದಿದ್ದರೆ ಏಕಪಕ್ಷೀಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮರುಪರಿಷ್ಕರಣೆ ವಿರೋಧಿಸುತ್ತಿರುವವರನ್ನು ಮಾತುಕತೆಗೆ ಆಹ್ವಾನಿಸಬೇಕೆಂದು ಬಯಸುತ್ತೇನೆ ಎಂದು ಬರಗೂರು ರಾಮಚಂದ್ರಪ್ಪ ಬಹಿರಂಗ ಹೇಳಿಕೆ ನೀಡಿದ್ದಾರೆ.



ಪಠ್ಯಪುಸ್ತಕ ಪರಿಷ್ಕರಣೆ ನಾಡು–ನುಡಿಗೆ ಎಸಗಿರುವ ದ್ರೋಹ–ಎಸ್‌ಎಫ್‌ಐ

ಭಾರತ ವಿದ್ಯಾರ್ಥಿ ಫೆಡರೇಶನ್ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕ್ಲಾಕ್ ಟವರ್ ಮಂಗಳೂರು ಬಳಿ ಅವೈಜ್ಞಾನಿಕ ರೀತಿಯ ಪಠ್ಯಪುಸ್ತಕ ಪರಿಷ್ಕರಣೆಯ ವಿರುದ್ಧ ಪ್ರತಿಭಟನೆಯನ್ನು ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐನ ಮಾಜಿ ಮುಖಂಡರಾದ ಮನೋಜ್ ವಾಮಂಜೂರು ಮಾತನಾಡುತ್ತಾ ರೋಹಿತ್ ಚಕ್ರತೀರ್ಥ ರವರ ಅಧ್ಯಕ್ಷತೆಯಲ್ಲಿ ನಡೆಸಿರುವ ಪಠ್ಯಪುಸ್ತಕ ಪರಿಷ್ಕರಣೆಯನ್ನು ನಾಡಿನ ಪ್ರಜ್ಞಾವಂತರು ಒಪ್ಪುವಂತಿಲ್ಲ.

ಇಲ್ಲಿನ ಸಮಾಜ ಸುಧಾರಕರಾದ ನಾರಾಯಣ ಗುರುಗಳನ್ನು, ಸ್ವಾತಂತ್ರ್ಯ ಹೋರಾಟದ ಧ್ರುವತಾರೆಯಾದ ಭಗತ್ ಸಿಂಗರ ಪಠ್ಯಗಳನ್ನು ತೆಗೆದಿರುವುದು ಖಂಡನೀಯ. ಮತ್ತು ಕನ್ನಡದ ಸಾಹಿತಿಕ ನೆಲೆಯ ಬಹುಮುಖ್ಯ ಭಾಗವಾಗಿರುವ ಪಿ.ಲಂಕೇಶ್, ಸಾರಾ ಅಬೂಬಕ್ಕರ್, ಜಿ. ರಾಮಕೃಷ್ಣರ ಪಠ್ಯಗಳನ್ನು ತೆಗೆದಿದ್ದು. ರಾಷ್ಟ್ರಕವಿ ಕುವೆಂಪುರವರನ್ನು ಮತ್ತು ನಾಡಗೀತೆಯನ್ನು ಅವಮಾನಿಸುತ್ತಾ ಬಂದಿರುವುದು ಕರುನಾಡಿನ ನಾಡು–ನುಡಿಗೆ ಎಸಗಿರುವ ದ್ರೋಹ ಎಂದು ಹೇಳಿದರು.





ಹಮಾಲಿ ಕಾರ್ಮಿಕರ ಜೊತೆ ಸರಕಾರದ ಚೆಲ್ಲಾಟ– ರಂಜಾನ್ ದರ್ಗಾ



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೃಷಿ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತಾಪಿ ವರ್ಗ ಮಾರುಕಟ್ಟೆಗೆ ಬರದಂತೆ ಮಾಡುತ್ತಿದ್ದಾರೆ ಇದರಿಂದ ರೈತರನ್ನೇ ನಂಬಿಕೊಂಡ ಹಮಾಲಿ ಕಾರ್ಮಿಕರು, ದಲ್ಲಾಳಿಗಳು ಹಾಗೂ ಅಧಿಕಾರಿ ಹಾಗೂ ನೌಕರರು ಕೆಲಸ ಕಳೆದುಕೊಳ್ಳುವ ಅಪಾಯ ಬಂದಿದೆ ಇದರ ವಿರುದ್ಧ ಒಂದು ಸಂಘಟಿತ ಚಳವಳಿ ನಡೆಸಬೇಕು ಎಂದು ಚಿಂತಕ ಡಾ ರಂಜಾನ್ ದರ್ಗಾ ಹೇಳಿದರು.

ಚಳ್ಳಕರೆ ನಗರದಲ್ಲಿ ನಡೆದ ಹಮಾಲಿ ಕಾರ್ಮಿಕರ 5 ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಶಾಂತಿಯ ಸಂಕೇತವಾದ ಪಾರಿವಾಳಗಳನ್ನು ಸ್ವಚ್ಛಂದವಾಗಿ ಆಕಾಶಕ್ಕೆ ಹಾರಿಬಿಡುವ ಮೂಲಕ ಉದ್ಘಾಟಿಸಲಾಯಿತು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿಸುಂದರಂ ಮಾತನಾಡಿ, ತೀವ್ರವಾಗಿ ಬೆಲೆಗಳ ಏರುತ್ತಿವೆ ಆದರೆ ಶ್ರಮಿಕ ವರ್ಗದ ಕೂಲಿಗಳು ಇಳಿಯುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸುವ ಈ ನೀತಿಗಳನ್ನು ಸೋಲಿಸದಿದ್ದಲ್ಲಿ ಕಾರ್ಮಿಕ ವರ್ಗದ ಮೇಲೆ ಮತ್ತಷ್ಟು ದಾಳಿಗಳನ್ನು ಭವಿಷ್ಯದಲ್ಲಿ ಎದುರಿಸಬೇಕಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ರಾಜ್ಯ ಕೃಷಿ ಮಾರುಕಟ್ಟೆ ಮಾರಾಟ ಮಂಡಳಿ ಮುಖ್ಯ ವ್ಯವಸ್ಥಾಪಕ ಶ್ರೀ ಚಂದ್ರಕಾಂತ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಂಡಳಿಯು ಶ್ರಮಿಕರ ಕಲ್ಯಾಣಕ್ಕಾಗಿ ಜಾರಿಗೊಳಿಸುತ್ತಿರುವ ಹಲವು ಯೋಜನೆಗಳ ಮಾಹಿತಿ ನೀಡಿದರು.

ಬಹಿರಂಗ ಸಭೆಗೂ ಮುನ್ನ ಬೃಹತ್ ರ್‍ಯಾಲಿ ನಡೆಯಿತು. ಮೆರವಣಿಗೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಬಾವುಟವನ್ನು ಹಮಾಲಿ ಸಂಘದ ಮುಖಂಡರಿಗೆ ವರ್ಗಾಹಿಸುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರವೀಶ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್, ಮೊದಲಾದವರು ಇದ್ದರು. ಅಧ್ಯಕ್ಷತೆಯನ್ನು ಫೆಡರೇಶನ್ ರಾಜ್ಯ ಅಧ್ಯಕ್ಷರಾದ ಕೆ. ಮಹಾಂತೇಶ ವಹಿಸಿದ್ದರು.

ಪಿಂಚಣಿ, ವಸತಿ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆಗಾಗಿ, ಕಾರ್ಮಿಕ ಕಾನೂನುಗಳ ರದ್ದತಿ ವಿರೋಧಿಸಿ ಹಾಗೂ ಸೌಹಾರ್ದ ಕರ್ನಾಟಕ ನಿರ್ಮಾಣದ ಉಳಿವಿಗಾಗಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿ ಫೆಡರೇಶನ್ (ರಿ) 5 ನೇ ರಾಜ್ಯ ಸಮ್ಮೇಳನ ಎರಡು ದಿನಗಳ ಕಾಲ ನಡೆಯಲಿದೆ.





ಕೇಂದ್ರ ಹಾಗು ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಯನ್ನು ಖಂಡಿಸಿ ದೇವದುರ್ಗ ತಾಲ್ಲೂಕ ಆಡಳಿತದ ಭ್ರಷ್ಟಾಚಾರ ಮತ್ತು ಅಕ್ರಮ ಚಟುವಟಿಕೆಗಳ ತಡೆಗಟ್ಟಲು ಒತ್ತಾಯಿಸಿ ದೇವದುರ್ಗ ಸಿಪಿಐ(ಎಂ) ಪಕ್ಷವು ಜನ ಜಾಗೃತಿ ಜಾಥವನ್ನು ನಡೆಸಿತು.

ನಾರಾಯಣ ಗುರುಗಳು ಬ್ರಾಹ್ಮಣ ಸಾಹಿತ್ಯವನ್ನು ಧಿಕ್ಕರಿಸಿ, ಜಾತಿಮತದ ಭೇದವನ್ನು ಧಿಕ್ಕರಿಸಿ ಐಕ್ಯತೆಯನ್ನು ಸಾರಿದ ಕುವೆಂಪುರವರು ಕೂಡ ಈ ಮಣ್ಣನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಬಣ್ಣಿಸಿದವರು ಹಾಗಾಗಿ ಇಂದಿನ ಕೋಮುವಾದಿ ಸರ್ಕಾರವು ಇವರನ್ನು ಅವಮಾನಿಸುತ್ತಿದೆ. ಶಿಕ್ಷಣ ತಜ್ಞರೇ ಅಲ್ಲದವರನ್ನು ಪುಸ್ತಕ ಪರಿಷ್ಕರಣ ಸಮಿತಿಯಲ್ಲಿ ಸೇರಿಸಿ ಈ ನಾಡಿನ ಶ್ರೀಮಂತ ಸಾಹಿತ್ಯವನ್ನು ಹೀಗಳೆಯುತ್ತಿದ್ದಾರೆ ಎಂದರು.

ದೇಶದ ಸ್ವಾತಂತ್ರ ಚಳುವಳಿಯ ಸಮಯದಲ್ಲಿ ಬ್ರಿಟಿಷರ ಜೊತೆಯಲ್ಲಿ ಶಾಮೀಲಾದ ಹೆಡಗೇವಾರ್ ರನ್ನು ರಾಷ್ಟ್ರ ನಾಯಕನೆಂದು ಬಿಂಬಿಸಿ ಪಠ್ಯಗಳಲ್ಲಿ ಸೇರಿಸಿರುವುದು ನಾಚಿಕೆಗೇಡು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)ನ ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕರಾದ ವಿನಿತ್ ದೇವಾಡಿಗ ಹೇಳಿದರು.

ಈ ಪ್ರತಿಭಟನಾ ಸಭೆಯಲ್ಲಿ ಸಹ ಸಂಚಾಲಕರಾದ ವಿನುಷ ರಮಣ ಭಟ್, ಮುಖಂಡರಾದ ತಿಲಕ್ ಕುತ್ತಾರ್, ಭಾಷಿತ್, ವಿಕಾಸ್ ಕುತ್ತಾರ್ ಮುಂತಾದವರು ಉಪಸ್ಥಿತರಿದ್ದರು.

ಭಿನ್ನಾಭಿಪ್ರಾಯಗಳನ್ನು 'ಟೂಲ್ಕಿಟ್' ಎಂದು ರಾಜಕೀಯಗೊಳಿಸುತ್ತಿರುವುದು ಕೇಡಿನ ಸಂಗತಿ

ಭಿನ್ನಾಭಿಪ್ರಾಯಗಳನ್ನು ಟೂಲ್ಕಿಟ್ ಎಂದು ರಾಜಕೀಯಗೊಳಿಸಿ ಪರಾರಿಯಾಗಲು ನೋಡುವುದು ಇವೆಲ್ಲ ಹಾಗೂ ನಾಡಿನ ಗಣ್ಯರು, ಮಠಾಧಿಪತಿಗಳು, ಲೇಖಕರು, ಪ್ರಜ್ಞಾವಂತರು ತಮ್ಮ ನೋವನ್ನು ವ್ಯಕ್ತಪಡಿಸಿ ಹಿಂದಿನ ಪಠ್ಯಪುಸ್ತಕವನ್ನೇ ಮುಂದುವರಿಸಿ ಎಂದು ಕೇಳಿಕೊಂಡರೂ ತಾವು ಅದನ್ನು ಕಾಲುಕಸ ಮಾಡಿ ಲೆಕ್ಕಿಸದಿರುವುದನ್ನು ನೋಡಿದಾಗ ಇದು ನಾಡಿಗೆ ಕೇಡಿನ ಲಕ್ಷಣಗಳು ಎಂದೆನ್ನಿಸುತ್ತದೆ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ತೀವ್ರ ಅಸಮಧಾನ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಅವರು 10 ನೇ ತರಗತಿಯಲ್ಲಿ ಸೇರಿಸಿರುವ ತಮ್ಮ ಪಠ್ಯವನ್ನು ಹಿಂತೆಗೆದುಕೊಳ್ಳಬೇಕು ಎಂದು ಹೇಳಿ ಸರ್ಕಾರಕ್ಕೆ ಪತ್ರ ಬರೆದಿದ್ದರು, ಆದರೆ ಸರ್ಕಾರ ಇದಕ್ಕೆ ಸ್ಪಂದಿಸದೇ ತನ್ನ ನಡೆಯನ್ನು ಸಮರ್ಥಿಸಿಕೊಂಡಿರುವ ಬೆನ್ನಲ್ಲೇ ದೇವನೂರು ಮಹದೇವ ಅವರು ಈಗ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಬಿ.ಸಿ ನಾಗೇಶ್ ಅವರಿಗೆ ಮತ್ತೊಮ್ಮೆ ಪತ್ರ ಬರೆದು ಇದನ್ನು ದಯವಿಟ್ಟು ಮುಂದುವರೆಸಬಾರದು ಎಂದು ಮನವಿ ಮಾಡಿಕೊಂಡಿದ್ದಾರೆ.

ಅವರು ಬರೆದಿರುವ ಪತ್ರದ ಸಾರಾಂಶ ಹೀಗಿದೆ.

ಮಾನ್ಯರೆ,

ಈ ಹಿಂದೆ, ಹತ್ತನೇ ತರಗತಿಯ ಪಠ್ಯ ಪುಸ್ತಕ ದಲ್ಲಿರುವ ನನ್ನ ಪಠ್ಯವನ್ನು ಕೈ ಬಿಡಬೇಕೆಂದು ತಮಗೆ ವಿನಂತಿಸಿ ದಿನಾಂಕ 26.05.2022ರಂದು ಪತ್ರ ಬರೆದು ಕೊರಿಯರ್ ಮುಖಾಂತರ ರವಾನಿಸಿದ್ದೆ. ಅದನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರಿಗೂ ಬರೆದು ಕೊರಿಯರ್ ಮಾಡಿದ್ದೆ. ಆ ಪತ್ರದಲ್ಲಿ ನಾನು ಒಪ್ಪಿಗೆ ಇಲ್ಲದಿರುವುದಕ್ಕೆ ಸ್ಪಷ್ಟನೆ ನೀಡಿದ್ದೇನೆ. ಹೀಗಿದ್ದೂ ನನ್ನ ಮನವಿಯನ್ನು ತಾವು ಪರಿಗಣಿಸದೆ, ಇತ್ತೀಚಿನ ತಮ್ಮ ಹೇಳಿಕೆಯಲ್ಲಿ 'ಪರಿಷ್ಕೃತ ಮುದ್ರಣವೇ ಜಾರಿಗೆ ಬರುತ್ತದೆ' ಎಂದಿದ್ದೀರಿ. ಕ್ಷಮಿಸಿ, ನಿಮ್ಮ ಈ ಧೋರಣೆ ನನಗೆ ದಬ್ಬಾಳಿಕೆ ಅನ್ನಿಸಿಬಿಟ್ಟಿತು.

ಮತ್ತೂ ಹೇಳಬೇಕೆಂದರೆ, ಚತುರ್ವರ್ಣ ವಿರೋಧಿ ಬಸವಣ್ಣನವರ ಪಾಠವನ್ನು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಕತ್ತು ಹಿಚುಕಿರುವುದು, ಕುವೆಂಪು, ಅಂಬೇಡ್ಕರ್ ಅವರನ್ನು ಗೇಲಿ ಮಾಡುವ ಮನಸ್ಥಿತಿಯ ವ್ಯಕ್ತಿಯನ್ನೇ ಪಠ್ಯಪುಸ್ತಕ ಪರಿಷ್ಕರಣೆಗೆ ಅಧ್ಯಕ್ಷನನ್ನಾಗಿಸಿರುವುದು ಹಾಗೂ ಒಂದು ಒಕ್ಕೂಟ ಸರ್ಕಾರದಲ್ಲಿ ಆ ಒಕ್ಕೂಟದ ಅಂಗವಾಗಿರುವ ಕರ್ನಾಟಕ ರಾಜ್ಯವು ತನಗೂ ಒಂದು ಧ್ವಜವೂ ಬೇಕು ಎಂದು ದನಿ ಎತ್ತಿದ ಸಂದರ್ಭದಲ್ಲಿ ಆ ಪರಿಕಲ್ಪನೆಯನ್ನು ತನ್ನ ಲಂಗೋಟಿಗೆ ಹೋಲಿಕೆ ಮಾಡಿದ ಹೀನ ಅಭಿರುಚಿಯ ವ್ಯಕ್ತಿಯನ್ನು ಮಕ್ಕಳ ಪಠ್ಯ ಪರಿಷ್ಕರಣೆ ಮಾಡಲು ಅಧ್ಯಕ್ಷನನ್ನಾಗಿಸಿರುವುದು ಮತ್ತು ಸಮರ್ಥಿಸುತ್ತಿರುವುದು, ಭಿನ್ನಾಭಿಪ್ರಾಯಗಳನ್ನು ಟೂಲ್ಕಿಟ್ ಎಂದು ರಾಜಕೀಯಗೊಳಿಸಿ ಪರಾರಿಯಾಗಲು ನೋಡುವುದು ಇವೆಲ್ಲ ಹಾಗೂ ನಾಡಿನ ಗಣ್ಯರು, ಮಠಾಧಿಪತಿಗಳು, ಲೇಖಕರು, ಪ್ರಜ್ಞಾವಂತರು ತಮ್ಮ ನೋವನ್ನು ವ್ಯಕ್ತಪಡಿಸಿ ಹಿಂದಿನ ಪಠ್ಯಪುಸ್ತಕವನ್ನೇ ಮುಂದುವರಿಸಿ ಎಂದು ಕೇಳಿಕೊಂಡರೂ ತಾವು ಅದನ್ನು ಕಾಲುಕಸ ಮಾಡಿ ಲೆಕ್ಕಿಸದಿರುವುದನ್ನು ನೋಡಿದಾಗ ಇದು ನಾಡಿಗೆ ಕೇಡಿನ ಲಕ್ಷಣಗಳು ಎಂದೆನ್ನಿಸುತ್ತದೆ.

ಕೊನೆಯದಾಗಿ ತಮ್ಮಲ್ಲಿ ಒಂದು ವಿನಂತಿ– ಇದು ಮುಂದುವರಿಯಬಾರದು, ದಯವಿಟ್ಟು ಮುಂದುವರಿಯಬಾರದು.

ವಾಸ್ತವವನ್ನು ಅರ್ಥೈಸಿಕೊಳ್ಳುವ ಪ್ರಜ್ಞೆಯು ವಸ್ತುವಿನಿಂದ ಮೂಡಿದೆಯೆಂದು ಅರ್ಥಮಾಡಿಕೊಳ್ಳುವ ಬದಲು, ಪ್ರಜ್ಞೆಯಿಂದಲೇ ವಸ್ತು ಸೃಷ್ಟಿಯಾಗಿದೆಯೆಂಬ ತಲೆಕೆಳಗು ದೃಷ್ಟಿಯನ್ನೇ ಆಧರಿಸಿ ದೈವಶಾಸ್ತ್ರ, ತತ್ವಶಾಸ್ತ್ರ ಮತ್ತು ಅವುಗಳನ್ನು ಆಧರಿಸಿದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ನ್ಯಾಯಶಾಸ್ತ್ರ, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಭಾವನಾವಾದೀ ಚಿಂತಕರು ಮಂಡಿಸುತ್ತಾರೆ. ಭಾವನಾವಾದೀ ದೃಷ್ಟಿಯ ಹೇಗಲ್ನಿಂದ ದ್ವಂದ್ವಾತ್ಮಕ ಚಿಂತನಾ ವಿಧಾನವನ್ನು ಪಡೆದುಕೊಂಡು ಅದನ್ನು ಬಳಸಿ ದ್ವಂದ್ವಾತ್ಮಕ ಚಾರಿತ್ರಿಕ ಭೌತವಾದವನ್ನು ರೂಪಿಸಿದ ಮಾರ್ಕ್ಸ್ 'ನಾನು ಹೊಸದೇನನ್ನೂ ಹೇಳಿಲ್ಲ, ತಲೆಕೆಳಕಾಗಿ ನಿಂತಿದ್ದ ಹೇಗಲ್‌ನನ್ನು ಸರಿಯಾಗಿ ನಿಲ್ಲಿಸಿದೆ ಅಷ್ಟೆ' ಎಂದು ಹೇಳಿರುವುದು ಇದನ್ನೇ. ಆಧುನಿಕ ಅವತಾರಗಳಲ್ಲಿ ಆಧಿಪತ್ಯ ಹೊಂದಿರುವ, ಬಂಡವಾಳವಾದದ ಫಲಾನುಭವಿಗಳೂ, ಅವುಗಳ ಪ್ರತಿಪಾದಕರೂ ಆದ ಸಂಘಪರಿವಾರದ ಸಿದ್ಧಾಂತಿಗಳು ಮತ್ತು ರಾಜಕಾರಣಿಗಳು ಭಾವನಾವಾದವನ್ನು ಪೌರಾಣಿಕವಾಗಿ ಅದರ ಕಾಲ್ಪನಿಕ ಆದರ್ಶಗಳ ಸಾಕ್ಷಾತ್ಕಾರಕ್ಕಾಗಿ ಬಳಸುತ್ತಾರೆ. ಆ ಮೂಲಕ ಅದರ ತಲೆಕೆಳಗು ದೃಷ್ಟಿಯನ್ನು ರಾಜಕೀಯವಾಗಿ ಅಧಿಕೃತಗೊಳಿಸಲು ಯತ್ನಿಸುತ್ತಾರೆ. ಇದಕ್ಕೆ ದೃಷ್ಟಾಂತವಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು.

ಭಾವನಾವಾದದ ತಲೆಕೆಳಗು ದೃಷ್ಟಿ



ವಿ.ಎನ್. ಲಕ್ಷ್ಮೀನಾರಾಯಣ

ಮಾರ್ಕ್ಸ್ ಮತ್ತು ಏಂಗೆಲ್ಸ್ ಪ್ರತಿಪಾದಿಸಿದ ದ್ವಂದ್ವಾತ್ಮಕ ಮತ್ತು ಚಾರಿತ್ರಿಕ ಭೌತವಾದದಲ್ಲಿ ಬಹುಮುಖ್ಯವಾದ ಅಂಶ ನಾವು ಪ್ರಪಂಚವನ್ನು ನೋಡುವ ದೃಷ್ಟಿಗೆ ಸಂಬಂಧಿಸಿದ್ದು. ಸಾಂಪ್ರದಾಯಿಕ ಅಥವಾ ಪಾರಂಪರಿಕ ತತ್ವಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜವಾದಗಳ ಚಿಂತನೆಗಳಿಗೆ ಆಧಾರವಾಗಿರುವುದು ಮತ್ತು ಅವುಗಳಲ್ಲಿ ಹಾಸುಹೊಕ್ಕಾಗಿರುವುದು ಈ ಅಂಶವೇ. ಜರ್ಮನ್ ಸಿದ್ಧಾಂತ, ಬ್ರಿಟಿಷ್ ಅರ್ಥಶಾಸ್ತ್ರ ಮತ್ತು ಫ್ರೆಂಚ್ ಸಮಾಜವಾದಗಳನ್ನು ವಿಮರ್ಶೆಗೆ ಒಳಪಡಿಸಿ ಅವುಗಳ ಮಿತಿಗಳನ್ನು ವಿವರಿಸುವಾಗ ಮತ್ತು ಅವು ಎಲ್ಲಿ ದಾರಿತಪ್ಪುತ್ತವೆ ಎಂದು ನಿರ್ದಿಷ್ಟವಾಗಿ ಬೊಟ್ಟುಮಾಡಿ ತೋರಿಸುವಾಗ ಮಾರ್ಕ್ಸ್ ಮತ್ತು ಏಂಗೆಲ್ಸ್ ನಾವು ಪ್ರಪಂಚವನ್ನು ನೋಡುವ ದೃಷ್ಟಿಯ ಕಡೆಗೆ ನಮ್ಮ ಗಮನಸೆಳೆಯುತ್ತಾರೆ. ಮನುಷ್ಯನ ಪ್ರಜ್ಞೆಯಿಂದ ವಸ್ತು ಹುಟ್ಟಿದೆ ಎಂದು ನಂಬುವ ಭಾವನಾವಾದವು ಹೇಗೆ ತಲೆಕೆಳಗು ದೃಷ್ಟಿಯಾಗಿದೆ ಎಂಬುದನ್ನು ದ್ವಂದ್ವಾತ್ಮಕ ಮತ್ತು ಚಾರಿತ್ರಿಕ ಭೌತವಾದದ ಪ್ರತಿಪಾದನೆಯ ಮೂಲಕ ತೋರಿಸುತ್ತಾರೆ. ಕ್ಯಾಮರಾದ ಮಸೂರದ ಮೂಲಕ ಮೂಡುವ ವಸ್ತುವಿನ ತಲೆಕೆಳಗು ಮತ್ತು ಎಡ–ಬಲಗಳು ಪಲ್ಲಟವಾಗಿರುವ ವಸ್ತುವಿನ ಬಿಂಬವನ್ನೇ ಆಧರಿಸಿ ಇಡೀ ಪ್ರಪಂಚವು ನಮಗೆ ಹೇಗೆ ಕಾಣಿಸುತ್ತಿದೆಯೋ ಹಾಗೇ (ಅಂದರೆ ತಲೆಕೆಳಕಾಗೇ) ಇದೆ, ಎಂದು ಯಾರಾದರೂ ಹೇಳಿದರೆ, ಅವರ ತಲೆಕೆಳಗು ದೃಷ್ಟಿಯನ್ನು ಸುಲಭವಾಗಿ ಲೇವಡಿ ಮಾಡುತ್ತೇವೆ. ಕ್ಯಾಮರಾದ ತಲೆಕೆಳಗು ಬಿಂಬವನ್ನು ಅದು ಇರುವಂತೆಯೇ ನೋಡದೆ ಸರಿಯಾಗಿಟ್ಟು ನೋಡಬೇಕೆಂದು ಹೇಳಿದಂತೆ, ಕಣ್ಣಿನ ಮಸೂರದ ಮೂಲಕ ಮೆದುಳಿನಲ್ಲಿ ಮೂಡುವ ವಾಸ್ತವದ ತಲೆಕೆಳಗು–ತಿರುವು ಮುರುವು ಬಿಂಬವನ್ನು ಸರಿಯಾಗಿರಿಸಿ ನಮ್ಮ ಆಲೋಚನೆಗಳನ್ನು ರೂಪಿಸಿಕೊಳ್ಳಬೇಕೆಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ಹೇಳಿದ್ದಾರೆ. ಆದರೆ, ಅದು 'ಸರಿ' ಅಲ್ಲವೆಂದು, ಕೇವಲ ತಾತ್ವಿಕ ಭಿನ್ನಾಭಿಪ್ರಾಯವೆಂದು, ಆದ್ದರಿಂದ ಅದನ್ನು ಒಪ್ಪಬೇಕಾಗಿಲ್ಲವೆಂದು ಭಾವನಾವಾದೀ ಚಿಂತಕರು ವಾದಿಸುತ್ತಾರೆ. ವಾಸ್ತವವನ್ನು ಅರ್ಥೈಸಿಕೊಳ್ಳುವ ಪ್ರಜ್ಞೆಯು ವಸ್ತುವಿನಿಂದ ಮೂಡಿದೆಯೆಂದು ಅರ್ಥಮಾಡಿಕೊಳ್ಳುವ ಬದಲು ಪ್ರಜ್ಞೆಯಿಂದಲೇ ವಸ್ತು ಸೃಷ್ಟಿಯಾಗಿದೆಯೆಂಬ ತಲೆಕೆಳಗು ದೃಷ್ಟಿಯನ್ನೇ ಆಧರಿಸಿ ದೈವಶಾಸ್ತ್ರ, ತತ್ವಶಾಸ್ತ್ರ ಮತ್ತು ಅವುಗಳನ್ನು ಆಧರಿಸಿದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ನ್ಯಾಯಶಾಸ್ತ್ರ, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಭಾವನಾವಾದೀ ಚಿಂತಕರು ಮಂಡಿಸುತ್ತಾರೆ.

ಭಾವನಾವಾದೀ ದೃಷ್ಟಿಯ ಹೇಗಲ್ನಿಂದ ದ್ವಂದ್ವಾತ್ಮಕ ಚಿಂತನಾ ವಿಧಾನವನ್ನು ಪಡೆದುಕೊಂಡು ಅದನ್ನು ಬಳಸಿ ದ್ವಂದ್ವಾತ್ಮಕ ಚಾರಿತ್ರಿಕ ಭೌತವಾದವನ್ನು ರೂಪಿಸಿದ ಮಾರ್ಕ್ಸ್ 'ನಾನು ಹೊಸದೇನನ್ನೂ ಹೇಳಿಲ್ಲ, ತಲೆಕೆಳಕಾಗಿ ನಿಂತಿದ್ದ ಹೇಗಲ್ ನನ್ನು ಸರಿಯಾಗಿ ನಿಲ್ಲಿಸಿದೆ ಅಷ್ಟೆ' ಎಂದು ಹೇಳಿರುವುದು ಇದನ್ನೇ.

ಭಾವನಾವಾದದ ತಲೆಕೆಳಗು ದೃಷ್ಟಿಯ ಪ್ರಭಾವವು ವೈಜ್ಞಾನಿಕ ವಿಧಾನವನ್ನು ಅನುಸರಿಸುವ 21 ನೇ ಶತಮಾನದ ನಿಸರ್ಗ ವಿಜ್ಞಾನಿಗಳ ಮೇಲೂ ಎಷ್ಟೊಂದು ಗಾಢವಾಗಿದೆಯೆಂದರೆ, ಸೃಷ್ಟಿಯ ಮೂಲವನ್ನು ಮತ್ತು ಜೀವದ ಉಗಮವನ್ನು ಶೋಧಿಸುವಾಗ, ತಮ್ಮ ಭೌತವಾದೀ ದೃಷ್ಟಿಯ ಹೊರತಾಗಿಯೂ, ಸೃಷ್ಟಿಯ ಮೂಲ ಮತ್ತು ಉಗಮಕ್ಕೆ ಕಾರಣವಾಗಿರಬಹುದೆಂದು ಅವರು ನಂಬುವ 'ಮೂಲಕಣ'ವನ್ನು 'ದೇವಕಣ' ಎಂದು ಹೆಸರಿಸುತ್ತಾರೆ.

ಆದರೆ 19ನೇ ಶತಮಾನದಲ್ಲೇ ವೈಜ್ಞಾನಿಕ ದೃಷ್ಟಿ ಎಂದರೇನೆಂದು ಸ್ಪಷ್ಟವಾಗಿ ಗ್ರಹಿಸಿದ್ದ ಮಾರ್ಕ್ಸ್ ಮತ್ತು ಏಂಗೆಲ್ಸ್ ತಮ್ಮ ಕಾಲದ ನಿಸರ್ಗವಿಜ್ಞಾನಗಳ ಸೀಮಿತ ಶೋಧನೆಗಳ ಆಧಾರದಿಂದಲೇ ನಮ್ಮ ಕಾಲದ ಎಷ್ಟೋ ವಿಜ್ಞಾನಿಗಳಿಗಿಂತಲೂ ಹೆಚ್ಚು ವೈಜ್ಞಾನಿಕವಾಗಿ ಯೋಚಿಸಬಲ್ಲನೆಂಬುದಕ್ಕೆ ಹೇರಳ ಪುರಾವೆಗಳು ಅವರ ಬರಹಗಳಲ್ಲಿ ಸಿಗುತ್ತವೆ.

ಆಧುನಿಕ ಅವತಾರಗಳಲ್ಲಿ ಆಧಿಪತ್ಯ ಹೊಂದಿರುವ, ಬಂಡವಾಳವಾದದ ಫಲಾನುಭವಿಗಳೂ, ಅವುಗಳ ಪ್ರತಿಪಾದಕರೂ ಆದ ಸಂಘಪರಿವಾರದ ಸಿದ್ಧಾಂತಿಗಳು ಮತ್ತು ರಾಜಕಾರಣಿಗಳು ಭಾವನಾವಾದವನ್ನು ಪೌರಾಣಿಕವಾಗಿ ಅದರ ಕಾಲ್ಪನಿಕ ಆದರ್ಶಗಳ ಸಾಕ್ಷಾತ್ಕಾರಕ್ಕಾಗಿ ಬಳಸುತ್ತಾರೆ. ಆ ಮೂಲಕ ಅದರ ತಲೆಕೆಳಗು ದೃಷ್ಟಿಯನ್ನು ರಾಜಕೀಯವಾಗಿ ಅಧಿಕೃತಗೊಳಿಸಲು ಯತ್ನಿಸುತ್ತಾರೆ. ಇದಕ್ಕೆ ದೃಷ್ಟಾಂತವಾಗಿ ಈ ಕೆಳಗಿನ ಕೆಲವು ಉದಾಹರಣೆಗಳನ್ನು ನೋಡಬಹುದು.

1. 'ಭಾರತವು ಹಿಂದೂ ರಾಷ್ಟ್ರ. ಭಾರತದಲ್ಲಿ ವಾಸಿಸುವ ಜನರು ಭಾರತಾಂಬೆಯ ಮಕ್ಕಳು'.

ಭಾರತದ ಜನ ಎಂಬುದು ತಾರತಮ್ಯಗಳಿಂದ ವಿವಿಧ ಜಾತಿ, ಧರ್ಮ, ಭಾಷೆ ಮತ್ತು ವರ್ಗಗಳ ಒಂದು ವಾಸ್ತವಿಕ ಜನಸಂಖ್ಯಾ ಸತ್ಯ. ಹಾಗೆಯೇ ಭಾರತ ಎಂಬುದೂ ಒಂದು ವಾಸ್ತವಿಕ ಭೌಗೋಳಿಕ ಮತ್ತು ರಾಜಕೀಯ ಸತ್ಯ. ದೇಶವನ್ನು ತಾಯಿಯೆಂದೂ, ಅದರಲ್ಲಿ ವಾಸಿಸುವ ಜನರನ್ನು ಅವಳ ಮಕ್ಕಳೆಂದೂ ನೋಡುವುದು ಒಂದು ಕಾಲ್ಪನಿಕ, ಆದರ್ಶ ಕುಟುಂಬದ ಭಾವನಾತ್ಮಕ ವಿಸ್ತರಣೆ. ಇದನ್ನು ಹೀಗೆಯೇ ನೋಡಿದರೆ ಸಮಸ್ಯೆಯೇನೂ ಇಲ್ಲ. ಅದರ ಬದಲು ಈ ಸತ್ಯಗಳು ಮತ್ತು ಭಾವನೆಗಳು ಪ್ರಜ್ಞೆಯಲ್ಲಿ ಮೂಡಿಸುವ ತಲೆಕೆಳಗು ಬಿಂಬವನ್ನು ಸರಿಪಡಿಸಿಕೊಳ್ಳದೆ, ಅದು ಮೂಡುವಂತೆಯೇ ಗ್ರಹಿಸಿದಾಗ ಈಗಿರುವ ಸಮಸ್ಯೆಗಳು ಜನರನ್ನು ಕಾಡುವುದು ಅನಿವಾರ್ಯ. ಅಂದರೆ, ವಾಸ್ತವಿಕ ಸತ್ಯಗಳನ್ನು ಕಾಲ್ಪನಿಕವೆಂದೂ, ಕಾಲ್ಪನಿಕ ಆದರ್ಶವನ್ನು ವಾಸ್ತವಿಕ ಸತ್ಯವೆಂದೂ ಆಳುವ ವರ್ಗಗಳು ಗ್ರಹಿಸಿ ಆಗ್ರಹಿಸುತ್ತಿರುವುದರಿಂದ ಜನಸಮುದಾಯ ಮತ್ತು ಆಳುವವರ್ಗಗಳ ನಡುವೆ ಇರುವ ವರ್ಗ ವೈಷಮ್ಯಗಳು ಜನರ ಜಾತಿ, ಧರ್ಮ, ಭಾಷೆ ಮತ್ತು ಜೀವನವಿಧಾನಗಳ ವೈಷಮ್ಯಗಳಾಗಿ ಪ್ರಕಟಗೊಳ್ಳುತ್ತಿವೆ. ಅವನ್ನು ಈಗ ಗ್ರಹಿಸುತ್ತಿರುವಂತೆ ತಲೆಕೆಳಕಾಗಿಯೇ ಗ್ರಹಿಸಿ ಬಗೆಹರಿಸಿಕೊಳ್ಳುವುದೆಂದರೆ ಬಿಂಬವನ್ನು ಅಳಿಸಿ ವಸ್ತುವನ್ನು ನಾಶಗೊಳಿಸಿದೆವೆಂದು ನಂಬಿದಂತೆ. ಇದು ಎಂದಿಗೂ ಸಾಧ್ಯವಿಲ್ಲ.





2. 'ಗುಲಾಮರನ್ನು ಮಾಲೀಕರು ಸಾಕುತ್ತಾರೆ'

ಮೇಲುನೋಟಕ್ಕೆ ಹೌದೆಂದು ಅನ್ನಿಸಬಹುದಾದ ಈ ಗ್ರಹಿಕೆಯು ಭಾವನಾವಾದದ ತಲೆಕೆಳಗು ದೃಷ್ಟಿಯಿಂದ ಹುಟ್ಟಿದ್ದು.

ಚಾರಿತ್ರಿಕವಾಗಿ ಸೋತ ಬುಡಕಟ್ಟುಗಳ ಜನರು, ನಿರ್ಬಲರು, ಅಸಹಾಯಕರೂ ಮತ್ತು ಜೀವನಾಧಾರವನ್ನು ಸ್ವತಹ ಪಡೆಯಲಾಗದ ಅಸ್ವತಂತ್ರ ಜನರು, ಬಲಿಷ್ಠರಾದ ಯಜಮಾನರಿಗಾಗಿ ದುಡಿದು ಉತ್ಪಾದಿಸುತ್ತಾರೆ. ಅವರ ಉತ್ಪಾದನೆಯಿಂದಲೇ ಶ್ರಮರಹಿತ ಜೀವನ ನಡೆಸುವ ಮಾಲೀಕ ಮತ್ತು ಅವನ ಪರಿವಾರದವರು ಜೀವಿಸುವುದು. ಜೊತೆಗೆ ಅವರು ಗುಲಾಮರಿಗೆ ಒದಗಿಸುವ ಜೀವನಾಧಾರವೂ ಗುಲಾಮರೇ ಉತ್ಪಾದಿಸಿದ ಉತ್ಪನ್ನಗಳ ಸಣ್ಣ ಭಾಗ. ಆದರೆ ಹೊರಗಿನಿಂದ ನೋಡಲು ಮಾತ್ರ ಯಜಮಾನರಿಲ್ಲದಿದ್ದರೆ ಗುಲಾಮರು ಹಸಿವಿನಿಂದ ಸತ್ತೇಹೋಗುತ್ತಾರೆ ಎಂಬಂತೆ ಕಾಣಿಸುತ್ತದೆ. ವಾಸ್ತವವಾಗಿ ದುಡಿಯಲು ಅಶಕ್ತರಾದ, ವೃದ್ಧ ಅಥವಾ ರೋಗಗ್ರಸ್ತ ಗುಲಾಮರಿಗೆ ಯಾವ ಯಜಮಾನನೂ ಜೀವನಾಧಾರವನ್ನು ಒದಗಿಸುವುದಿಲ್ಲ. ನರಳಿ ಸಾಯುವುದೊಂದೇ ಅಂಥ ಗುಲಾಮರಿಗೆ ಒದಗುವ ಸ್ಥಿತಿ.

3. 'ಬಂಡವಾಳಗಾರರಿಲ್ಲದಿದ್ದರೆ ಕಾರ್ಮಿಕರು/ಶ್ರಮಿಕರು ನಿರುದ್ಯೋಗಿಗಳಾಗುತ್ತಾರೆ'


ಮಾರಲು ಶ್ರಮಶಕ್ತಿಯ ಹೊರತಾಗಿ ಬೇರೇನೂ ಇಲ್ಲದವರೇ ಶ್ರಮಿಕರು. ಶ್ರಮವನ್ನು ಕೊಂಡುಕೊಳ್ಳುವವರು ಬಂಡವಳಿಗರು. ಯಾವುದೇ ವಸ್ತುವಿನ ಉತ್ಪಾದನೆಗೆ ಉತ್ಪಾದನಾ ಸಲಕರಣೆಗಳು, ಕಚ್ಚಾಪದಾರ್ಥಗಳು ಮತ್ತು ಶ್ರಮ ಅತ್ಯಗತ್ಯ. ಮೊದಲನೆಯ ಎರಡು ಹಳೆಯ ಶ್ರಮ ಅಥವಾ ನಿರ್ಜೀವ ಶ್ರಮ. ಕೆಲಸದ ಸ್ಥಳದಲ್ಲಿ ಶ್ರಮಿಕರು ಖರ್ಚುಮಾಡುವ ಶ್ರಮ, ಹೊಸ ಶ್ರಮ ಅಥವಾ ಜೀವಂತ ಶ್ರಮ. ಶ್ರಮಿಕರು ನಿರ್ದಿಷ್ಟ ಶ್ರಮಕಾಲದಲ್ಲಿ ಉತ್ಪಾದಿಸುವ ವಸ್ತು ಅಥವಾ ಸರಕಿನ ಮೌಲ್ಯವು ಅವರು ಬಂಡವಳಿಗರಿಂದ ಪಡೆಯುವ ಕೂಲಿ ಅಥವಾ ಸಂಬಳದ ಮೌಲ್ಯಕ್ಕಿಂತಾ ಹೆಚ್ಚಿನದು. ಅದನ್ನು ಬಂಡವಳಿಗನು ತನ್ನದೆಂದು ಲಪಟಾಯಿಸಿ ಮರು ಉತ್ಪಾದನೆಯಲ್ಲಿ ತೊಡಗಿಸುತ್ತಾನೆ. ಅದೇ ಕಟ್ಟಡ, ಯಂತ್ರ, ಹಣ, ಕಚ್ಚಾ ಸಾಮಗ್ರಿ ಮುಂತಾಗಿ ಉತ್ಪಾದನೆ ಮತ್ತು ಮರುಉತ್ಪಾದನೆಯಲ್ಲಿ ಬಳಸುವ ಬಂಡವಾಳ. ಮತ್ತೆ ಮತ್ತೆ ಶ್ರಮಿಕರದ್ದೇ ಆದ ಹೆಚ್ಚುವರಿ ಮೌಲ್ಯವನ್ನು ಕಿತ್ತುಕೊಳ್ಳುತ್ತಾ ಶ್ರೀಮಂತನಾಗುತ್ತಾನೆ. ಅಂದರೆ ಬಂಡವಳಿಗನದ್ದೆಂದು ತೋರುವ ಎಲ್ಲಾ ಬಂಡವಾಳದ ಮೌಲ್ಯವೂ ವಾಸ್ತವವಾಗಿ ಶ್ರಮಿಕರದ್ದೇ. ಹೀಗಾಗಿ 'ಬಂಡವಳಿಗರಿಂದಾಗಿ ಶ್ರಮಿಕರಿಗೆ ಉದ್ಯೋಗ' ಎಂಬುದು ತಲೆಕೆಳಗು ದೃಷ್ಟಿ. ವಾಸ್ತವವಾಗಿ ಶ್ರಮಿಕರಿಂದ ಬಂಡವಳಿಗರಿಗೆ 'ದುಡಿಮೆರಹಿತ ಉದ್ಯೋಗ' ದೊರೆಯುತ್ತದೆ.

4. 'ಜೀವವಿದ್ದರೆ, ಜೀವನ'

ಇದು ಜನಪ್ರಿಯವಾದ, ಮೇಲುನೋಟಕ್ಕೆ ನಿಜವೆಂದು ತೋರುವ, ಭಾವನಾವಾದೀ ದೃಷ್ಟಿಯ, ತಲೆಕೆಳಗು ದೃಷ್ಟಿಯಿಂದ ಹುಟ್ಟಿದ ನಾಣ್ನುಡಿ.

ಮೊದಲನೆಯದಾಗಿ 'ಜೀವ' ಅಥವಾ ಪ್ರಾಣ ಎಂಬುದು ಒಂದು ವಸ್ತುವಲ್ಲ. ಲಕ್ಷಾಂತರ ವರ್ಷಗಳ ಸುದೀರ್ಘ ಅವಧಿಯಲ್ಲಿ ಒಂದು ವಿಶಿಷ್ಟ ಪ್ರೋಟೀನ್ ಅಣುವು ವಿಕಾಸಹೊಂದುತ್ತಾ ಪಡೆದುಕೊಂಡಿರುವ ಮತ್ತು ಪ್ರಕಟಪಡಿಸುವ ಕೆಲವು ಲಕ್ಷಣಗಳ ಮೊತ್ತ. ಸ್ಥೂಲವಾಗಿ ಹೇಳುವುದಾದರೆ, ಚಲನೆ, 'ಉಸಿರಾಟ' ಚಯಾಪಚಯ, ಆಹಾರ ಸೇವನೆ, ತನ್ನಂತೆಯೇ ಇರುವ ಜೀವಿಯ ಪುನರುತ್ಪಾದನೆ, ಇವುಗಳ ಮೊತ್ತ. ಈ ಲಕ್ಷಣಗಳಲ್ಲಿ ಯಾವುದೊಂದು ಏರುಪೇರಾದರೂ ಅನಾರೋಗ್ಯ ಅಥವಾ ಕಾಯಿಲೆ. ಈ ಕ್ರಿಯೆಗಳು ಸಂಪೂರ್ಣವಾಗಿ ನಿಂತರೆ ಮರಣ. ಈ ಇಡೀ ಪ್ರಕ್ರಿಯೆ ನೈಸರ್ಗಿಕವಾದದ್ದು.

ಈ ಪ್ರಕ್ರಿಯೆಯು ನಡೆಯಲು ನಿರಂತರವಾಗಿ ಆಹಾರ, ನೀರು, ತೀವ್ರ ನೈಸರ್ಗಿಕ ಬದಲಾವಣೆಗಳಿಂದ ರಕ್ಷಣೆ ಸಿಗುತ್ತಿರಬೇಕು. ಇವಕ್ಕೆ ಇನ್ನೊಂದು ಹೆಸರು ಜೀವನಾಧಾರ. ಇವನ್ನು ಸಂಪಾದಿಸಿಕೊಳ್ಳುವುದು, ಜೀವವನ್ನು ರಕ್ಷಿಸಿಕೊಳ್ಳುವುದೇ ಜೀವನ. ಪ್ರಾಣಿಗಳು ಜೀವನಾಧಾರವನ್ನು ನಿಸರ್ಗದಿಂದ ಸಂಪಾದಿಸಿಕೊಳ್ಳುತ್ತವೆ. ಮನುಷ್ಯರು ನಿಸರ್ಗ ಪದಾರ್ಥಗಳಿಗೆ ಶ್ರಮವನ್ನು ಸೇರಿಸಿ ಜೀವನಾಧಾರವನ್ನು ಉತ್ಪಾದಿಸಿಕೊಳ್ಳುತ್ತಾರೆ. ಇದು ಸಾಮಾಜಿಕವಾದದ್ದು. ಇದಿಲ್ಲದೆ ಜೀವವಿಲ್ಲ. ಅಂದರೆ ಸಾಮಾಜಿಕ ಜೀವನದಿಂದ ಜೀವವೇ ಹೊರತು ಜೀವದಿಂದ ಜೀವನವಲ್ಲ. ಜೀವ ಇರುವುದು ಜೀವಿ. ಬದುಕಿರುವುದು ಎಂದರೆ ಸಾಮಾಜಿಕವಾಗಿ ಸಕ್ರಿಯರಾಗಿರುವುದು. ಅದೇ ಜೀವಂತಿಕೆ. ಜೀವವಿರಬೇಕಾದರೆ ಜೀವನವಿರಬೇಕು.



ಕೃಪೆ: ಅಲೋಕ್

ಮೋದಿ ಸರಕಾರಕ್ಕೆ 8 ವರ್ಷ



ಪ್ರಜಾಪ್ರಭುತ್ವದ ಮೇಲೆ ಸತತ ದಾಳಿಯೊಂದೇ ಮಹಾಸಾಧನೆ!

ಮೋದಿ ಸರಕಾರದ ಕೇಂದ್ರೀಕೃತ ಸರ್ವಾಧಿಕಾರಿ ಶೈಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಕ್ಕೂಟ ಸ್ವರೂಪವನ್ನು ಹೊಸಕಿ ಹಾಕುತ್ತಿದೆ. ಆರ್ಥಿಕ ಕ್ಷೇತ್ರ ಮತ್ತು ಸಮವರ್ತಿ ಪಟ್ಟಿ ಹಾಗೂ ರಾಜ್ಯ ಪಟ್ಟಿಗಳಲ್ಲಿರುವ ವಿಷಯಗಳಿಗೆ ಸಂಬಂಧಿಸಿ ರಾಜ್ಯಗಳ ಹಕ್ಕುಗಳ ಮೇಲೆ ಕೇಂದ್ರ ಸರಕಾರ ಸತತವಾಗಿ ಸವಾರಿ ಮಾಡುತ್ತಿದೆ. ಕೇಂದ್ರ ಸರಕಾರ ನೇಮಿಸಿದ ರಾಜ್ಯಪಾಲರು ಕೇಂದ್ರದಲ್ಲಿನ ಆಳುವ ಪಕ್ಷದ ಸಾಧನಗಳಂತೆ ವರ್ತಿಸುತ್ತಿದ್ದು ರಾಜ್ಯ ಸರಕಾರಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಕೆಲವು ಕಡೆ ರಾಜ್ಯ ಸರಕಾರಗಳ ಕೆಲಸಗಳಿಗೇ ಅಡ್ಡಿಪಡಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಬದಲಿಗೆ ಬಹುಮತದ ಆಡಳಿತ ಹೇರಲು ಹುನ್ನಾರ ನಡೆಸಲಾಗುತ್ತಿದೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಶಾಸನಸಭೆಗಳಲ್ಲಿನ ಬಹುಮತವನ್ನೇ ಬಳಸಿಕೊಂಡು ಕಾನೂನುಗಳನ್ನು ಪಾಸ್ ಮಾಡಲಾಗುತ್ತಿದೆ.

— ಪ್ರಕಾಶ ಕಾರತ್ —

ಮೋದಿ ಸರಕಾರಕ್ಕೆ ಎಂಟು ವರ್ಷ ತುಂಬಿದ ಸಂದರ್ಭದ ಆಚರಣೆಗೆ 15 ದಿನ ಪ್ರಚಾರಾಂದೋಲನ ನಡೆಸಲು ಬಿಜೆಪಿ ನಿರ್ಧರಿಸಿದೆ. ಆರ್ಥಿಕ ಬೆಳವಣಿಗೆ, ಮೂಲಸೌಕರ್ಯ ಅಭಿವೃದ್ಧಿ, ಆಹಾರ ಧಾನ್ಯ ಉತ್ಪಾದನೆ, ಸಮಾಜ ಕಲ್ಯಾಣ ಯೋಜನೆಗಳು ಮತ್ತು ವಿದೇಶಾಂಗ ನೀತಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿನ ಸರಕಾರದ ಸಾಧನೆಗಳನ್ನು ಎತ್ತಿತೋರಿಸುವುದು ಈ ಆಂದೋಲನದ ಉದ್ದೇಶ ಎನ್ನಲಾಗಿದೆ. ಇದೆಲ್ಲವೂ ಪ್ರಧಾನಿ ನರೇಂದ್ರ ಮೋದಿಯ ಉಪಕ್ರಮಗಳು ಹಾಗೂ ಅವಿರತ ಶ್ರಮದ ಫಲ ಎಂದು ಹೇಳಿಕೊಳ್ಳಲಾಗುತ್ತಿದೆ.

ಆದರೆ, ಈ ಉದ್ದನೆಯ ಸಾಧನೆಗಳ ಪಟ್ಟಿಯಲ್ಲಿ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಅಡಕವಾಗಿರುವ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ಬಲಪಡಿಸಲು ಮತ್ತು ಸಾಂವಿಧಾನಿಕ ಚೌಕಟ್ಟನ್ನು ರಕ್ಷಿಸಲು ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಚಕಾರವಿಲ್ಲ. ಇದು ಉದ್ದೇಶಪೂರ್ವಕವಾಗಿಯೇ ಕೈಬಿಡಲಾಗಿರುವ ವಿಚಾರವಾಗಿದೆ. ಯಾಕೆಂದರೆ ಮೋದಿ ಸರಕಾರ ಕಳೆದ ಎಂಟು ವರ್ಷಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನಕ್ಕೆ ಅಗಾಧವಾದ ಹಾನಿ ಎಸಗಿದೆ.

ಮೋದಿ ಆಡಳಿತದ ಎಂಟು ವರ್ಷಗಳ ಅವಧಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಕುಗ್ಗಿಸಲು, ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸಲು ಮತ್ತು ಸಾಂವಿಧಾನಿಕ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಎಲ್ಲ ಸಂಸ್ಥೆಗಳನ್ನು ಬುಡಮೇಲು ಮಾಡಲು ನಿರಂತರ ಪ್ರಯತ್ನಗಳು ನಡೆದಿವೆ. ಸಂಸತ್ತನ್ನು ಅಪಮೌಲ್ಯಗೊಳಿಸುವುದು ಹಾಗೂ ಸಂಸದೀಯ ಪ್ರಕ್ರಿಯೆಗಳನ್ನು ಅಗೌರವಿಸುವುದನ್ನು ನಿರ್ದಿಷ್ಟವಾಗಿ ಮೋದಿ ಸರಕಾರದ ಎರಡನೇ ಅವಧಿಯಲ್ಲಿ ಹೆಚ್ಚು ತೀಕ್ಷ್ಣವಾಗಿ ಮಾಡಲಾಗಿದೆ. ಕಳೆದ ವರ್ಷ 50ಕ್ಕಿಂತ ಕಡಿಮೆ ದಿನ ಸಂಸತ್ತಿನ ಅಧಿವೇಶನ ನಡೆದಿದೆ. ಕಾನೂನುಗಳ ಬಗ್ಗೆ ಚರ್ಚೆಯ ಕೊರತೆ ಮಾತ್ರವಲ್ಲದೆ ಶಾಸನಾತ್ಮಕ ಮಸೂದೆಗಳ ಪರಿಶೀಲನೆಯೂ ಇಲ್ಲವಾಗಿದೆ. ಯುಪಿಎ ಸರಕಾರದ ಅವಧಿಯಲ್ಲಿ ಶೇಕಡ 60 ರಿಂದ 70 ರಷ್ಟು ಮಸೂದೆಗಳನ್ನು ಲೋಕಸಭೆಯ ಸ್ಥಾಯಿ ಸಮಿತಿಗಳಿಗೆ ಒಪ್ಪಿಸಲಾಗುತ್ತಿತ್ತು. ಅದು ಮೋದಿಯ ಪ್ರಥಮ ಆಡಳಿತಾವಧಿಯಲ್ಲಿ ಶೇಕಡ 27ಕ್ಕೆ ಹಾಗೂ ಎರಡನೇ ಅವಧಿಯಲ್ಲಿ ಕೇವಲ ಶೇಕಡ 13ಕ್ಕೆ ಕುಸಿದಿದೆ. ವಿಷಯಗಳನ್ನು ಎತ್ತುವ ಹಾಗೂ ಶಾಸನಾತ್ಮಕ ಪ್ರಕ್ರಿಯೆ ವೇಳೆ ಮತದಾನ ಮಾಡುವ ಪ್ರತಿಪಕ್ಷಗಳ ಹಕ್ಕನ್ನು ನಿರಾಕರಿಸುವ ಮೂಲಕ ಸರಕಾರ ಈ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ. ಮೂರು ಕೃಷಿ ಮಸೂದೆಗಳನ್ನು ರಾಜ್ಯಸಭೆಯಲ್ಲಿ ಬಲವಂತದಿಂದ ಅಂಗೀಕರಿಸಿದ್ದು ಇದಕ್ಕೊಂದು ಪ್ರಮುಖ ಉದಾಹರಣೆಯಾಗಿದೆ.

ಸಂಸತ್ತನ್ನೇ ನಿರ್ಬಂಧಗಳಿಗೆ ಒಳಪಡಿಸಿದರೆ ಹಾಗೂ ಸದಸ್ಯರ ಹಕ್ಕುಗಳನ್ನು ದಮನಿಸಿದರೆ ಇಡೀ ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮಹತ್ವವನ್ನು ತುಳಿದಂತಾಗುತ್ತದೆ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವ ಪ್ರಮುಖ ಸಂಸ್ಥೆಯಾದ ಭಾರತ ಚುನಾವಣಾ ಆಯೋಗಕ್ಕೇ (ಇಸಿಐ) ಕಡಿವಾಣ ಹಾಕಲಾಗಿದೆ ಹಾಗೂ ಅದನ್ನು ಕಾರ್ಯಾಂಗದ ಇಷ್ಟಾನಿಷ್ಟಗಳಿಗೆ ತಾಳ ಹಾಕುವ ರೀತಿ ಮಾಡಲಾಗಿದೆ. ಚುನಾವಣಾ ಬಾಂಡ್ ಎಂಬ ಸಾಧನವು ಲಂಚ–ರುಷುವತ್ತನ್ನು ಕಾನೂನುಬದ್ಧಗೊಳಿಸಿದೆ ಹಾಗೂ ಆಳುವ ಪಕ್ಷಕ್ಕೆ ಸತತವಾಗಿ ಹಣ ಹರಿದು ಬರುವುದನ್ನು ಖಾತರಿಪಡಿಸಿದೆ. ಅದೇ ಹೊತ್ತಿಗೆ ಪ್ರತಿಪಕ್ಷಗಳು ನಿಧಿಯ ಕೊರತೆಯಿಂದ ಬಳಲುವಂತೆ ಮಾಡಿದೆ.

ಕೇಂದ್ರದ ಅಧಿಕೃತ ಸಂಸ್ಥೆಗಳ ಮೂಲಕ ಪ್ರತಿಪಕ್ಷಗಳ ಮೇಲೆ ದಾಳಿ ಮಾಡುವುದು ಈಗ ನಿತ್ಯದ ಕೆಲಸವಾಗಿದೆ. ಸಿಬಿಐ, ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ಮತ್ತು ಆದಾಯ ತೆರಿಗೆ ಇಲಾಖೆಗಳು ಪ್ರತಿಪಕ್ಷಗಳ ನಾಯಕರನ್ನು ಟಾರ್ಗೆಟ್ ಮಾಡುತ್ತಿವೆ. ಅವರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ ಮಾತ್ರವಲ್ಲದೆ ಅನೇಕ ಪ್ರತಿಪಕ್ಷ ನಾಯಕರನ್ನು ಬಂಧಿಸಲಾಗಿದೆ. ಸದ್ಯ, ಆಪ್ ನಾಯಕರಾದ ದೆಹಲಿಯ ಆರೋಗ್ಯ ಸಚಿವ ಮತ್ತು ಮಹಾರಾಷ್ಟ್ರದ ಸಚಿವರೊಬ್ಬರು ಇ.ಡಿ. ದಾಖಲಿಸಿದ ಪ್ರಕರಣಗಳ ಸಂಬಂಧ ಪೊಲೀಸ್ ವಶದಲ್ಲಿದ್ದಾರೆ. ಡಜನ್‌ಗಟ್ಟಲೆ ಪ್ರತಿಪಕ್ಷ ಮುಖಂಡರು ಸಿಬಿಐ ಮತ್ತು ಇ.ಡಿ. ತನಿಖೆ ಎದುರಿಸುತ್ತಿದ್ದಾರೆ. ಪ್ರತಿಪಕ್ಷವನ್ನು ದಮನಿಸುವುದೇ ಇದರ ಉದ್ದೇಶವಾಗಿರುವುದು ಸ್ಪಷ್ಟವಾಗಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಅಧ್ಯಕ್ಷರಿಗೆ ಇ.ಡಿ. ಸಮನ್ಸ್ ಜಾರಿ ಮಾಡಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾನೂನು (ಯುಎಪಿಎ) ಮತ್ತು ದೇಶದ್ರೋಹದ ಕಾನೂನು ಮುಂತಾದ ಕರಾಳ ಶಾಸನಗಳನ್ನು ಬಳಸಿ ಭಿನ್ನಮತವನ್ನು ಅಪರಾಧೀಕರಣಗೊಳಿಸುವ ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಹತ್ತಿಕ್ಕುವ ಪ್ರವೃತ್ತಿ ತಾರಕಕ್ಕೇರಿದೆ. 2014ರಿಂದ 2020ರ ನಡುವಿನ ಏಳು ವರ್ಷಗಳ ಅವಧಿಯಲ್ಲಿ ಯುಎಪಿಎ ಅಡಿ ಸುಮಾರು 690 ಕೇಸ್‌ಗಳನ್ನು ದಾಖಲಿಸಲಾಗಿದೆ ಹಾಗೂ ಯುಎಪಿಎ ನಿಯಮಗಳ ಅನ್ವಯ 10,552 ಜನರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ರಾಜಕೀಯ ಕಾರ್ಯಕರ್ತರು, ನಾಗರಿಕ ಹಕ್ಕುಗಳ ಕಾರ್ಯಕರ್ತರು, ಪತ್ರಕರ್ತರು ಮತ್ತು ಲೇಖಕರು ಸೇರಿದ್ದಾರೆ. ದೇಶದ್ರೋಹಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆ (ಐಪಿಸಿ) 124ಎ ಸೆಕ್ಷನ್ ಅನ್ನು ಕೂಡ ಸರಕಾರದ ವಿರುದ್ಧದ ದನಿಯನ್ನು ಅಡಗಿಸಲು ಬಳಸಲಾಗುತ್ತಿದೆ. 2014ರಿಂದ 2021ರ ವರೆಗೆ 450ಕ್ಕೂ ಹೆಚ್ಚು ರಾಜದ್ರೋಹದ ಕೇಸ್‌ಗಳನ್ನು ಹಾಕಲಾಗಿದೆ.

ಮಾಧ್ಯಮವು ಸ್ವತಂತ್ರ ಪಾತ್ರ ನಿರ್ವಹಿಸುವುದನ್ನು ತಡೆಯಲು ಅದನ್ನೂ ದಮನಿಸಲಾಗುತ್ತಿದೆ. ಪತ್ರಕರ್ತರ ವಿರುದ್ಧ ದಮನಕಾರಿ ಕಾನೂನುಗಳನ್ನು ಬಳಸಿರುವುದು ಮಾತ್ರವಲ್ಲದೆ ಕೆಲವು ಮಾಧ್ಯಮ ಸಂಸ್ಥೆಗಳ ಮಾಲಿಕರನ್ನು ಆರ್ಥಿಕ ಅಪರಾಧಗಳಿಗಾಗಿ ಟಾರ್ಗೆಟ್ ಮಾಡಲಾಗುತ್ತಿದೆ. ಕೇಂದ್ರೀಯ ಸಂಸ್ಥೆಗಳನ್ನು ಅವರ ವಿರುದ್ಧ ಛೂಬಿಡಲಾಗುತ್ತಿದೆ. ಕಾರ್ಪೊರೇಟ್ ಮಾಧ್ಯಮದ ದೊಡ್ಡ ವಿಭಾಗ ಸರಕಾರಕ್ಕೆ ಶರಣಾಗಿದ್ದು ಸರಕಾರದ ಚೀರ್‌ಲೀಡರ್‌ಗಳಂತೆ ವರ್ತಿಸುತ್ತಿದೆ.

ಮೋದಿ ಸರಕಾರದ ಕೇಂದ್ರೀಕೃತ ಸರ್ವಾಧಿಕಾರಿ ಶೈಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಕ್ಕೂಟ ಸ್ವರೂಪವನ್ನು ಹೊಸಕಿ ಹಾಕುತ್ತಿದೆ. ಆರ್ಥಿಕ ಕ್ಷೇತ್ರ ಮತ್ತು ಸಮವರ್ತಿ ಪಟ್ಟಿ ಹಾಗೂ ರಾಜ್ಯ ಪಟ್ಟಿಗಳಲ್ಲಿರುವ ವಿಷಯಗಳಿಗೆ ಸಂಬಂಧಿಸಿ ರಾಜ್ಯಗಳ ಹಕ್ಕುಗಳ ಮೇಲೆ ಕೇಂದ್ರ ಸರಕಾರ ಸತತವಾಗಿ ಸವಾರಿ ಮಾಡುತ್ತಿದೆ. ಕೇಂದ್ರ ಸರಕಾರ ನೇಮಿಸಿದ ರಾಜ್ಯಪಾಲರು ಕೇಂದ್ರದಲ್ಲಿನ ಆಳುವ ಪಕ್ಷದ ಸಾಧನಗಳಂತೆ ವರ್ತಿಸುತ್ತಿದ್ದು ರಾಜ್ಯ ಸರಕಾರಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಕೆಲವು ಕಡೆ ರಾಜ್ಯ ಸರಕಾರಗಳ ಕೆಲಸಗಳಿಗೇ ಅಡ್ಡಿಪಡಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಬದಲಿಗೆ ಬಹುಮತದ ಆಡಳಿತ ಹೇರಲು ಹುನ್ನಾರ ನಡೆಸಲಾಗುತ್ತಿದೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಶಾಸನಸಭೆಗಳಲ್ಲಿನ ಬಹುಮತವನ್ನೇ ಬಳಸಿಕೊಂಡು ಕಾನೂನುಗಳನ್ನು ಪಾಸ್ ಮಾಡಲಾಗುತ್ತಿದೆ. ಮತಾಂತರ–ನಿಷೇಧ ಕಾನೂನು, ಗೋ ಹತ್ಯೆ ನಿಷೇಧ ಕಾನೂನು ಮುಂತಾದವು ಅವುಗಳಲ್ಲಿ ಸೇರುತ್ತವೆ. ಕೇಂದ್ರ ಮಟ್ಟದಲ್ಲಿ ಪೌರತ್ವ ತಿದ್ದುಪಡಿ ಕಾನೂನು(ಸಿಎಎ) ಇದಕ್ಕೆ ಉದಾಹರಣೆಯಾಗಿದೆ. ಈ ಎಲ್ಲ ಕಾನೂನುಗಳು ಅಲ್ಪಸಂಖ್ಯಾತರನ್ನು ಗುರಿಯಾಗಿರಿಸಿಕೊಂಡಿದ್ದು ಅವರನ್ನು ಮೂಲಭೂತ ಹಕ್ಕುಗಳಿಂದ ವಂಚಿಸುವ ಉದ್ದೇಶದ್ದಾಗಿದೆ. ಇಂಥ ಕಾನೂನುಗಳು ತಳ ಮಟ್ಟದಲ್ಲಿ ಹಿಂದೂತ್ವ ಶಕ್ತಿಗಳು ಅಲ್ಪಸಂಖ್ಯಾತರ ಮೇಲೆ ನಡೆಸುವ ವಿಷಮಯ ದಾಳಿಗಳಿಗೆ ಕಾನೂನು ರಕ್ಷಣೆಯನ್ನು ಒದಗಿಸುತ್ತದೆ.

ಇದು ಸರ್ವಾಧಿಕಾರಿ ಆಡಳಿತದ ಕ್ರೋಡೀಕರಣದ ಸೂಚನೆಯಾಗಿದೆ. ಈ ಯಾವುದೇ ಅಪಾಯಗಳನ್ನು ಮೋದಿ ಸರಕಾರದ ಎಂಟು ವರ್ಷಗಳ ಆಡಳಿತದ ಸಾಧನೆಯಲ್ಲಿ ಎಲ್ಲೂ ಎಳ್ಳಷ್ಟೂ ಚರ್ಚಿಸಲಾಗುತ್ತಿಲ್ಲ. ಪ್ರಮುಖ ಪತ್ರಿಕೆಗಳ ಸಂಪಾದಕೀಯಗಳು ಎಂಟು ವರ್ಷಗಳ ಸಕಾರಾತ್ಮಕ ಹೆಜ್ಜೆಗಳು ಮತ್ತು ಕೊರತೆಗಳ ಬ್ಯಾಲೆನ್ಸ್‌ಶೀಟ್ ಒದಗಿಸುತ್ತಿವೆ. ಸರಕಾರದ ಕೆಲಸಗಳ ಮೌಲ್ಯಮಾಪನದ ಸಾಮಾನ್ಯ ಕೆಲಸವಷ್ಟೇ ತಮ್ಮದು ಎನ್ನುವಂತೆ ಅವುಗಳ ಧೋರಣೆಯಿದೆ. ಭಾರತವನ್ನು ಹಿಂದೂತ್ವ ಸರ್ವಾಧಿಕಾರಿ ರಾಷ್ಟ್ರ ಮಾಡುವ ಯೋಜನೆಯು ವಾಸ್ತವವಾಗಿದ್ದು ಪತ್ರಿಕೆಗಳು ಅದನ್ನು ಬಹಳ ಬುದ್ಧಿವಂತಿಕೆಯಿಂದ ಮರೆಮಾಚುತ್ತಿವೆ.

ಆರ್‌ಎಸ್‌ಎಸ್‌ನ ಹಿಂದೂತ್ವ ಕಾರ್ಯಸೂಚಿ ಪ್ರಕಾರ ಭಾರತೀಯ ಪ್ರಭುತ್ವವನ್ನು ಮರುರೂಪಿಸಲು ಸತತವಾಗಿ ಪ್ರಯತ್ನಿಸಿದ್ದೇ ಬಿಜೆಪಿ ಸರಕಾರದ ಎಂಟು ವರ್ಷಗಳ ಆಡಳಿತದ ಪ್ರಮುಖ ಅಂಶವಾಗಿದೆ. ಅದಕ್ಕಾಗಿ ಹಾಲಿಯಿರುವ ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ಮಾನದಂಡಗಳನ್ನು, ನ್ಯಾಯಾಂಗ, ನಾಗರಿಕ ಸೇವೆ ಮತ್ತು ಮಾಧ್ಯಮದ ಪಾತ್ರವನ್ನು ಬದಲಾಯಿಸಲಾಗುತ್ತಿದೆ ಹಾಗೂ ದುಷ್ಟ ಸರ್ವಾಧಿಕಾರಿ ಆಡಳಿತಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಲಾಗುತ್ತಿದೆ. ಇಡೀ ಆರ್ಥಿಕ ನೀತಿಗಳನ್ನು ಹಿಂದೂತ್ವ–ಕಾರ್ಪೊರೇಟ್ ಮೈತ್ರಿಗೆ ಪೂರಕವಾಗುವ ರೀತಿಯಲ್ಲಿ ರೂಪಿಸಲಾಗುತ್ತಿದೆ. ಈ ಮೈತ್ರಿಯು ಸರ್ವಾಧಿಕಾರಿ ಬಯಕೆಯನ್ನು ಮುಂದೊತ್ತಲು ಎಲ್ಲ ನೆರವನ್ನು ಒದಗಿಸುತ್ತದೆ.

ಪ್ರಜಾಪ್ರಭುತ್ವ ಮತ್ತು ಮೂಲಭೂತ ಆರ್ಥಿಕ, ಸಾಮಾಜಿಕ ಹಾಗೂ ಪ್ರಜೆಗಳ ನಾಗರಿಕ ಹಕ್ಕುಗಳು ಪ್ರಸಕ್ತ ಆಳುವ ವ್ಯವಸ್ಥೆಯಿಂದ ನಾಶವಾಗುತ್ತಿದೆ –ಇದುವೇ ಮೋದಿ ಆಡಳಿತದ ಎಂಟು ವರ್ಷಗಳ ಆಡಳಿತದಿಂದ ದೊರೆಯುವ ಏಕೈಕ ಪಾಠವಾಗಿದೆ.

ಅನು: ವಿಶ್ವ

ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಕುರಿತ ರಾಜ್ಯ ಸಮಾವೇಶ





ಡಾ. ಕೆ.ಟಿ. ಜಲೀಲ್

ಜಾತ್ಯಾತೀತತಯೇ ನಮ್ಮ ಜೀವವಾಯು ಜಾತ್ಯತೀತತೆ ಇಲ್ಲವಾದರೆ ಭಾರತವಿಲ್ಲ: ಡಾ. ಕೆ.ಟಿ. ಜಲೀಲ್

"ಭಾರತವನ್ನು ಪಾಕಿಸ್ತಾನದಂತಹ ರಾಷ್ಟ್ರವನ್ನಾಗಿಸಲು ನಾವು ಅವಕಾಶ ನೀಡಬಾರದು. ನಮ್ಮ ದೇಶದಲ್ಲಿ ಜಾತ್ಯಾತೀತಯೇ ನಮ್ಮ ಜೀವವಾಯು, ಜಾತ್ಯತೀತತೆ ಇಲ್ಲವಾದರೆ ಭಾರತ ಇಲ್ಲವಾಗುತ್ತದೆ," ಎಂದು ಕೇರಳದ ಮಾಜಿ ಉನ್ನತ ಶಿಕ್ಷಣ ಸಚಿವರಾದ ಡಾ. ಕೆ.ಟಿ. ಜಲೀಲ್ ಹೇಳಿದರು. ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಜಾತ್ಯಾತೀತತೆ, ಸಬಲೀಕರಣ ಮತ್ತು ಮುನ್ನಡೆ' ಎಂಬ ಘೋಷಣೆಯಡಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಆಯೋಜಿಸಿದ್ದ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ದೇಶ ಜಾತ್ಯಾತೀತ ರಾಷ್ಟ್ರವಾಗಿದೆ. ಎಲ್ಲವನ್ನು ಭಾರತ ಒಳಗೊಳ್ಳುತ್ತಿದೆ. ಈ ಜಾತ್ಯಾತೀತತೆಯ ಸಂಪ್ರದಾಯವೇ ಪ್ರಜಾಪ್ರಭುತ್ವವನ್ನು ಕಾಯುತ್ತಿರುವುದು. ದೇಶದ ಅಭಿವೃದ್ಧಿಗೆ ಎಲ್ಲಾ ಜನಾಂಗಗಳೂ ಕೊಡುಗೆ ನೀಡಿದೆ. ಯಾವುದೇ ಒಂದು ಸಮುದಾಯವನ್ನು ದೂರವಿಟ್ಟು, ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂದು ಹೇಳಿದರು.

"ನಮ್ಮ ದೇಶ ಜಾತ್ಯತೀತ ರಾಷ್ಟ್ರವಾಗಿದೆ. ಎಲ್ಲವನ್ನು ಭಾರತ ಒಳಗೊಳ್ಳುತ್ತಿದೆ. ಈ ಜಾತ್ಯಾತೀತತೆಯ ಸಂಪ್ರದಾಯವೇ ಪ್ರಜಾಪ್ರಭುತ್ವವನ್ನು ಕಾಯುತ್ತಿರುವುದು. ನಮ್ಮ ದೇಶವು ಯಾವುದೇ ಧರ್ಮವನ್ನು ಯಾವುದೇ ಕಾಲದಲ್ಲಿ ನಿರಾಕರಿಸಿಲ್ಲ. ಹಿಂದೂ ಧರ್ಮದ ಅಶೋಕ ಚಕ್ರವರ್ತಿ ಕಳಿಂಗ ಯುದ್ಧದ ನಂತರ ಬೌದ್ಧ ಧರ್ಮ ಪಾಲಿಸಿದರು. ಅವರು ಬೌದ್ಧ ಧರ್ಮ ಸ್ವೀಕರಿಸಿದ ನಂತರ ಅವರನ್ನು ಯಾರೂ ಪ್ರಶ್ನಿಸಿಲ್ಲ. ಮುಸ್ಲಿಂ ರಾಜರು 900 ವರ್ಷಗಳ ಕಾಲ ಆಡಳಿತ ನಡೆಸಿದರು. ಒಂದು ವೇಳೆ ಅವರು ಧರ್ಮವನ್ನು ಆಡಳಿತದಲ್ಲಿ ಜೊತೆಯಾಗಿಸಿದ್ದರೆ ಇಷ್ಟೊಂದು ಧೀರ್ಘ ಕಾಲ ಆಡಳಿತ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮೊಘಲ್ ಸಾಮ್ರಾಜ್ಯದ ಚಕ್ರವರ್ತಿ ಬಹದ್ದೂರೂ ಶಾ ಜಫಾರ್ ದೇಶದ ಬಹಸಂಖ್ಯಾತ ಹಿಂದೂಗಳು ತಮ್ಮ ನಾಯಕರಾಗಿ ಆಯ್ಕೆ ಮಾಡಿದ್ದರು," ಎಂದರು.

"ದೇಶವನ್ನು 16 ವರ್ಷ ಆಡಳಿತದಲ್ಲಿ ಯಾವುದೇ ಧರ್ಮ ಆಚರಿಸದ ನೆಹರೂ ಅವರನ್ನು ಯಾರೂ ಪ್ರಶ್ನಿಸಿಲ್ಲ. ಬಾಕ್ರಾ-ನಂಗಲ್ ಉದ್ಘಾಟನೆ ಮಾಡಿದ ನೆಹರೂ ಈ ಅಣೆಕಟ್ಟನ್ನು ತೋರಿಸಿ ಇದು 'ಭಾರತದ ದೇವಾಲಯ' ಎಂದು ಹೇಳಿದ್ದರು. ಆದರೆ ವರ್ತಮಾನ ಕಾಲದಲ್ಲಿ ಕಾಂಗ್ರೆಸ್‌ನ ಮೃದು ಹಿಂದುತ್ವ ಕಾಣುವಾಗ ಬೇಸರವಾಗುತ್ತದೆ. ವಾಜಪೇಯಿ ಆಡಳಿತ ಮಾಡಬೇಕಾದರೆ ಭಾರತ ಇಷ್ಟು ಮಟ್ಟದಲ್ಲಿ ಕೋಮುದ್ರುವೀಕರಣಗೊಂಡಿರಲಿಲ್ಲ. ವಾಜಪೇಯಿ ಈ ರೀತಿ ಕೋಮುದ್ರುವೀಕರಣ ಮಾಡಿರಲಿಲ್ಲ. ಸಹಿಷ್ಣುತೆ, ಜಾತ್ಯಾತೀತೆಗೆ ವಾಜಪೇಯಿ ಬದ್ಧರಾಗಿದ್ದರು. ವಾಜಪೇಯಿ ನಂತರ ಬಂದ ನರೇಂದ್ರ ಮೋದಿ ಸರ್ಕಾರವು ನಿರಂತರವಾಗಿ ಒಂದು ಸರ್ಕಾರವನ್ನು ತಿರಸ್ಕಾರ ಮಾಡುತ್ತಾ ಬಂದಿದೆ," ಎಂದು ತಿಳಿಸಿದರು.

"ನರೇಂದ್ರ ಮೋದಿ ಸರ್ಕಾರದ ಧಮನಕಾರಿ ಕ್ರಮ ಅಪಾಯಕಾರಿ. ಅದನ್ನು ನಾವು ಪರಾಭವಗೊಳಿಸಬೇಕು. ಎಲ್ಲಾ ಧರ್ಮಗಳು ಬೇರೆ ಬೇರೆಯಾದರೂ ಒಂದೇ ಜಾತ್ಯತೀತ ನಂಬಿಕೆ ಹೊಂದಿದೆ. ಬೈಬಲ್, ಕುರಾನ್, ಭಗವದ್ಗೀತೆ ಒಂದೇ ಭಾವೈಕತೆಯನ್ನು ಸಾರುತ್ತದೆ. ನೂರಾರು ವರ್ಷ ಕಾಲ ಆಳಿದ ಬ್ರಿಟಿಷರನ್ನು ಸೋಲಿಸಲು ಸಾಧ್ಯವಾಗುತ್ತದೆ ಎಂದಾದರೆ ಕೇವಲ ಎಂಟು ವರ್ಷ ಆಳಿದ ಮೋದಿ ಸರ್ಕಾರವನ್ನು ಕೂಡಾ ಸೋಲಿಸಲು ನಮಗೆ ಸಾಧ್ಯವಾಗಲಿದೆ," ಎಂದು ಹೇಳಿದರು.



"ದೇಶದಲ್ಲಿ ಗೋಮಾಂಸದ ವಿಚಾರದಲ್ಲಿ ಅದೆಷ್ಟೋ ಜನರ ಮೇಲೆ ದಾಳಿ ನಡೆಯುತ್ತಿದೆ. ಒಂದು ವೇಳೆ ಈ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಎಲ್ಲಾ ಮುಸ್ಲಿಮರನ್ನು ಈ ದೇಶದಲ್ಲಿ ಇಲ್ಲವಾಗಿಸಿದರೆ ಇಲ್ಲಿ ನಡೆಯುವ ಎಲ್ಲಾ ದಾಳಿಗಳು ಮುಗಿಯುತ್ತದೆಯೇ?, ದೇಶದಲ್ಲಿ ಮುಸ್ಲಿಮರು ಇಲ್ಲವಾದರೆ, ದಲಿತ ಮತ್ತು ಹಿಂದುಳಿದ ವರ್ಗಗಳ ಮೇಲಿನ ದಾಳಿಯು ಮುಂದುವರಿಯುತ್ತದೆ. ಯಾವುದೇ ಜನಾಂಗದ ಹಕ್ಕುಗಳನ್ನು ನಿರಾಕರಿಸಿ ಭಾರತ ಮುನ್ನಡೆಯಲು ಸಾಧ್ಯವಿಲ್ಲ," ಎಂದು ತಿಳಿಸಿದರು.

"ಈ ದೇಶದಲ್ಲಿ ಏನು ತಿನ್ನಬೇಕು, ಏನನ್ನು ಧರಿಸಬೇಕು ಎನ್ನುವುದು ಅವರ ಸ್ವಂತ ಆಯ್ಕೆ. ಅದರ ನಡುವೆ ಪ್ರಭುತ್ವ ಯಾಕೆ ಬರಬೇಕು? ಮಹಿಳೆಯರು ತಮಗೆ ಬೇಕಾದ ಬಟ್ಟೆ ಧರಿಸುವುದು ಅವರ ಆಯ್ಕೆಯಾಗಿದೆ. ಹಿಜಾಬೋ ಇತ್ಯಾದಿ ಆಯ್ಕೆ ಮಹಿಳೆಯದ್ದು. ಅದರ ನಡುವೆ ಆಡಳಿತ ಬರಬಾರದು," ಎಂದು ಹೇಳಿದ ಜಲೀಲ್, "ಈ ಹಿಂದೆ ಉತ್ಸವ, ಉರೂಸುಗಳ ನೆಪದಲ್ಲಿ ದೇಶದ ಎಲ್ಲರೂ ಒಟ್ಟಿಗೆ ಸೇರುತ್ತಿದ್ದರು. ಎಲ್ಲರೂ ಜೊತೆಯಾಗಿ ಸೇರಲೆಂದೇ ಪೂರ್ವಜರು ಈ ಉತ್ಸವ, ಉರೂಸುಗಳನ್ನು ಆರಂಭ ಮಾಡಿರುವುದು. ವಿಶ್ವದ ಬೇರೆ ಎಲ್ಲೂ ಕೂಡಾ ಇಂತಹ ಆಚರಣೆಗಳು ಇಲ್ಲ. ಈಗ ಬೇರೆ ಧರ್ಮದ ವ್ಯಕ್ತಿ ವ್ಯಾಪಾರಕ್ಕೆ ಬರಬಾರದು ಎಂಬ ರಾಜಕೀಯ ನಡೆಸಲಾಗುತ್ತಿದೆ. ಧರ್ಮದ ವ್ಯಕ್ತಿ ವ್ಯಾಪಾರಕ್ಕೆ ಬಂದರೆ ಸಮಸ್ಯೆ ಏನು? ಯೂರೋಪ್, ಮದ್ಯಪ್ರಾಚ್ಯ ದೇಶಗಳು ಕೂಡಾ ಅದನ್ನೇ ಮಾಡಿದರೆ ವಿಶ್ವದ ಪರಿಸ್ಥಿತಿ ಎಲ್ಲಿಗೆ ತಲುಪುತ್ತದೆ," ಎಂದು ಪ್ರಶ್ನಿಸಿದರು.

"ಹಿಂದೂ ಕೋಮುವಾದಕ್ಕೆ, ಮುಸ್ಲಿಂ ಕೋಮುವಾದ ಉತ್ತರವಲ್ಲ"

"ಎಲ್ಲಾ ರೀತಿಯ ಕೋವುವಾದದ ವಿರುದ್ಧ ಸಿಪಿಐ(ಎಂ) ಹೋರಾಡುತ್ತದೆ. ಎಲ್ಲಾ ಜಾತಿ ಮತಗಳನ್ನು ಸಿಪಿಐ(ಎಂ) ಗೌರವಿಸುತ್ತದೆ. ಜಾಹಗೀರ್ ಪುರಿಯಲ್ಲಿ ಬೃಂದಾ ಕಾರಟ್ ಅದನ್ನೇ ಮಾಡಿದ್ದಾರೆ. ಬಾಬರಿ ಮಸೀದಿಯಲ್ಲಿ ಮೂರ್ತಿ ಉಂಟಾಗಿದೆ ಎಂದು ತಿಳಿಸಿದಾಗ ಅಂದಿನ ಯುಪಿ ಮುಖ್ಯಮಂತ್ರಿಗೆ ಪ್ರಧಾನಿ ನೆಹರೂ ಅದನ್ನು ಸರಯೂ ನದಿಯಲ್ಲಿ ಬಿಡುವಂತೆ ಹೇಳಿದರು. ಈ ರೀತಿಯ ದಿಟ್ಟ ನಿಲುವುಗಳನ್ನು ಕಾಂಗ್ರೆಸ್ ಇತ್ತೀಚೆಗೆ ತೆಗೆದುಕೊಳ್ಳುತ್ತಿಲ್ಲ. ಕಾಂಗ್ರೆಸ್ ಬಿಜೆಪಿಯ ಜೊತೆ ಸ್ಪರ್ಧಿಸಲು ತಾನು ಕೂಡಾ ಕಾವಿ ತೊಡಲು ಮುಂದಾಗಿದೆ," ಎಂದು ವಿಷಾದಿಸಿದರು. "ಕೇರಳದಲ್ಲಿ ಹಿಂದೂ ಮುಸ್ಲಿಮರ ಪ್ರತ್ಯೇಕ ಗಲ್ಲಿಗಳು ಇಲ್ಲ. ಯಾವುದೇ ಜಾತಿಯ ಬೀದಿಗಳು ಇಲ್ಲ. ನಾವು ಒಂದು ಧರ್ಮ ಜಾತಿಗೆ ಒಂದು ಬೀದಿ ಎಂಬ ಚಿಂತನೆಯನ್ನು ದೂರಮಾಡಬೇಕು. ಹಿಂದೂ ಕೋಮುವಾದಕ್ಕೆ ಮುಸ್ಲಿಂ ಕೋಮುವಾದ ಉತ್ತರವಲ್ಲ." ಎಂದರು.

ಸಮಾವೇಶದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ, "ದೇಶದಲ್ಲಿ ನಿರಂತರವಾಗಿ ಮುಸ್ಲಿಮರನ್ನು ಗುರಿಯಾಗಿಸಲಾಗುತ್ತಿದೆ. ಮುಖ್ಯವಾಗಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಬಳಿಕ ಮುಸ್ಲಿಮರ ಮೇಲಿನ ದಾಳಿಯು ಹೆಚ್ಚಾಗಿದೆ. ಅದರಲ್ಲೂ ಕಳೆದ ಎರಡು ವರ್ಷಗಳಿಂದ ಇಡೀ ವ್ಯವಸ್ಥೆಯೇ ಮುಸ್ಲಿಮರ ವಿರುದ್ಧವಾಗಿದೆ. ಮುಸ್ಲಿಮರ ವಿರುದ್ಧವಾಗಿ ಏನೇ ಹೇಳಿದರೂ ಅದು ಸತ್ಯ ಎಂಬಂತೆ ಮಾಧ್ಯಮಗಳು ಕೂಡಾ ಬಿಂಬಿಸುತ್ತಿರುವುದು ಖೇಧಕರ ಮುಸ್ಲಿಂ ಸಮುದಾಯವು ಧಮನಿತ ವರ್ಗವಾಗಿದೆ. ಧಮನಿತ, ಕಾರ್ಮಿಕರ ಪರವಾಗಿ ನಿಲ್ಲುವ ಪಕ್ಷವಾದ ಕಮ್ಯೂನಿಸ್ಟ್ ಪಕ್ಷ ಈ ಸಂದರ್ಭದಲ್ಲಿ ದಾಳಿಗೆ ಒಳಗಾಗುತ್ತಿರುವ ಮುಸ್ಲಿಮರ ಪರವಾಗಿ ನಿಲ್ಲಬೇಕಾಗಿದೆ," ಎಂದು ತಿಳಿಸಿದರು.

"ಸಾಚಾರ್ ವರದಿಯ ಜಾರಿಗೆ ಬದಲಿಗೆ ಮುಸ್ಲಿಮರ ವಿರುದ್ಧ ದಾಳಿಗಳು ನಡೆಯುತ್ತಿದೆ. ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಎಲ್ಲ ಕ್ಷೇತ್ರದಲ್ಲೂ ಮುಸ್ಲಿಮರ ಸಂಖ್ಯೆ ಕಡಿಮೆಯಾಗಿದೆ.

ಪುಟ 10 ಕ್ಕೆ



ಮುನೀರ್ ಕಾಟಿಪಳ್ಳ
ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು



ಮಾವಳ್ಳಿ ಶಂಕರ್
ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)
ರಾಜ್ಯ ಸಂಚಾಲಕರು



ಕೆ. ಶರೀಫ್, ಸಾಹಿತಿ



ಯು. ಬಸವರಾಜ
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ



ಸಯ್ಯದ್ ಮುಜೀಬ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ವಿಚಾರ ಮಂಡನೆ: ಸಿಪಿಐ(ಎಂ) ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶ

ಕೋಮುವಾದದ ಪ್ರಯೋಗಶಾಲೆಯಾಗಿ ಕರ್ನಾಟಕ

ಗೋಷ್ಠಿ–1

"ಕರ್ನಾಟಕ ಈವರೆಗೆ ಕೋಮುವಾದದ ಪ್ರಯೋಗಶಾಲೆಯಾಗಿಲ್ಲ. ಆದರೆ ಆ ಪ್ರಯತ್ನಗಳು ನಡೆಯುತ್ತಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಸುಮಾರು 30–40 ವರ್ಷಗಳಿಂದ ಕೋಮುವಾದದ ಪ್ರಯೋಗಶಾಲೆಯಾಗಿದೆ. ಇದರ ನಷ್ಟವನ್ನು ನಾವು ನೋಡಿದಾಗ ಮುಂದೆ ಕರ್ನಾಟಕವೂ ಹೀಗೆ ಆದಾಗ ಉಂಟಾಗುವ ನಷ್ಟವನ್ನು ಅರ್ಥ ಮಾಡಿಕೊಳ್ಳಬಹುದು," ಎಂದು ಹಂಪಿ ವಿ.ವಿ.ಯ ನಿವೃತ್ತ ಪ್ರಾಧ್ಯಾಪಕರಾದ ಡಾ. ಚಂದ್ರ ಪೂಜಾರಿ ಹೇಳಿದರು.

ಸಿಪಿಐ(ಎಂ) ಆಯೋಜಿಸಿದ್ದ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶದಲ್ಲಿ ನಡೆದ "ಕೋಮುವಾದದ ಪ್ರಯೋಗಶಾಲೆಯಾಗಿ ಕರ್ನಾಟಕ" ಗೊಷ್ಠಿಯಲ್ಲಿ ವಿಷಯ ಮಂಡನೆ ಮಾಡಿ ಹಂಪಿ ವಿ.ವಿ.ಯ ನಿವೃತ್ತ ಪ್ರಾಧ್ಯಾಪಕರಾದ ಡಾ. ಚಂದ್ರ ಪೂಜಾರಿಯವರು ಮಾತನಾಡಿದರು.

"ಸಾಮಾನ್ಯವಾಗಿ ಎಲ್ಲಾ ಪಕ್ಷಗಳು ಒಂದು ಸಮುದಾಯದ ಸಮಾವೇಶವನ್ನು ಮಾಡುವುದು ಚುನಾವಣೆ ಬಂದಾಗ. ಆದರೆ ಸಿಪಿಐ(ಎಂ) ಇಲ್ಲಿ ಮಾಡುತ್ತಿರುವುದು ವೋಟ್ ಬ್ಯಾಂಕ್ ಸಮಾವೇಶವಲ್ಲ. ಬರೀ ಸೋತವರ ಜೊತೆಯಲ್ಲಿ, ಪರವಾಗಿ ನಿಲ್ಲುವುದು ಸಿಪಿಐ(ಎಂ) ಪಕ್ಷದ ಉದ್ದೇಶವಾಗಿದೆ ಎಂದು ನಾನು ಹಲವಾರು ಮಂದಿಯಲ್ಲಿ ಮಾತನಾಡಿದಾಗ ತಿಳಿದು ಬಂದಿದೆ. ಇದೇ ಕಾರಣಕ್ಕೆ ನಾನು ಇಲ್ಲಿ ಭಾಗಿಯಾಗಿದ್ದೇನೆ," ಎಂದು ತಿಳಿಸಿದರು.

"20 ವರ್ಷದಿಂದ ಬಿಜೆಪಿ ಈ ಅವಿಭಜಿತ ಜಿಲ್ಲೆಯಲ್ಲಿ ಶಾಸಕ, ಸಂಸದ ಸೀಟು ಪಡೆಯುತ್ತಿದೆ. ಆದರೆ ದೊಡ್ಡ ಮಟ್ಟಿನ ಅಭಿವೃದ್ಧಿ ಆಗಿಲ್ಲ. ಬದಲಾಗಿ ಜನರು ಕೋಮುವಾದದ ನೆಲೆಯಲ್ಲಿಯೇ ಆಲೋಚನೆ ಮಾಡುವಂತಹ ಸ್ಥಿತಿ ನಿರ್ಮಾಣ ಮಾಡುವುದರಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಹಿಜಾಬ್, ಅಝಾನ್, ಹಲಾಲ್ ಎಂಬ ವಿಚಾರ ಮಂಗಳೂರಿನಲ್ಲೇ ಸೃಷ್ಟಿಯಾಗಿದೆ. ಈಗ ಕರ್ನಾಟಕವನ್ನು ಕೋಮುವಾದದ ಪ್ರಯೋಗಶಾಲೆಯನ್ನಾಗಿ ಮಾಡುವ ಪ್ರಯೋಗ ನಡೆಯುತ್ತಿದೆ. ಆ ಪ್ರಯೋಗದಲ್ಲಿ ಬಿಜೆಪಿ ಯಶಸ್ವಿಯಾಗುತ್ತದೆಯೇ ಎಂದು ಕಾದು ನೋಡಬೇಕಾಗಿದೆ.

ಅಭಿವೃದ್ಧಿ ವಿಚಾರದಲ್ಲಿ ನೋಡಿದಾಗ ಉತ್ತರ ಪ್ರದೇಶ ಪಾತಾಳದಲ್ಲಿದೆ. ಆದರೆ ಗೆಲುವು ಸಾಧಿಸಿದೆ. ಇದು ಭಾರೀ ದೊಡ್ಡ ಆಶ್ಚರ್ಯ. ಈ ಗೆಲುವಿಗೆ ಮುಖ್ಯ ಕಾರಣ ಮತಾಂತರ ನಿಷೇಧ, ಗೋ ಹತ್ಯೆ ನಿಷೇಧ ಎಂಬ ಕಾಯ್ದೆಗಳು ಆಗಿದೆ. ಈಗ ಕರ್ನಾಟಕದಲ್ಲೂ ಅದೇ ರೀತಿ ಮುನ್ನಡೆಯುವಂತೆ ಕಾಣುತ್ತಿದೆ," ಎಂದು ಹೇಳಿದರು.

"ಹಿಜಾಬ್ ವಿಚಾರದಲ್ಲಿ ಕೋರ್ಟ್ ಕೇಳಬೇಕಾದದ್ದು ಸಮವಸ್ತ್ರಕ್ಕೂ ಶಿಕ್ಷಣಕ್ಕೂ ಸಂಬಂಧವಿದೆಯೇ ಎಂದು. ಆದರೆ ಕೋರ್ಟ್ ಧಾರ್ಮಿಕ ಪ್ರಶ್ನೆಯನ್ನು ಕೇಳಿದೆ. ಹಿಜಾಬ್‌ಗೂ ಇಸ್ಲಾಂಗೂ ಸಂಬಂಧ ಇದೆಯೇ ಎಂದು ಕೋರ್ಟ್ ಕೇಳಿದೆ. ಕೋಮುವಾದವನ್ನು ಹರಡುವಲ್ಲಿ ಕೋರ್ಟ್ ಕೂಡಾ ಈ ಮೂಲಕ ಭಾಗಿಯಾಗಿದೆ," ಎಂದು ಆರೋಪ ಮಾಡಿದರು.

"ರಾಜ್ಯದಲ್ಲಿ ಪಠ್ಯ ಪುಸ್ತಕದ ಪರಿಷ್ಕರಣೆ ಮೂಲಕ ತಮ್ಮ ಕೋಮು ವಿಭಜನೆ ಮುಂದುವರಿಸಿದ್ದಾರೆ. ಮಕ್ಕಳನ್ನು ಸಣ್ಣ ವಯಸ್ಸಿನಲ್ಲೇ ಕೋಮುವಾದಿಗಳನ್ನಾಗಿ ಮಾಡುವ ಹುನ್ನಾರ ಇದರ ಹಿಂದೆ ಇದೆ. ಬ್ರಾಹ್ಮಣ್ಯ ತಿರಸ್ಕಾರ ಮಾಡುವ ಎಲ್ಲ ಪಠ್ಯ ತೆಗೆಯಲಾಗಿದೆ. ಬರೀ ಬಿಜೆಪಿ ತಮಗೆ ಬೇಕಾದ ಪಠ್ಯವನ್ನು ಉಳಿಸಿಕೊಂಡಿದೆ. ನೀತಿ ಪಾಠದಿಂದ ಕೋಮುವಾದ ನಿಲ್ಲದು. ಕೋಮುವಾದವನ್ನು ಸೃಷ್ಟಿ ಮಾಡಿದವರು ಚುನಾವಣೆಯಲ್ಲಿ ಸೋತಾಗ ಮಾತ್ರ ಕೋಮುವಾದಕ್ಕೆ ಕೊನೆ. ನಾವು ಆರ್ಥಿಕ ಕಾರಣಕ್ಕಾಗಿ ಕೋಮುವಾದವನ್ನು ವಿರೋಧ ಮಾಡಬೇಕಾಗಿದೆ. ಕೋಮುವಾದ ಹೆಚ್ಚಾದರೆ ಭಾರತದ ಸ್ಥಿತಿ ಶ್ರೀಲಂಕಾದಂತೆ ಆಗುತ್ತದೆ. ಕೋಮುವಾದ ಹೆಚ್ಚಾದರೆ ಅಲ್ಪಸಂಖ್ಯಾತರಿಗೆ ಮಾತ್ರ ತೊಂದರೆ ಆಗುವುದಲ್ಲ, ಬಹುಸಂಖ್ಯಾತರಿಗೂ ತೊಂದರೆಯಾಗುತ್ತದೆ," ಎಂದು ಅಭಿಪ್ರಾಯಿಸಿದರು.

ಭಾರತವನ್ನು ಹಿಂದೂ ದೇಶವನ್ನಾಗಿಸುವ ಉದ್ದೇಶ: ಡಾ. ಕೆ. ಪ್ರಕಾಶ್

"ದೇಶವನ್ನು ಕೋಮುಗ್ರಸ್ತ ಮಾಡುವಲ್ಲಿ ಅತ್ಯಂತ ಜಾಸ್ತಿ ಪಾಲಿರುವುದು ಸಂಘಪರಿವಾರದ್ದು. ಆರ್‌ಎಸ್‌ಎಸ್‌ಗೆ ಇನ್ನೆರೆಡು ವರ್ಷ ಕಳೆದರೆ ನೂರು ವರ್ಷವಾಗುತ್ತದೆ. ಅವರ ಹಿಂದಿನ ಉದ್ದೇಶ ಈ ದೇಶವನ್ನು ಹಿಂದೂ ದೇಶವನ್ನಾಗಿ ಮಾಡುವುದು ಆಗಿದೆ. ಭಾರತದ ಜಾತ್ಯಾತೀತ ಮತ್ತು ಸಂವಿಧಾನದ ಬಗ್ಗೆ ಆರ್‌ಎಸ್‌ಎಸ್‌ಗೆ ಯಾವುದೇ ಗೌರವವಿಲ್ಲ. ಅವರ ಪ್ರಕಾರ ಹಿಂದೂ ದೇಶ ಪ್ರಾಚೀನ ಕಾಲದಲ್ಲಿ ಇತ್ತು. ಅದನ್ನು ಪರಕೀಯರು ನಾಶ ಮಾಡಿದ್ದಾರೆ. ಹಾಗಾಗಿ ನಾವು ಹಿಂದೂ ಧರ್ಮವನ್ನು ಪುನಃಸ್ಥಾಪನೆ ಮಾಡಬೇಕು ಎಂದು ಆರ್‌ಎಸ್‌ಎಸ್ ಹೇಳುತ್ತದೆ. ಇದಕ್ಕಾಗಿಯೇ ಭಾರತದ ಇತಿಹಾಸವನ್ನು


ಡಾ. ಚಂದ್ರ ಪೂಜಾರಿ

ವೈಭವೀಕರಣ ಮಾಡುತ್ತಿದ್ದಾರೆ. ಅದರ ಭಾಗವಾಗಿಯೇ ಪಠ್ಯ ಪುಸ್ತಕದ ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಸಿಪಿಐಎಂ ಸಂಘಟಿಸಿರುವ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶದಲ್ಲಿ ಏರ್ಪಡಿಸಿದ್ದ "ಕೋಮುವಾದದ ಪ್ರಯೋಗಶಾಲೆಯಾಗಿ ಕರ್ನಾಟಕ" ಗೋಷ್ಠಿಯಲ್ಲಿ ವಿಷಯ ಮಂಡಿಸಿ ರಾಜಕೀಯ ವಿಶ್ಲೇಷಕರಾದ ಡಾ. ಕೆ. ಪ್ರಕಾಶ್ ಮಾತನಾಡಿದರು.

"ಪ್ರಸ್ತುತ ಸಮಾಜದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಾದ ಮಹಿಳೆಯರ ಅಸಮಾನತೆ, ನಿರುದ್ಯೋಗ, ಶಿಕ್ಷಣ, ಅನಾರೋಗ್ಯದ ಸಮಸ್ಯೆ ಕಾರಣ ಮುಸ್ಲಿಮರೇ ಕಾರಣ ಎಂಬಂತೆ ಬಿಂಬಿಸಲಾಗುತ್ತಿದೆ. ಇದಕ್ಕಾಗಿ ಆರ್‌ಎಸ್‌ಎಸ್, ಬಿಜೆಪಿ ಹಲವಾರು ವಾದಗಳನ್ನು ಮಾಡಿದೆ. ಅದುವೇ ಸತ್ಯ ಎಂಬಂತೆ ನಂಬಿಸಲಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಭಾರತದ ಒಳಗೆ ಇರುವ ಶತ್ರುಗಳು ಕಾರಣ ಎಂದು ಕೂಡಾ ಹೇಳುತ್ತಾರೆ. ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಷ್ಟರು ಶತ್ರುಗಳು ಎಂದು ಹೇಳುತ್ತಾರೆ. ಅವರನ್ನು ದ್ರೋಹಿಗಳು ಎಂಬಂತೆ ಬಿಂಬಿಸುತ್ತಿದ್ದಾರೆ," ಎಂದು ತಿಳಿಸಿದರು.


ಡಾ. ಕೆ. ಪ್ರಕಾಶ್


ಸುನಿಲ್ ಕುಮಾರ್ ಬಜಾಲ್

"ರಾಜಕೀಯ ಲಾಭಕ್ಕಾಗಿ ಹಿಂದುತ್ವವನ್ನು ಅಡಿಪಾಯವಾಗಿ ಕೆಲಸ ಮಾಡಲಾಗುತ್ತಿದೆ. ಸಮಾನತೆ, ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವಾಗ ಅದು ನಮ್ಮ ದೇಶದ ಮೂಲ ಸಂಸ್ಕೃತಿಯಲ್ಲ ಎಂದು ನಂಬಿಸುತ್ತಿದ್ದಾರೆ. ಜಾತ್ಯಾತೀತತೆ ಎಂಬ ಪರಿಕಲ್ಪನೆಯನ್ನೂ ಅವರು ವಿರೋಧಿಸುವುದು ಅವರು ಅದೇ ಕಾರಣಕ್ಕೆ. ಸಂವಿಧಾನದ ಮೂಲ ಆಧಾರ ಸ್ಥಂಭ ವಿದೇಶಿ ಕಲ್ಪನೆ ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ. ಅದಕ್ಕಾಗಿ ಸಂವಿಧಾನವನ್ನು ಬದಲಾವಣೆ ಮಾಡಬೇಕು ಎಂದು ಪದೇ ಪದೇ ಜನರ ತಲೆಗೆ ತುಂಬಿಸುತ್ತಾರೆ. ಈ ಸಂವಿಧಾನ ಬದಲಾವಣೆಗೆ ಅವರು ಪಡೆಯನ್ನು ಕಟ್ಟುತ್ತಾರೆ.

ಆರ್‌ಎಸ್‌ಎಸ್ ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಕೋಮುಪ್ರಯೋಗ ಶಾಲೆಯನ್ನಾಗಿ ಮಾಡಲು ಹೊರಟಿದೆ. ಮಕ್ಕಳಿಂದಲೇ ತಲೆಗೆ ಕೋಮು ದ್ವೇಷ ತುಂಬಿಸಲಾಗುತ್ತಿದೆ. ಹಾಗಾಗಿ ವಿದ್ಯಾರ್ಥಿಗಳ ನಡುವೆ ಹಿಜಾಬ್ ವಿಚಾರ ಹರಡಲಾಗಿದೆ. ಗಣ್ಯ ವ್ಯಕ್ತಿಗಳ ಮೂಲಕವೂ ಕೋಮು ದ್ವೇಷ ಹರಡಲಾಗುತ್ತಿದೆ. ದಲಿತ ಮತ್ತು ಬುಡಕಟ್ಟುಗಳ ನಡುವೆ ಎತ್ತಿಕಟ್ಟಿ ಅವರು ತಮ್ಮ ಕಾರ್ಯವನ್ನು ಸಾಧಿಸುತ್ತಿದ್ದಾರೆ. ಅದಕ್ಕೆ ಉದಾಹರಣೆ ಚಿತ್ರದುರ್ಗದ ನಾಯಕ ಸಮುದಾಯವನ್ನು ಹೈದರಾಳಲಿಯನ್ನು ತೋರಿಸಿ ಮುಸ್ಲಿಮರ ವಿರುದ್ದ ಎತ್ತಿಕಟ್ಟಿರುವುದು," ಎಂದು ಹೇಳಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರಾದ ಮುನೀರ್ ಕಾಟಿಪಳ್ಳ, "ಕರಾವಳಿ ರೀತಿಯಲ್ಲಿ ಇಡೀ ಕರ್ನಾಟಕವನ್ನು ಕೋಮುವಾದದ ಪ್ರಯೋಗಶಾಲೆ ಮಾಡಿಲ್ಲ ಎಂಬುವುದು ನಿಜವೆ ಆಗಿದೆ. ಆದರೆ ಪ್ರಯೋಗಶಾಲೆಯನ್ನಾಗಿ ಮಾಡುವ ಕೆಲಸ ಪ್ರಾರಂಭ ಆಗಿದೆ. ಜಾತ್ಯತೀತ ಪಕ್ಷದಲ್ಲಿ ಗೆದ್ದವರು ಶಾಸನ ಸಭೆಗಳಲ್ಲಿ ಕೋಮುವಾದಿಗಳ ಜೊತೆಗೆ ಕೈಜೋಡಿಸಿದಾಗ ಯಾವುದೂ ಅಸಾಧ್ಯವಿಲ್ಲ. ಕೋಮುವಾದದ ವಿರುದ್ಧದ ಹೋರಾಟದಲ್ಲಿ ಕೇವಲ ಕೋಮುವಾದದ ಬಗ್ಗೆ ಮಾತ್ರವಲ್ಲದೆ, ಜನರ ಬದುಕಿನ ಪ್ರಶ್ನೆಗಳನ್ನೂ ಜೋಡಿಸುವ ಕೆಲಸ ಮಾಡಬೇಕು," ಎಂದರು.

"ನಾರಾಯಣಗುರು ಸ್ಥಬ್ದಚಿತ್ರವನ್ನು ಮೋದಿ ಸರ್ಕಾರ ನಿರಾಕರಿಸಿದಾಗ, ಹಿಜಾಬ್ ವಿಚಾರವನ್ನು ಮುಂದೆ ತರಲಾಯಿತು. ಮುಸ್ಲಿಂ ಮತೀಯವಾದಿಗಳು ಬಹಳ ಹೆಚ್ಚಾಗಿ ಸಂಘಪರಿವಾರಕ್ಕೆ ಏನು ಬೇಕೋ ಅದನ್ನೇ ಮಾಡುತ್ತಿವೆ. ಹಿಂದೂ ಕೋಮುವಾದ ಕರಾವಳಿಯನ್ನು ಪ್ರಯೋಗ ಶಾಲೆಯನ್ನಾಗಿ ಮಾಡಿ ಸುಮಾರು ಮೂರು ದಶಕಗಳಾಗಿದೆ. ಆದರೆ ಈಗ ಮುಸ್ಲಿಂ ಕೋಮುವಾದಿಗಳು ಕೂಡಾ ಕರಾವಳಿಯನ್ನು ಪ್ರಯೋಗಶಾಲೆಯನ್ನಾಗಿ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತ ಕೋಮುವಾದ ಬಹುಸಂಖ್ಯಾತ ಕೋಮುವಾದಕ್ಕೆ ಬಲನೀಡುತ್ತಿದೆ. ಇದಕ್ಕೆ ಪೂರಕವಾಗಿ ಪಿಎಫ್‌ಐ

ಪುಟ 10 ಕ್ಕೆ

ಕರ್ನಾಟಕದ ಮುಸ್ಲಿಮರ ಸ್ಥಿತಿಗತಿ

ಗೋಷ್ಠಿ 2:

"ಧರ್ಮ ಎಂದಿಗೂ ಮನುಷ್ಯನ ಶೋಷಣೆಯ ಅಸ್ತ್ರವಾಗಬಾರದು, ಒಬ್ಬ ಧರ್ಮನಿರಪೇಕ್ಷ ಆಗದಿದ್ದರೆ ಇಸ್ಲಾಂ ಆಗಲು ಸಾಧ್ಯವಿಲ್ಲ. ಲಾಭಾಂಶ ಹಾಗೂ ಬಡ್ಡಿ ಹೆಚ್ಚಳ ಬಂಡವಾಳಶಾಹಿ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದಾರೆ. ಇದನ್ನೇ ಇಸ್ಲಾಂ ಕೂಡಾ ಹೇಳುತ್ತದೆ. ನಾವು ಯಾವುದೇ ವಿಚಾರವನ್ನು ಅಧ್ಯಯನದ ದೃಷ್ಟಿಯಿಂದ ನೋಡಬೇಕು. ರಾಜಕೀಯ ದೃಷ್ಟಿಯಿಂದ ನೋಡಬಾರದು," ಎಂದು ಹಿರಿಯ ಪತ್ರಕರ್ತರು ಬಿಎಮ್ ಹನೀಫ್ ರವರು ಸಿಪಿಐ(ಎಂ) ಆಯೋಜಿಸಿದ್ದ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶದಲ್ಲಿ ನಡೆದ "ಕರ್ನಾಟಕದ ಮುಸ್ಲಿಮರ ಸ್ಥಿತಿಗತಿ" ಗೋಷ್ಠಿಯಲ್ಲಿ ವಿಷಯ ಮಂಡನೆ ಮಾಡಿ ಮಾತನಾಡುತ್ತಾ ಹೇಳಿದರು.

ಮುಸ್ಲಿಮರ ನೋವು ಇನ್ನೊಬ್ಬರ ನೋವು ಕೂಡಾ ಹೌದು. ಹಲವಾರು ಮಂದಿ ಮುಸ್ಲಿಮರೆಲ್ಲರೂ ಒಂದೇ ರೀತಿ, ಅವರ ಸಂಸ್ಕೃತಿ ಒಂದೇ ಅಂದು ಕೊಳ್ಳುತ್ತಾರೆ. ಆದರೆ ನೈಜವಾಗಿ ಆ ರೀತಿ ಇಲ್ಲ. ಮುಸ್ಲಿಮರಲ್ಲೂ ಹಲವಾರು ವ್ಯತ್ಯಾಸಗಳು ಇದೆ. ಮುಸ್ಲಿಮರ ಸಂಸ್ಕೃತಿ, ಆಹಾರ ಪದ್ಧತಿಯಲ್ಲಿ ವೈವಿಧ್ಯತೆ ಇದೆ. ಕರ್ನಾಟಕದಲ್ಲಿ ಹೇಗೆ ಬೇರೆ ಬೇರೆ ಸಂಸ್ಕೃತಿ ಇದೆಯೋ ಹಾಗೆಯೇ ಮುಸ್ಲಿಮರಲ್ಲಿದೆ. ಯಾವುದೆ ಧರ್ಮಕ್ಕೆ ಒಂದೇ ಸಂಸ್ಕೃತಿ ಇಲ್ಲ. ಸಂಸ್ಕೃತಿ ಎನ್ನುವುದು ಪ್ರಾದೇಶಿಕವಾದುದು. ಧರ್ಮ ಎಂಬುವುದು ಮನುಷ್ಯ ಹಾಗೂ ದೇವರ ನಡುವಿನ ಸಂವಾದ. ಈ ವ್ಯತ್ಯಾಸಗಳು ಗೊತ್ತಾದರೆ ಮಾತ್ರ ಸರಿಯಾದ ಉತ್ತರ ನೀಡಲು ಸಾಧ್ಯವಾಗುತ್ತದೆ. ಸಂಸ್ಕೃತಿ


ಬಿಎಮ್ ಹನೀಫ್, ಪತ್ರಕರ್ತರು

ಬದಲಾದಂತೆ ಮನುಷ್ಯ, ಮನುಷ್ಯನ ನಡುವೆ ಬಿರುಕು ಸೃಷ್ಟಿಯಾಗುತ್ತದೆ," ಎಂದು ತಿಳಿಸಿದರು.

"ಕರ್ನಾಟಕದಲ್ಲಿ ಧರ್ಮ ರಕ್ಷಣೆ ಮಾಡುವ ಕೆಲಸವನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ. ತಾವು ನಿಜವಾಗಿ ಮಾಡಬೇಕಾದ ಕೆಲಸವನ್ನು ಮರೆತಿದ್ದಾರೆ. ಮಠಾಧೀಶರು ರಾಜಕೀಯ ಮಾತನಾಡುತ್ತಿದ್ದಾರೆ. ಪರಿಸ್ಥಿತಿಯು ಉಲ್ಟಾ ಆಗಿದೆ. ಇದು ಸಹಜ ಎಂಬಂತೆ ಬಿಂಬಿತವಾಗುತ್ತಿದೆ. ನೀವು ನಿಮ್ಮ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮಾತನಾಡಲು ಸಾಧ್ಯವಾಗದಂತಹ ಸ್ಥಿತಿಯನ್ನು ಸರ್ಕಾರ ತಂದಿದೆ. ರಾಜ್ಯದಲ್ಲಿ ಕಾನೂನು ಸಂಪೂರ್ಣವಾಗಿ


ಕೆ. ನೀಲಾ


ಬಿ. ಪೀರ್ ಭಾಷಾ


ಜೀವನ್‌ರಾಜ್ ಕುತ್ತಾರು, ನಿರ್ವಹಣೆ

ಪುಟ 10 ಕ್ಕೆ

ಜಾತ್ಯಾತೀತತಯೇ ನಮ್ಮ ಜೀವವಾಯು, ಜಾತ್ಯತೀತತೆ ಇಲ್ಲವಾದರೆ ಭಾರತವಿಲ್ಲ......

ಪುಟ 8 ರಿಂದ

ಖೇದಕರ ಸ್ಥಿತಿಯಲ್ಲಿ ಮುಸ್ಲಿಂ ಸಮುದಾಯವಿದೆ. ಮುಸ್ಲಿಮರು ಪ್ರತ್ಯೇಕತಾ ಮನಸ್ಥಿತಿಗೆ ತಲುಪಬಾರದು, ಮುಸ್ಲಿಮರನ್ನು ಜಾತ್ಯಾತೀತ ಶಕ್ತಿಗಳೊಂದಿಗೆ ಒಟ್ಟಿಗೆ ಕೊಂಡೊಯ್ಯುವುದು ಈ ಸಮಾವೇಶದ ಮುಖ್ಯ ಉದ್ದೇಶವಾಗಿದೆ. ಇದು ಮುಸ್ಲಿಮರ ಸಮಾವೇಶವಲ್ಲ, ಮುಸ್ಲಿಂ ಸಮಾವೇಶ ಎಂದರು.

ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷರಾದ ಮಾವಳ್ಳಿ ಶಂಕರ್ ಮಾತನಾಡುತ್ತಾ ಸಿದ್ದಲಿಂಗಯ್ಯ ಅವರ ಕಾಲದಲ್ಲಿ ಮಂಗಳೂರಿಗೆ ಬಂದಾಗ ದಕ್ಷಿಣ ಕನ್ನಡ ಇಡೀ ಕೆಂಬಾವುಟ ಹಾರಾಡುತ್ತಿತ್ತು. ಆದರೆ ಈಗ ಮಂಗಳೂರಿನಲ್ಲಿ ಕೇಸರಿ ಭಾವುಟ ಎಲ್ಲೆಡೆ ಹಾರುವಂತಹ ಕೆಳಮಟ್ಟಕ್ಕೆ ಇಳಿದಿದೆ. ದಲಿತರ ಬದುಕಿಗೆ ಬೆಳಕುಕೊಟ್ಟ ಕುದ್ಮುಲ್ ರಂಗರಾವ್ ಮತ್ತು ನಾರಾಯಣ ಗುರು ಹುಟ್ಟಿದ ಊರು ಕರಾವಳಿ. ಸದ್ಯ ಸರ್ಕಾರವು ನಾರಾಯಣ ಗುರು ಟ್ಯಾಬ್ಲೋಗೆ ಅವಕಾಶ ನೀಡದಂತಹ ಕೆಳಮಟ್ಟಕ್ಕೆ ಇಳಿದಿದೆ. ಜನರು ಸರ್ಕಾರದ ಈ ನಡೆಯ ವಿರುದ್ಧವಾಗಿ ಧ್ವನಿ ಎತ್ತಿದಾಗ ಸರ್ಕಾರವು ಜನರನ್ನು ಬೇರಡೆ ಸೆಳೆಯಲೆಂದು ಹಿಜಾಬ್ ವಿಚಾರವನ್ನು ಮುನ್ನಲೆಗೆ ತಂದಿದೆ," ಎಂದು ಆರೋಪ ಮಾಡಿದರು.

"ದೇಶದ ಸ್ವಾತಂತ್ರ್ಯದ ಬಳಿಕ ದೇಶವನ್ನು ಲೂಟಿ ಹೊಡೆಯುವವರಿಗೆ ಈ ದೇಶದ ಆಡಳಿತ ಹೋಗಬಾರದು ಎಂಬುವುದು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಆಶಯವಾಗಿತ್ತು. ಇದು ಬಸವಣ್ಣನ ನೆಲ, ಪಂಪ ಮನುಜ ಜಾತಿ ತಾನೊಂದೇ ವಲಂ ಎಂದು ಹೇಳುತ್ತಾರೆ, ಕುವೆಂಪು ಇದು ಸರ್ವ ಜನಾಂಗದ ತೋಟ ಎಂದು ಹೇಳಿದ್ದಾರೆ. ನಾವಿಂದು ಇದನ್ನು ಉಳಿಸಬೇಕಾಗಿದೆ. ಈ ದೇಶವನ್ನು ಅಶಾಂತಿಯ ಬೀಡನ್ನಾಗಿ ಮಾಡಲು ಹೊರಟವರಿಗೆ ನಾವು ತಕ್ಕ ಪಾಠ ಕಲಿಸಬೇಕಾಗಿದೆ. ಇಲ್ಲಿನ ದಲಿತ, ಮುಸ್ಲಿಂ, ಮಹಿಳೆಯರು ಸಮಾನವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ದೇಶದಲ್ಲಿ ದಲಿತ ಮತ್ತು ಮುಸ್ಲಿಂ ಸಮುದಾಯಗಳ ಹತ್ಯಾಕಾಂಡಗಳು ನಡೆದಿದೆ. ಇಲ್ಲಿನ ವೈದಿಕವಾದಿಗಳು ದಾಳಿಯನ್ನು ಮಾಡಿದ್ದಾರೆ," ಎಂದರು.

"ಪ್ರಸ್ತುತ ಗೋವನ್ನು ಪವಿತ್ರ ಎಂದು ಹೇಳುತ್ತಾರೆ. ಹಾಗೆ ಹೇಳುವವರು ಕೋಳಿ, ಕುರಿ ಯಾಕೆ ಪವಿತ್ರ ಎಂದು ಹೇಳುವುದಿಲ್ಲ. ಗೋವನ್ನು ನಮ್ಮ ದೇಶದಲ್ಲಿ ತಿನ್ನಬಾರದು ಎಂದು ಹೇಳುತ್ತಾರೆ. ಆದರೆ ಟನ್‌ಗಟ್ಟಲೆ ಗೋ ಮಾಂಸವನ್ನು ಹೊರದೇಶಕ್ಕೆ ರಫ್ತು ಮಾಡುತ್ತಾರೆ. ಕರ್ನಾಟಕದ ಪಠ್ಯ ಪುಸ್ತಕದಲ್ಲಿ ಕೂಡಾ ಹಲವಾರು ಬದಲಾವಣೆ ಮಾಡಲಾಗಿದೆ. ಬರಗೂರು ರಾಮಚಂದ್ರಪ್ಪ ಎಂಬ ಚಿಂತಕರನ್ನು ಹೊರಗಿಟ್ಟು, ಕುವೆಂಪು ಮತ್ತು ನಾಡಗೀತೆಯನ್ನು ನಿಂದಿಸಿದ ನಾಡದ್ರೋಹಿಯನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಹೆಡ್ಗೆವಾರ್ ಮತ್ತು ಸೂಲಿಬೆಲೆ ಪಾಠವನ್ನು ಹಾಕಲಾಗಿದೆ. ಒಂದೇ ಸಮುದಾಯದ ಪಠ್ಯವನ್ನು ಹಾಕಲಾಗಿದೆ. ಈ ಮೂಲಕ ರಾಜ್ಯವನ್ನು ದಿಕ್ಕುದೆಸೆಯಿಲ್ಲದ ವಾತಾವರಣ ಸೃಷ್ಟಿ ಮಾಡಲಾಗುತ್ತದೆ. ನಾವು ಈ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರಬೇಕಾಗಿದೆ. ನಾವೆಲ್ಲರೂ ಸರ್ಕಾರದ ಈ ಕೋಮುದ್ರುವೀಕರಣದ ವಿರುದ್ಧ ಹೋರಾಟ ಮಾಡಬೇಕಾಗಿದೆ," ಎಂದು ತಿಳಿಸಿದರು.

ಮತ್ತೋರ್ವ ಅತಿಥಿಗಳಾಗಿ ಭಾಗವಹಿಸಿದ್ದ ಸಾಹಿತಿ ಕೆ.ಶರೀಫಾರವರು "ಮುಸ್ಲಿಮರ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿದೆ. ಎಷ್ಟು ದಿನ ತಾಳ್ಮೆಯಿಂದ ಕೂರಲು ಸಾಧ್ಯ?. ಒಂದಲ್ಲ ಒಂದು ದಿನ ತಿರುಗಿ ಬೀಳುತ್ತಾರೆ. ಆದರೂ ಮುಸ್ಲಿಮರು ಈವರೆಗೆ ತಾಳ್ಮೆಯಿಂದ ಇರುವುದಕ್ಕೆ ಧನ್ಯವಾದಗಳು. ಮಹಿಳೆಯು ತಾವು ಯಾವ ಬಟ್ಟೆ ಹಾಕಬೇಕು ಎಂಬುವುದು ಅವರಿಗೆ ಬಿಟ್ಟ ವಿಚಾರವಾಗಿದೆ. ಅದು ಮಹಿಳೆಯ ಹಕ್ಕಾಗಿದೆ. ಹಿಂದೂ ಮುಸ್ಲಿಂ ಎಂಬ ವಿಚಾರದಲ್ಲೇ ನಾವು ವಾಗ್ವಾದ, ದಾಳಿ ಪ್ರತಿ ದಾಳಿಗಳನ್ನು ಮಾಡುತ್ತಾ ಕೂತರೆ ನಾವು ಪ್ರಗತಿಯನ್ನು ಸಾಧಿಸಲು ಸಾಧ್ಯವೇ,?" ಎಂದು ಪ್ರಶ್ನಿಸಿದರು.

"ಹಿಜಾಬಿನ ವಿಚಾರದಲ್ಲಿ ದೇಶದ ಮರ್ಯಾದೆಯಲ್ಲಿ ಜಗತ್ತಿನಲ್ಲಿ ಹರಾಜಾಗಿದೆ. ಸರ್ಕಾರವು ಕ್ರೂರ ವ್ಯಕ್ತಿಗಳಿಗೆ ರಕ್ಷಣೆಯನ್ನು ನೀಡುತ್ತದೆ. ರಾಜಕೀಯ ಹಾಗೂ ಆರ್ಥಿಕ ವಿಚಾರದಲ್ಲಿ ಮುಸ್ಲಿಮರು ಎದ್ದು ನಿಲ್ಲಬೇಕಾಗಿದೆ. ರಾಜ್ಯದಲ್ಲಿ ಎಂಬತ್ತು ಲಕ್ಷ ಮುಸ್ಲಿಮರಿದ್ದು ಅವರಿಗೆ ಸಿಗಬೇಕಾದ ಸವಲತ್ತು ಲಭ್ಯವಾಗುತ್ತಿಲ್ಲ. ಎರಡು ಶೇಕಡ ಇರುವ ಬ್ರಾಹ್ಮಣರಿಗೆ ಹತ್ತು ಶೇಖಡ ಮತ್ತು ಹದಿನಾಲ್ಕು ಶೇಕಡ ಇರುವ ಮುಸ್ಲಿಮರಿಗೆ ನಾಲ್ಕು ಶೇಕಡ ಮೀಸಲಾತಿ ಇದೆ. ಇದರ ವಿರುದ್ಧ ನಾವು ಹೋರಾಟ ಮಾಡಬೇಕಾಗಿದೆ. ಮಹಿಳೆಯರು, ಶೋಷಿತರು ಎಲ್ಲರೂ ಸೇರಿ ಭಾರತವನ್ನು ಕಟ್ಟಬೇಕು," ಎಂದು ಕರೆ ನೀಡಿದರು.

ಮತ್ತೋರ್ವ ಅತಿಥಿಗಳಾಗಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾದ ಯು. ಬಸವರಾಜರವರು ಮಾತನಾಡಿ, "ಬೆಂಗಳೂರಿನಲ್ಲಿ ರೈತ ಮುಖಂಡ ರಾಕೇಶ್ ಟಿಕಾಯತ್ ಮತ್ತು ಯದುವೀರ್ ಸಿಂಗ್ ಮೇಲೆ ನಡೆದ ದಾಳಿಯನ್ನು ಖಂಡಿಸಿದರು. ಕೇಂದ್ರ ಸರ್ಕಾರ ರೈತರ ಮುಂದೆ ಮಂಡಿಯೂರಿ ಕೃಷಿ ಕಾಯ್ದೆಯನ್ನು ವಾಪಾಸು ಪಡೆದಿದೆ. ಆದರೆ ರಾಜ್ಯದಲ್ಲಿ ರೈತ ಕಾಯ್ದೆ ವಾಪಾಸು ಪಡೆಯದೆ, ರೈತ ಮತ್ತು ಕಾರ್ಮಿಕರ ಗಮನವನ್ನು ಬೇರೆಡೆಗೆ ಸೆಳೆಯಲು ಹಿಜಾಬ್ ಮತ್ತು ಕೋಮುಧ್ರುವೀಕರಣ ಮಾಡುತ್ತಿದೆ. ಹಿಂದುತ್ವವಾದಿ ಶಕ್ತಿಗಳು ಮುಸಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದ ಮೇಲೆ ದಾಳಿ ನಡೆಸುತ್ತಿರುವಾಗ ಈ ಸಮುದಾಯಗಳು ಜಾತ್ಯಾತೀತ ಶಕ್ತಿಗಳೊಂದಿಗೆ ಸೇರದಂತೆ ಕಾರ್ಪೋರೇಟ್ ಶಕ್ತಿಗಳು ನೋಡಿಕೊಳ್ಳುತ್ತಿವೆ," ಎಂದು ತಿಳಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಯ್ಯದ್ ಮುಜೀಬ್ ಅವರು ಮಾತನಾಡಿ, "ಮುಸ್ಲಿಮರನ್ನು ಎರಡನೇ ದರ್ಜೆಯನ್ನಾಗಿ ಮಾಡುತ್ತಿರುವ ಸಂದರ್ಭದಲ್ಲಿ ಈ ಸಮಾವೇಶ ಅರ್ಥಪೂರ್ಣವಾಗಿದೆ. ನಮ್ಮ ವ್ಯವಸ್ಥೆಯು ಮುಸ್ಲಿಂ ದ್ವೇಷ ರಾಜಕಾರಣವನ್ನು ಮುಂದಿಟ್ಟು ಅಧಿಕಾರ ಗಿಟ್ಟಿಸುವಲ್ಲಿಗೆ ಬಂದಿದೆ. ಕಾಂಗ್ರೆಸ್ ಮುಸ್ಲಿಮರನು ಓಲೈಸುತ್ತದೆ ಎಂದು ಬಿಜೆಪಿ ಹೇಳುತ್ತದೆ, ಆದರೆ ಕಾಂಗ್ರೆಸ್ ಮುಸ್ಲಿಮರಿಗೆ ಏನು ನೀಡಿದೆ ಎಂದು ಸಾಚಾರ್ ವರದಿ ಹೇಳಿದೆ. ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಅಭಿವೃದ್ಧಿ ಸಾಧ್ಯವಿಲ್ಲ ಎಂಬುವುದನ್ನು ಸರ್ಕಾರ ಮನಗಾಣಬೇಕು. ಪಂಪನಿಂದ ಪ್ರಾರಂಭವಾಗಿ ಕುವೆಂಪು ಆದಿಯಾಗಿ ಗೋಪಾಲ ಕೃಷ್ಣ ಅಡಿಗರವರೆಗೆ ಮನುಷ್ಯರ ನಡುವಿನ ತಾರತಮ್ಯದ ವಿರುದ್ಧ ನಮ್ಮ ಪರಂಪರೆ ಮಾತನಾಡಿದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ನವೀನ್ ಸೂರಿಂಜೆ ಅವರ "ನೇತ್ರಾವತಿಯಲ್ಲಿ ನೆತ್ತರು", ಸಾಹಿತಿ ಬಿ.ಎಂ. ಹನೀಫ್ ಅವರ "ಸೆಕ್ಯೂಲರ್ ಸೇನಾನಿ ಸುಭಾಸ್ ಚಂದ್ರ ಬೋಸ್" ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ವೇದಿಕೆಯಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯಾಧ್ಯಕ್ಷರು ಮಾವಳ್ಳಿ ಶಂಕರ್, ಹಿರಿಯ ಸಾಹಿತಿ ಡಾ। ಕೆ. ಷರೀಫಾ, ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಯು. ಬಸವರಾಜು, ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ. ಯಾದವ್ ಶೆಟ್ಟಿ, ಸಾಹಿತಿ ಕೆ. ನೀಲಾ, ರಾಜ್ಯ ಮುಖಂಡರು ಎಸ್. ವರಲಕ್ಷ್ಮೀ, ಕೆ. ಪ್ರಕಾಶ್, ಅಕ್ರಂ ಪಾಶ ಬಾಗೇಪಳ್ಳಿ, ಶೇಖ್ ಷಾ ಖಾದ್ರಿ, ಖಾಸಿಂ ಸರ್ದಾರ್ ರಾಮದುರ್ಗ, ಖಾಸಿಂ ಕೊಪ್ಪಳ ಉಪಸ್ಥಿತರಿದ್ದರು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಸಯ್ಯದ್ ಮುಜೀಬ್ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕದ ಮುಸ್ಲಿಮರ ಸ್ಥಿತಿಗತಿ.........

ಪುಟ 9 ರಿಂದ

ಹದಗೆಟ್ಟಿದೆ, ದರಿದ್ರವಾಗಿದೆ," ಎಂದು ಹೇಳಿದರು.

"ನಾವು ಈವರೆಗೂ ಬಿಜೆಪಿ, ಆರ್‌ಎಸ್‌ಎಸ್ ಟಿಪ್ಪು ಸುಲ್ತಾನನ ವಿರೋಧಿಗಳು ಎಂದು ತಿಳಿದಿದ್ದೆವು. ಆದರೆ ಅವರು ನಾರಾಯಣ ಗುರು, ಕುವೆಂಪು, ಬಸವಣ್ಣನ ವಿರೋಧಿಗಳು ಎಂದು ಪುಸ್ತಕ ಪರಿಷ್ಕರಣೆ ಮಾಡಿದಾಗ ಬಹಿರಂಗವಾಗಿದೆ. ನಿಜಾಂಶ ಈಗ ಹೊರಬರುತ್ತಿದೆ. ಆದರೆ ನಾವು ಈ ಸಂದರ್ಭದಲ್ಲಿ ಎಡವಬಾರದು. ಕೆಟ್ಟ ಮಾತಿಗೆ ಕೆಟ್ಟ ಮಾತು ಉತ್ತರವಲ್ಲ. ಶಿರವಸ್ತ್ರ (ಸ್ಕಾರ್ಫ್) ಧರಿಸದಿದ್ದರೆ ಧರ್ಮವೇನು ಕೊನೆಯಾಗಲ್ಲ. ಹಾಗೆಯೇ ಶಿರವಸ್ತ್ರ ಧರಿಸಿದರೆ ಶಿಕ್ಷಣಕ್ಕೆ ಏನು ತೊಂದರೆಯಾಗಲ್ಲ" ಎಂದು ಅಭಿಪ್ರಾಯಪಟ್ಟರು.

ಸಾಚಾರ್ ವರದಿಯಲ್ಲಿ ಎಲ್ಲಾ ರಾಜ್ಯಗಳು ಅಲ್ಪಸಂಖ್ಯಾತ ಆಯೋಗವನ್ನು ರದ್ದು ಮಾಡಬೇಕು ಎಂದು ಹೇಳಿದೆ. ಈ ಸಮಿತಿಯು ಮುಸ್ಲಿಮರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಯ ಬಗ್ಗೆ ಸಮೀಕ್ಷೆ ನಡೆಸಿದ್ದು ಈ ವೇಳೆ ಮುಸ್ಲಿಮರ ಸ್ಥಿತಿ ದಲಿತರಿಗಿಂತ ಕೆಳಗಿದೆ ಎಂದು ಬಹಿರಂಗವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಮುಸ್ಲಿಂ ಆಯೋಗವನ್ನು ರದ್ದು ಮಾಡಿ, ಸಮಾನ ಪ್ರಾತಿನಿಧ್ಯದ ಆಯೋಗ ರಚನೆ ಆಗಬೇಕು ಎಂದು ಈ ವರದಿ ಹೇಳುತ್ತದೆ," ಎಂದರು.

"ಕನ್ನಡದ ಸಂಸ್ಕೃತಿಯೆಂದರೆ ಬಸವಣ್ಣನ, ಶಿಶುನಾಳ ಷರೀಫರ, ರೆವರೆಂಡ್ ಎಫ್ ಕಿಟ್ಟೆಲ್ ರ ಸಂಸ್ಕೃತಿ. ಕುವೆಂಪು ಕಟ್ಟಿದ ಸಂಸ್ಕೃತಿ, ಸಿನಿಮಾ ಮೂಲಕ ಕಟ್ಟಿದ ಸಂಸ್ಕೃತಿ, ರಾಜಕುಮಾರ್ ಕಟ್ಟಿದ ಸಂಸ್ಕೃತಿ," ಎಂದು ಹೇಳಿದ ಬಿಎಮ್ ಹನೀಫ್, "ಕಮ್ಯೂನಿಸ್ಟ್ ಪಕ್ಷಗಳು ಕೋಮುವಾದದ ವಿರುದ್ಧ ಸ್ಪಷ್ಟ ಸೈದ್ಧಾಂತಿಕ ಹೋರಾಟ ಮಾಡುತ್ತಿವೆ. ಮುಸ್ಲಿಮರನ್ನು ಪ್ರತ್ಯೇಕವಾಗಿ ನೋಡದೆ ಅವರು ದೇಶದ ಆರ್ಥಿಕತೆಗೆ ನೀಡಿದ ಕೊಡುಗೆಗಳನ್ನು ನಾವು ನೋಡಬೇಕಾಗಿದೆ. ಜೀತಾದಾರಿಕೆಗೂ ಒಂದು ಇತಿಮಿತಿ ಇದೆ. ರಾಜಕೀಯ ಜೀತಾದಾರಿಕೆಯನ್ನು ಬಿಡಬೇಕು," ಎಂದು ಹೇಳಿದರು.

ಗೋಷ್ಠಿಯಲ್ಲಿ ವಿಷಯ ಮಂಡಿಸುತ್ತಾ ಮಾತನಾಡಿದ ಚಿಂತಕರು, ಬರಹಗಾರರಾದ ಬಿ. ಪೀರ್ ಭಾಷಾ "ಪ್ರಭುತ್ವ ಬಹಳ ಸ್ಪಷ್ಟವಾಗಿ ಫ್ಯಾಸಿಸ್ಟ್ ಆಗಿದೆ. ಆದರೆ ಅದು ಮುಸಲೋನಿ ಮತ್ತು ಹಿಟ್ಲರ್ ಮಾಡಿದಂತೆ ಅಲ್ಲ. ನಾವು ಈಗಾಗಲೇ ಭಾರತೀಯ ಫ್ಯಾಸಿಸಂ ಗೆ ಒಳಗಾಗಿದ್ದೇವೆ. ಇದು ಪ್ರಯೋಗಶಾಲೆ ಮಾತ್ರವಲ್ಲ, ಇದು ಫ್ಯಾಸಿಸಂನ ಮುನ್ನಡೆಯಾಗಿದೆ. ಗೋಳ್ವಾಲಕರ್ ಬಹಳ ಸ್ಪಷ್ಟವಾಗಿ ಕಮ್ಯುನಿಸ್ಟರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಈ ದೇಶದ ಒಳಗಿನ ಶತ್ರುಗಳು ಎಂದು ಹೇಳಿದ್ದಾರೆ. ಹೀಗಾಗಿ ಈ ಮೂವರೂ ಒಗ್ಗಟ್ಟಾಗಬೇಕು ಎಂಬುವುದು ನನ್ನ ಅನಿಸಿಕೆ," ಎಂದರು.

"ಭಾರತದಲ್ಲಿ ಧಮನ ಎನ್ನುವುದು ವರ್ಗದ ಆಧಾರದಲ್ಲಿ ಮಾತ್ರವಲ್ಲ. ಜೊತೆಗೆ ಜಾತಿಯ ಆಧಾರದಲ್ಲೂ ಶೋಷಣೆ ನಡೆಯುತ್ತಿದೆ. ಭಾರತದ ಮುಸ್ಲಿಮರು ನೇರವಾಗಿ ಅರಬ್ ರಾಷ್ಟ್ರದಿಂದ ಬಂದವರು ಅಲ್ಲ. ಅವರು ಕೂಡಾ ಇಲ್ಲಿನ ಒಂದು ಕಾಲದ ಶೋಷಿತ ಸಮುದಾಯದವರೇ ಆಗಿದ್ದಾರೆ. ಭಾರತೀಯ ಮುಸ್ಲಿಮರು ಇಲ್ಲಿನ ಶೂದ್ರ ಸಂಸ್ಕೃತಿಯೊಂದಿಗೆ ಬೆಸೆದಿದ್ದಾರೆ.

ಮುಸ್ಲಿಮರು ಮನುವಾದ ವಿರುದ್ಧ ಸಿಡಿದು ಬಂದವರಾಗಿದ್ದಾರೆ. ಆದ್ದರಿಂದಲೇ ಅವರನ್ನು ಕ್ರೂರವಾಗಿ ದಮನಿಸಲಾಗುತ್ತಿದೆ. ದಲಿತರನ್ನು ಸಾಂಸ್ಕೃತಿಕ ಅಸ್ತ್ರದ ಮೂಲಕ ನಿಯಂತ್ರಿಸಲಾಗುತ್ತಿದೆ. ಈ ಎರಡು ಸಮುದಾಯಗಳೆ ಭಾರತದ ಭವಿಷ್ಯವನ್ನು ನಿರ್ಮಾಣ ಮಾಡಬಹುದಾಗಿದೆ. ಹಿಂದೂ–ವರ್ಸಸ್ ಮುಸ್ಲಿಂ ಎಂಬ ಧ್ರುವೀಕರಣ ಮಾಡಲಾಗುತ್ತಿದೆ. ಹಿಂದೂ ಮೂಲಭೂತವಾದಕ್ಕೆ ಬೇಕಾಗಿದ್ದು ಮುಸ್ಲಿಂ ಮೂಲಭೂತವೇ ಎಂಬ ವಿಚಾರದಲ್ಲಿ ಚಿಂತನೆ ನಡೆಸಬೇಕಾಗಿದೆ, ಎಚ್ಚರವಾಗಿರಬೇಕಾಗಿದೆ. ಮುಸ್ಲಿಮರು ಮತೀಯವಾದಿಗಳು ಆಗಬಾರದು. ಜನಚಳವಳಿ ಕೂಡಾ ಮುಸ್ಲಿಮರ ಜೊತೆಯಾಗಬೇಕು. ಮುಸ್ಲಿಮರು ಪ್ರಜಾಪ್ರಭುತ್ವದೆಡೆ ಹೆಜ್ಜೆ ಇರಿಸಬೇಕು ಎಂದರು.

"ಕೂಡಿಬಾಳುವುದು ನಮ್ಮ ನಾಡಿನಲ್ಲಿ ಇರುವ ಪರಂಪರೆ. ಹಿಂದೂ ಮುಸ್ಲಿಂ ನಾವು ಒಂದು ಕೂಡಿ ಬದುಕುತ್ತೇವೆ, ಅದರಿಂದಾಗಿ ಅವರ ಗಂಟು ಏನು ಹೋಗುತ್ತದೆ. ನಮ್ಮ ಭಾವೈಕ್ಯತೆಯನ್ನು ಅವರು ಅಳಿಸಲು ಹೇಗೆ ಸಾಧ್ಯ," ಎಂದ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಸಾಹಿತಿಗಳೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ನೀಲಾರವರು, "ನಿರುದ್ಯೋಗ, ಬಡತನ, ಬೆಲೆ ಏರಿಕೆ, ಕಳ್ಳಕೂಟ ಸೃಷ್ಟಿ ಮಾಡುತ್ತಾರೆ. ಇವೆಲ್ಲವನ್ನು ಮರೆ ಮಾಡಲು ಈಗ ಗಲಾಟೆಗಳನ್ನು ಸೃಷ್ಟಿ ಮಾಡುತ್ತಾರೆ. ಜಾಗತಿಕ ಮಟ್ಟದಲ್ಲಿ ಮಾಡಿದ ಷಡ್ಯಂತ್ರದಿಂದಾಗಿ ದಲಿತರು ಮತ್ತು ಮುಸ್ಲಿಮರು ಕಮ್ಯುನಿಷ್ಟರಿಂದ ದೂರ ಹೋಗುವಂತಾಯಿತು. ಪ್ರತಿ ಬಾರಿ ಕೋಮುವಾದಿಗಳು ಹೊಸ ಹೊಸ ಆಟ ಹೂಡುತ್ತಾರೆ. ನಾವೆಲ್ಲರೂ ಕೂಡಿ ಬದುಕಿದವರು. ಈ ಬಗ್ಗೆ ಬರೆದ ಪಾಠವನ್ನು ಪಠ್ಯಪುಸ್ತಕದಿಂದ ಕಿತ್ತು ಹಾಕಿದ್ದಾರೆ. ಎಷ್ಟು ವಿಭಜನೆ ಆಗಿದೆ ಎಂದರೆ ಭಾಷೆಯ ಆಧಾರದಲ್ಲಿ ನಮ್ಮನ್ನು ಒಡೆಯಲಾಗಿದೆ. ಹೆಣದ ಮೇಲೆ ರಾಜಕೀಯ ಮಾಡುವ ಪಕ್ಷಗಳು ಇವೆ. ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಮನುಸ್ಮೃತಿಯನ್ನು ಜಾರಿಗೆ ತರಲು ಮುಂದಾಗಿದ್ದಾರೆ. ಜನತೆಯ ಹೆಣದ ಮೇಲೆ ರಾಜಕೀಯ ಮಾಡುವಂತಹ ಕ್ರೂರ ರಾಜಕೀಯ ಮಾಡುವವರನ್ನು ನಾವು ನಿರಾಕರಿಸಬೇಕು," ಎಂದು ತಿಳಿಸಿದರು.

ಬಹುಸಂಖ್ಯಾತ ಕೋಮುವಾದವನ್ನು ತಡೆಯಲು, ಅಲ್ಪಸಂಖ್ಯಾತ ಕೋಮುವಾದಕ್ಕೆ ನೀರು ಎರೆಯುವುದು ನಾವು ಈಗ ನೋಡುತ್ತಿದ್ದೇವೆ. ಆದರೆ ಅದು ಉತ್ತಮ ಬೆಳವಣಿಗೆಯಲ್ಲ. ಕಮ್ಯುನಿಷ್ಟರು ನಾಸ್ತಿಕರು ಎಂದು ಸುಳ್ಳು ಹರಡುತ್ತಾರೆ. ಧರ್ಮ ಅವರವರ ಆಯ್ಕೆ, ಕಮ್ಯೂನಿಸ್ಟ್ ಪಕ್ಷವು ನೀವ್ಯಾಕೆ ದೇವರನ್ನು ನಂಬಿದ್ದೀರಿ ಎಂದು ಕೇಳುವುದಿಲ್ಲ. ಎನ್‌ಪಿಆರ್ ಮತ್ತು ಎನ್‌ಆರ್‌ಸಿ ವಿರೋಧಿಸಿದ ರೀತಿ ನಾವು ಸಾಚಾರ್ ವರದಿಯನ್ನು ಕೇಳಬೇಕು. ಮುಸ್ಲಿಮರ ಪ್ರಶ್ನೆ ಎಂದು ಏನು ತರುತ್ತಿದ್ದಾರೋ ಅದು ಮುಸ್ಲಿಮರ ಸಮಸ್ಯೆ ಅಲ್ಲ. ಅದು ದೇಶದ ಪ್ರಶ್ನೆ. ಲಕ್ಷ ಲಕ್ಷ ಜನ ಚಳವಳಿಯೊಂದಿಗೆ ಈ ಹಿಟ್ಲರ್ ವಾದಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಬೇಕು ಎಂದರು.

ಕೋಮುವಾದದ ಪ್ರಯೋಗಶಾಲೆಯಾಗಿ ಕರ್ನಾಟಕ........

ಪುಟ 9 ರಿಂದ

ಕೆಲಸ ಮಾಡುತ್ತಿದೆ," ಎಂದು ತಿಳಿಸಿದರು.

"ಮಾಧ್ಯಮಗಳಿಗೆ ಆರ್‌ಎಸ್‌ಎಸ್‌ನ ಮತೀಯವಾದಕ್ಕೆ ಜಾತ್ಯತೀತರ ಪ್ರತಿಕ್ರಿಯೆಗಿಂತ ಮುಸ್ಲಿಂ ಮತೀಯವಾದದ ಪ್ರತಿಕ್ರಿಯೆ ಬೇಕಾಗಿದೆ. ಹಾಗಾಗಿಯೆ ಮಳಲಿ ಮಸೀದಿಯ ವಿಷಯದಲ್ಲಿ ಎಸ್‌ಡಿಪಿಐ ಮಾತನಾಡಿದಾಗ ಎಲ್ಲೋ ಮೂಲೆಯಲ್ಲಿ ಮಲಗಿದ್ದ ಪ್ರಮೋದ್ ಮುತಾಲಿಕ್ ಎದ್ದು ಪ್ರತಿಕ್ರಿಯೆ ನೀಡುತ್ತಾರೆ. ಕೋಮುವಾದಿಗಳನ್ನು ಕೇವಲ ಚುನಾವಣೆಯಿಂದ ಸೋಲಿಸಲು ಸಾಧ್ಯವಿಲ್ಲ. ಒಂದು ವೇಳೆ ಸೋತರೆ ಅವರು ದುಪ್ಪಟ್ಟು ಶಕ್ತಿಯಿಂದ ವಾಪಾಸು ಬರುತ್ತಾರೆ. ಅಲ್ಪಸಂಖ್ಯಾತ ಸಮುದಾಯಗಳು ಕೋಮುವಾದದ ವಿರುದ್ಧ ಹೋರಾಟ ಮಾಡಬೇಕಾದರೆ ಜಾತ್ಯಾತೀತ ಶಕ್ತಿಗಳೊಂದಿಗೆ ಸೇರಬೇಕು," ಎಂದರು.

ಗೋಷ್ಠಿಯನ್ನು ಸುನಿಲ್ ಕುಮಾರ್ ಬಜಾಲ್ ನಿರ್ವಹಿಸಿದರೆ ಇತ್ತೀಚೆಗೆ ಹಿಂದು ಮತೀಯವಾದಿಗಳಿಂದ ದಾಳಿಗೊಳಗಾಗಿದ್ದ ನಬಿಸಾಬ್ ಕಿಲ್ಲೇದ ಹಾಜರಿದ್ದರು.

8 ವರ್ಷಗಳ 'ಸೇವೆ-ಸುಶಾಸನ-ಕಲ್ಯಾಣ' ಗರೀಬರಿಗೋ, ಕಾರ್ಪೊರೇಟ್ ಕುಳಗಳಿಗೋ?

ನರೇಂದ್ರಮೋದಿ ನೇತೃತ್ವದ ಸರಕಾರದ ಎಂಟು ವರ್ಷಗಳು ಪೂರ್ಣಗೊಳ್ಳುವ ವೇಳೆಗೆ ಬಿಜೆಪಿ ಹೊಸದೊಂದು ಘೋಷಣೆಯೊಂದಿಗೆ ಹದಿನೈದು ದಿನಗಳ ಆಚರಣೆ ಆರಂಭಿಸಿದೆ. ಕರ್ನಾಟಕವೂ ಸೇರಿದಂತೆ ದೇಶಾದ್ಯಂತ 'ಥ್ಯಾಂಕ್ಯು ಮೋದೀಜೀ' ಜಾಹೀರಾತುಗಳು ರಾರಾಜಿಸುತ್ತಿವೆ. ಆದರೆ ಇವೆಲ್ಲವುಗಳ ಮೂಲಕ ಜನಗಳ ಹೆಚ್ಚುತ್ತಿರುವ ಸಂಕಟಗಳ ಕಟು ವಾಸ್ತವವನ್ನು ಮರೆಮಾಚಲು ಸಾಧ್ಯವೇ? ಬಿಜೆಪಿ 'ಸೇವಾ-ಸುಶಾಸನ್-ಗರೀಬ್ ಕಲ್ಯಾಣ್' ಆಚರಣೆ ನಡೆಸುವಾಗ, ವಾಸ್ತವವಾಗಿ ಅದು ಜನಗಳನ್ನು ಮರುಳು ಮಾಡುತ್ತಿಲ್ಲವೇ, ಏಕೆಂದರೆ ಅದು ಈ ಎಂಟು ವರ್ಷಗಳಲ್ಲಿ ಆಳ್ವಿಕೆ ನಡೆಸಿರುವುದು ಕಾರ್ಪೊರೇಟ್ ಮತ್ತು ಶ್ರೀಮಂತ ವಿಭಾಗಗಳ ಹಿತಾಸಕ್ತಿಗಳಿಗಾಗಿಯಷ್ಟೇ ತಾನೇ? ಈ ಲೇಖನ ಈ ಸಂಗತಿಯತ್ತ ಒಂದು ನೋಟ ಬೀರಿದೆ.

(ಆಧಾರ: ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯಲ್ಲಿ ಪ್ರಕಟವಾದ 'ಸವೇರಾ' ಅವರ ಲೇಖನ)



ನರೇಂದ್ರ ಮೋದಿಯವರು ಭಾರತದ ಪ್ರಧಾನ ಮಂತ್ರಿಯಾಗಿ ಮೇ 26ರಂದು 8 ವರ್ಷಗಳಾದವು. ಈ ವಾರ್ಷಿಕೋತ್ಸವವನ್ನು ದೊಡ್ಡಪ್ರಮಾಣದಲ್ಲಿ ಆಚರಿಸಲು ಆಳುವ ಪಕ್ಷ ನಿರ್ಧರಿಸಿದೆ ಎಂದು ವರದಿಯಾಗಿದೆ. ಇದರೊಂದಿಗೇ ಅವರ 'ಮಾದರಿ' ಗುಜರಾತ್ ಸೇರಿದಂತೆ ಈ ವರ್ಷಾಂತ್ಯದ ವೇಳೆಗೆ ನಡೆಯಬೇಕಾಗಿರುವ ಕೆಲವು ರಾಜ್ಯಗಳ ವಿಧಾನಸಭೆಗಳ ಚುನಾವಣಾ ಪ್ರಚಾರದ ಆರಂಭವೂ ಆಗುತ್ತಿದೆ. ಇತ್ತೀಚೆಗೆ ಜೈಪುರದಲ್ಲಿ ನಡೆದ ಈ ಪಕ್ಷದ ರಾಷ್ಟ್ರೀಯ ಮತ್ತು ರಾಜ್ಯ ಪದಾಧಿಕಾರಿಗಳ ದೀರ್ಘ ಸಭೆಯ ನಂತರ ಮೋದಿ ಸರಕಾರದ ಸಾಧನೆಗಳ ಒಂದು ಉದ್ದ ಹೇಳಿಕೆ ಪ್ರಕಟವಾಯಿತು. ಅದರಲ್ಲಿ ಮೇ 30ರಿಂದ ಜೂನ್ 15 ರ ವರೆಗೆ ನಡೆಯುವ ವಾರ್ಷಿಕೋತ್ಸವಾಚರಣೆಗೆ ಮೂರು ಘೋಷಣೆಗಳನ್ನು ಕೊಡಲಾಯಿತು: 'ಸೇವಾ-ಸುಶಾಸನ್-ಗರೀಬ್ ಕಲ್ಯಾಣ್', ಅಂದರೆ ಸೇವೆ, ಉತ್ತಮ ಆಳ್ವಿಕೆ ಮತ್ತು ಬಡವರ ಕಲ್ಯಾಣ.

ಆಳುವ ಪಕ್ಷ ಈ ಘೋಷಣೆಗಳನ್ನು ಆರಿಸಿರುವಲ್ಲಿ ಒಂದು ಕ್ರೂರ ಅಪಹಾಸ್ಯ ಇದೆ. ಏಕೆಂದರೆ ನಿಜವಾಗಿ, ಈ ಪಕ್ಷದ ಈ ಎಂಟು ವರ್ಷಗಳ ಸೇವೆ ಮತ್ತು ಆಡಳಿತ ಗರೀಬರ ಕಲ್ಯಾಣಕ್ಕಲ್ಲ, ಕಾರ್ಪೊರೇಟ್ ಕುಳಗಳ ಕಲ್ಯಾಣಕ್ಕೆ ಎಂದು ಈಗ ಬಹಳಷ್ಟು ಮಂದಿಗೆ ಸ್ಪಷ್ಟವಾಗುತ್ತಿದೆ. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಸರಕಾರಗಳು ಆಳುವ ವರ್ಗಗಳ ಕಾರ್ಯಕಾರಿ ಸಮಿತಿಗಳು ಎಂದು ಹೇಳಲಾಗುತ್ತದೆ. ಆದರೂ ಭಾರತದಲ್ಲಿ ಹಿಂದೆಂದೂ ಈ ಸರಕಾರದಷ್ಟು ಭಂಡತನದಿಂದ ನಾಚಿಕೆಯಿಲ್ಲದೆ ದೇಶೀ-ವಿದೇಶೀ ಬಂಡವಾಳಗರಿಗಾಗಿಯೇ ಹಗಲು-ರಾತ್ರಿ ಶ್ರಮಿಸಿರುವ ಸರಕಾರ ಬೇರೊಂದಿಲ್ಲ.

ಹೇಗೆ ಈ 'ಮೋದಿ ಸರ್ಕಾರ್' ಕಾರ್ಪೊರೇಟ್ ವಲಯದವರು, ಭೂಮಾಲಕರು ಮತ್ತು ಅವರ ಬಂಟರಿಗಾಗಿ ಕೆಲಸ ಮಾಡಿದೆ ಎಂದು ನೋಡೋಣ.

ಮೊದಲು, 'ಸುಶಾಸನ' ಅಂದರೆ ಉತ್ತಮ ಆಳ್ವಿಕೆಯ ಬಗ್ಗೆ ನೋಡೋಣ:

ಈ ಎಂಟು ವರ್ಷಗಳಲ್ಲಿ ಈ ಸರಕಾರ ಮಾಡಿರುವ ಒಂದು ಮುಖ್ಯ ಕೆಲಸವೆಂದರೆ, ಶ್ರೀಮಂತರಿಗಾಗಿ, ಅದರಲ್ಲೂ ಕಾರ್ಪೊರೇಟ್ ಮಂದಿಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನುಗಳನ್ನು ರೂಪಿಸಿದ್ದು.

* ಈಗಿರುವ 29 ಕಾರ್ಮಿಕ ಕಾಯ್ದೆಗಳನ್ನು ರದ್ದು ಮಾಡಿ ನಾಲ್ಕು 'ಸಂಹಿತೆ'ಗಳಾಗಿ ರೂಪಿಸಿ ಕಾರ್ಮಿಕರಿಗೆ ಇದುವರೆಗೆ ಇದ್ದ ಕಾನೂನು ರಕ್ಷಣೆಗಳೂ ಇಲ್ಲದಂತೆ ಮಾಡಿದ್ದು: ಕಾರ್ಮಿಕರನ್ನು ಮನಬಂದಂತೆ ನೇಮಿಸಲು, ತೆಗೆದುಹಾಕಲು ಅವಕಾಶ, ನಿಗದಿತ ವರ್ಷಗಳ ಕೆಲಸ, ಕನಿಷ್ಟಕೂಲಿ ನಿರ್ಧಾರದ ವಿಧಾನವನ್ನು ಬದಲಿಸುವುದು, ದುಡಿಮೆಯ ಗಂಟೆಗಳಲ್ಲಿ ಹೆಚ್ಚಳ, ಸಂಘ ಕಟ್ಟಿಕೊಳ್ಳುವುದೇ ಅಸಾಧ್ಯವಾಗುವಂತಹ ಕಟ್ಟಳೆಗಳು ಇವೆಲ್ಲ ಮಾಲಕರು ಬಹಳ ವರ್ಷಗಳಿಂದ ಕೇಳುತ್ತಿದ್ದ 'ಅನುಕೂಲತೆ'ಗಳು. ಅವನ್ನೆಲ್ಲ ನಿರ್ಭಿಡೆಯಿಂದ ಕೊಡಮಾಡಿದ ಸರಕಾರವಿದು. ಇವು ಕಾರ್ಮಿಕ-ಪರ ಕ್ರಮಗಳೆಂದು ಈ ಆಳುವ ಪಕ್ಷವನ್ನು ಬೆಂಬಲಿಸುವವರೂ ಹೇಳಿಕೊಳ್ಳಲಾರದ ಪರಿಸ್ಥಿತಿ ಉಂಟಾಗಿದೆ.
* ಸಾಂಕ್ರಾಮಿಕದಿಂದ ಜನಗಳು ತೊಳಲಾಡುತ್ತಿದ್ದಾಗ ಅದರ ಪರಿವೆಯೇ ಇಲ್ಲದೆ 2020ರಲ್ಲಿ ತಂದ ಕೃಷಿ ಕಾಯ್ದೆಗಳು ಮತ್ತು ವಿದ್ಯುತ್ ಕಾಯ್ದೆಯ ತಿದ್ದುಪಡಿ: ಇವು ಭಾರತದ ಕೃಷಿ ವಲಯವನ್ನು ಕಾರ್ಪೊರೇಟ್‌ಗಳ ದುರಾಸೆಗೆ ತುತ್ತಾಗಿಸುವ ನಗ್ನ ರೈತ-ವಿರೋಧಿ ಕ್ರಮಗಳು ಎಂಬುದನ್ನು ಈಗಾಗಲೇ ರೈತರು ತಮ್ಮ ಒಂದು ವರ್ಷದ ಐಕ್ಯ ಹೋರಾಟದ ಮೂಲಕ ತೋರಿಸಿಕೊಟ್ಟಿದ್ದಾರೆ. ಸರಕಾರೀ ಖರೀದಿ ವ್ಯವಸ್ಥೆಯನ್ನು ಮತ್ತು ಕನಿಷ್ಟ ಬೆಂಬಲ ವ್ಯವಸ್ಥೆಯನ್ನು ಕಳಚಿ ಹಾಕುವುದು, ರೈತರಿಗೆ ಸಬ್ಸಿಡಿ ದರಗಳಲ್ಲಿ ವಿದ್ಯುತ್ ಪೂರೈಕೆಯನ್ನು ನಿಲ್ಲಿಸುವುದು, ಕಾಂಟ್ರಾಕ್ಟ್ ಕೃಷಿಗೆ ಅವಕಾಶ ನೀಡುವುದು, ಸಗಟು ವ್ಯಾಪಾರಸ್ಥರಿಗೆ ದಾಸ್ತಾನು ಮಾಡಿಕೊಂಡು ಆಹಾರ ದಾನ್ಯಗಳ ಬೆಲೆಗಳನ್ನು ನಿರ್ಧರಿಸಲು ಅವಕಾಶ ಮಾಡಿಕೊಡುವುದು ಈ ಮೂರು ಕೃಷಿ ಕಾಯ್ದೆಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯ ಉದ್ದೇಶವಾಗಿತ್ತು.
* ಸರಕು ಮತ್ತು ಸೇವೆಗಳ ತೆರಿಗೆ ಅಂದರೆ ಜಿಎಸ್‌ಟಿ ಜಾರಿ ಮಾಡಿದ್ದು, ಈ ಮೂಲಕ ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿದ್ದ ತೆರಿಗೆ ವಿಧಿಸುವ ಅಧಿಕಾರಗಳನ್ನು ಕೂಡ ಕೇಂದ್ರ ಸರಕಾರದ ವ್ಯಾಪ್ತಿಗೆ ಸೆಳೆದುಕೊಂಡದ್ದು ಒಂದೆಡೆಯಾದರೆ, ಮತ್ತೊಂದೆಡೆ ಒಂದೇ ಹೊಡೆತದಲ್ಲಿ ಸಾವಿರಾರು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ನಾಶಮಾಡಿ, ಅಲ್ಲಿ ದುಡಿಯುತ್ತಿದ್ದವರನ್ನು ನಿರುದ್ಯೋಗಿಗಳಾಗಿ ಮಾಡಿ ದೊಡ್ಡ ಕಾರ್ಪೊರೇಟ್ ಕುಳಗಳಿಗೆ ಲಾಭ ಮಾಡಿಕೊಟ್ಟದ್ದು.
* ದಿವಾಳಿತನದ ಸಂಹಿತೆ(ಐಬಿಸಿ)-ಈ ಕಾಯ್ದೆಯ ಮೂಲಕ ತ್ವರಿತವಾಗಿ ಕಂಪನಿಗಳ ದಿವಾಳಿತನವನ್ನು ಘೋಷಿಸಿ, ದೊಡ್ಡ ಕಾರ್ಪೊರೇಟ್ ಗುಂಪುಗಳಿಗೆ ಕಡಿಮೆ ಖರ್ಚಿನಲ್ಲಿ ಅವನ್ನು ಖರೀದಿಸಲು ಅವಕಾಶ ಮಾಡಿಕೊಟ್ಟದ್ದು, ಮತ್ತೊಂದೆಡೆಯಲ್ಲಿ ಅವರಿಗೆ ಸಾಲ ನೀಡಿದ ಬ್ಯಾಂಕುಗಳು ಮತ್ತು ಇತರರಿಗೆ ಭಾರೀ ನಷ್ಟ ಉಂಟುಮಾಡಿದ್ದು.
* ನೇರ ವಿದೇಶಿ ಹೂಡಿಕೆಗಳಿಗೆ ಕಲ್ಲಿದ್ದಲು ಗಣಿಗಾರಿಕೆಯಿಂದ ಹಿಡಿದು ಬಾಹ್ಯಾಕಾಶ ಸಂಶೋಧನೆಯ ವರೆಗೆ ಎಲ್ಲವನ್ನೂ ಬಲಿಷ್ಟ ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದು ಕೊಟ್ಟದ್ದು. ಇದೂ ಪರೋಕ್ಷವಾಗಿ ತಟ್ಟುತ್ತಿರುವುದು ಗರೀಬರನ್ನೇ.





ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್

'ಸೇವೆಗಳು ಮತ್ತು ಕಲ್ಯಾಣ'- ಇವೂ ಕಾರ್ಪೊರೇಟ್ ಕುಳಗಳಿಗೇ!

'ಮೋದಿ ಸರ್ಕಾರ್' ಕಾರ್ಪೊರೇಟ್ ವಲಯಗಳಿಗೆ ಅಪಾರ ಬಕ್ಷೀಸುಗಳನ್ನು ಕೊಡಲು ಈ ಎಂಟು ವರ್ಷಗಳಲ್ಲಿ ತನ್ನ ಹಣಕಾಸು ಅಧಿಕಾರಗಳನ್ನು ಚೆನ್ನಾಗಿಯೇ ಬಳಸಿಕೊಂಡಿದೆ. ಕೆಲವು ಉದಾಹರಣೆಗಳು:

* ಕಾರ್ಪೊರೇಟ್ ತೆರಿಗೆ ಕಡಿತ: 2019ರಲ್ಲಿ 30%ದಿಂದ 22%ಕ್ಕೆ (ಸರ್ಚಾರ್ಜ್‌ಗಳನ್ನೂ ಸೇರಿಸಿದರೆ 35%ದಿಂದ 26%ಕ್ಕೆ) ತೀವ್ರವಾಗಿ ಇಳಿಸಲಾಯಿತು. ಇದರಿಂದ ಜನಸಾಮಾನ್ಯರ ಖರ್ಚಿನಲ್ಲಿ ಕಾರ್ಪೊರೇಟ್ ವಲಯಕ್ಕೆ 1.45 ಲಕ್ಷ ಕೋಟಿ ರೂ.ಗಳ ಬಕ್ಷೀಸು ಕೊಡಮಾಡಲಾಯಿತು.
* ಇತರ ತೆರಿಗೆ ರಿಯಾಯ್ತಿಗಳು: ಸರಕಾರದ ಬಜೆಟ್ ದಸ್ತಾವೇಜುಗಳ ಪ್ರಕಾರವೇ 'ಮೋದಿ ಸರ್ಕಾರ್' 2014-15ರಿಂದ 2020-21ರ ಅವಧಿಯಲ್ಲಿ ಒಟ್ಟು 6.15ಲಕ್ಷ ಕೋಟಿ ರೂ.ಗಳನ್ನು ವಿವಿಧ ರಿಯಾಯ್ತಿಗಳು, ವಿನಾಯ್ತಿಗಳು, ಮನ್ನಾಗಳ ಮೂಲಕ ಕಾರ್ಪೊರೇಟ್‌ಗಳಿಗೆ ಒದಗಿಸಲಾಗಿದೆ.
* ಕಾರ್ಪೊರೇಟ್ ಸಾಲ ಮನ್ನಾ: ಕಳೆದ 8 ವರ್ಷಗಳಲ್ಲಿ 10.72 ಲಕ್ಷ ಕೋಟಿ ರೂ. ಮೌಲ್ಯದ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡಿದೆ ಎಂದು ಮಾಹಿತಿ ಹಕ್ಕು ಕಾಯ್ದೆ(ಆರ್‌ಟಿಐ) ಅಡಿಯಲ್ಲಿ ನೀಡಿರುವ ಮಾಹಿತಿ ಹೇಳುತ್ತದೆ. ಇವುಗಳಲ್ಲಿ ಬಹಳಷ್ಟು 100 ಕೋಟಿ ರೂ.ಗಿಂತಲೂ ದೊಡ್ಡ ಮೊತ್ತದ ಸಾಲಗಳು, ಅಂದರೆ ಇದೂ ಕೂಡ ಕಾರ್ಪೊರೇಟ್ ವಲಯಕ್ಕೆ ಅಪಾರ ಲಾಭ ದೊರಕಿಸಿ ಕೊಟ್ಟ ಕ್ರಮ
* ದೊಡ್ಡ ಸುಸ್ತಿದಾರರೂ ದೊಡ್ಡ ಕಾರ್ಪೊರೇಟ್‌ಗಳೇ. ಇನ್ನೊಂದು ಆರ್‌ಟಿಐ ಪ್ರಶ್ನೆಗೆ ಉತ್ತರವಾಗಿ ರಿಜರ್ವ್ ಬ್ಯಾಂಕ್ ನೀಡಿದ ಮಾಹಿತಿಯ ಪ್ರಕಾರ ಒಟ್ಟು 1913 ಉದ್ದೇಶಪೂರ್ವಕ ಸುಸ್ತಿದಾರರಾದವರು ಬಾಂಕುಗಳಿಗೆ ಒಟ್ಟು 1.46ಲಕ್ಷ ಕೋಟಿ ರೂ.ಗಳನ್ನು ಮರುಪಾವತಿ ಮಾಡಿಲ್ಲ. ಇವರಲ್ಲಿ 264 ಸುಸ್ತಿದಾರರಲ್ಲಿ ಪ್ರತಿಯೊಬ್ಬರ ಸಾಲ ಬಾಕಿಯ ಮೊತ್ತ 100 ಕೋಟಿ ರೂ. ದಾಟಿದೆ, ಇವುಗಳ ಒಟ್ಟು ಮೌಲ್ಯವೇ 1.09 ಲಕ್ಷ ಕೋಟಿ ರೂ.

ಇದರಿಂದಲೂ ತೃಪ್ತವಾಗದ 'ಮೋದಿ ಸರ್ಕಾರ್' ವಿವಿಧ ಖಾಸಗಿ ಮಂದಿಗಳಿಗೆ ವಿವಿಧ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಅಗ್ಗದಲ್ಲಿ ರೂ.4.86 ಲಕ್ಷ ಕೋಟಿ ರೂ.ಗಳಿಗೆ ಮಾರಿದೆ. ಇದಲ್ಲದೆ, 6ಲಕ್ಷ ಕೋಟಿ ರೂ.ಗಳಷ್ಟು ಬೆಲೆ ಬಾಳುವ ಸೊತ್ತುಗಳನ್ನು 'ಭೋಗ್ಯ'ಕ್ಕೆ ಕೊಟ್ಟು ಖಾಸಗಿಯವರಿಗೆ ಬಕ್ಷೀಸು ನೀಡುವ ಯೋಚನೆಯನ್ನು ಈ ಸರಕಾರ ಮಾಡುತ್ತಿದೆ.

ಕೊವಿಡ್‌ನಿಂದಾಗಿ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಕಾಣುತ್ತಿರುವ ನಿಧಾನಗತಿ ಮತ್ತು ಕಾರ್ಮಿಕರ ಪ್ರತಿರೋಧದಿಂದಾಗಿ ಈ ಮಾರಾಟದ ಧಾವಂತ ತೊಂದರೆಗೆ ಸಿಲುಕಿಕೊಂಡಿದೆ. ಆದರರೀ ಎಚಿಟನೇ ವರ್ಷದ ಕೊನೆಯಲ್ಲಿ ಎಲ್‌ಐಸಿ ಐಪಿಒವನ್ನು ಮಾಡಿ ಕೋಟ್ಯಂತರ ಪಾಲಿಸಿದಾರರಿಗೆ ಹಿತಾಸಕ್ತಿಗಳಿಗೆ ಧಕ್ಕೆ ತಂದು ತನ್ನ ದೇಶಿ-ವಿದೇಶಿ ಕಾರ್ಪೊರೇಟ್ ಮಿತ್ರರ ಪ್ರಶಂಸೆ ಗಳಿಸಿದೆ.

ಜನಸಾಮಾನ್ಯರಿಗೆ ಸಿಕ್ಕಿದ್ದೇನು?

ಕೋಟ್ಯಾಂತರ ಪಾಲಿಸಿದಾರರ ಹಿತಾಸಕ್ತಿಗಳಿಗೆ ಧಕ್ಕೆ ಮಾತ್ರವಲ್ಲ, ಈ ಎಂಟು ವರ್ಷಗಳ 'ಸೇವೆ-ಸುಶಾಸನ-ಕಲ್ಯಾಣ'ದಲ್ಲಿ ಒಟ್ಟಾರೆಯಾಗಿ ಜನಸಾಮಾನ್ಯರಿಗೆ ಸಿಕ್ಕಿದ್ದು ಸಗಟು ಮತ್ತು ಚಿಲ್ಲರೆ ಎರಡರಲ್ಲೂ ದಾಖಲೆ ಹಣದುಬ್ಬರ, ಬೆಲೆಯೇರಿಕೆಗಳು, ಮತ್ತು ದಾಖಲೆ ನಿರುದ್ಯೋಗ. 8 ವರ್ಷಗಳ ಹಿಂದೆ ಕೊಟ್ಟ ವರ್ಷಕ್ಕೆ 2ಕೋಟಿ ಉದ್ಯೋಗಾವಕಾಶಗಳ ನಿರ್ಮಾಣದ ಆಶ್ವಾಸನೆ ಎಂದೋ ಜುಮ್ಲಾಗಳ ಕಸದ ಬುಟ್ಟಿ ಸೇರಿದೆ.

ಮೋದಿ ಸರಕಾರ ವಿವಿಧ ಕಲ್ಯಾಣ ಯೋಜನೆಗಳ ಮೂಲಕ ಬಡಜನರಿಗೆ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿರುವುದಾಗಿ ಹೇಳಿಕೊಳ್ಳುತ್ತಿದೆ. ಆದರೆ ಇವುಗಳಲ್ಲಿ ಹೆಚ್ಚಿನವು ತಲುಪಿರುವುದು ಇವುಗಳ ಅಗತ್ಯವಿರುವ ಜನಸಂಖ್ಯೆಯಲ್ಲಿ ಕೆಲವರಿಗೆ ಮಾತ್ರ. ಅಲ್ಲದೆ ಇವುಗಳಿಗೆ ಸರಕಾರ ತನ್ನ ಬಜೆಟ್‌ಗಳಲ್ಲಿ ಕೊಡುವ ಹಣವೂ ಸಾಕಷ್ಟು ಪ್ರಮಾಣದಲ್ಲಿಲ್ಲ ಎಂಬುದು ಮತ್ತೆ-ಮತ್ತೆ ಬಯಲಾಗುತ್ತಿರುವ ಸಂಗತಿ.

ಉದಾಹರಣೆಗೆ,

* ಪಡಿತರ ವ್ಯವಸ್ಥೆಯ ಅಗತ್ಯವಿರುವ ಸುಮಾರು 10 ಕೋಟಿ ಜನಗಳು ಅದರ ವ್ಯಾಪ್ತಿಯ ಹೊರಗಿದ್ದಾರೆ ಎಂದು ಅಂದಾಜು ಮಾಡಲಾಗಿದೆ.
* 'ಮನರೇಗ'ದಡಿ ಕೆಲಸಕ್ಕೆ ಅರ್ಜಿ ಹಾಕಿರುವವರಲ್ಲಿ 14% ಮಂದಿಗೆ ಉದ್ಯೋಗ ನಿರಾಕರಿಸಲಾಗಿದೆ, ಅಲ್ಲದೆ, ಉದ್ಯೋಗ ಸಿಕ್ಕವರಿಗೂ ಕಾನೂನು ಪ್ರಕಾರ ಸಿಗಬೇಕಾದ 100 ದಿನಗಳ ಕೆಲಸದ ಬದಲಿಗೆ ಸಿಗುತ್ತಿರುವುದು ಸರಾಸರಿ 50ದಿನಗಳಿಗಿಂತಲೂ ಕಡಿಮೆ.
* ಉಚಿತ ಅಡುಗೆ ಅನಿಲ ಪೂರೈಕೆಯಂತೂ ಒಂದು ದೊಡ್ಡ ಮೋಸವೆಂದೇ ಪರಿಗಣಿಸಲ್ಪಟ್ಟಿದೆ. ಬಹಳಷ್ಟು ಬಡಕುಟುಂಬಗಳು 1000ರೂ. ಕೊಟ್ಟು ಎರಡನೇ ಸಿಲಿಂಡರ್ ಖರೀದಿಸಲಾರದ ಸ್ಥಿತಿಯಲ್ಲಿದ್ದಾರೆ ಎಂದು ವರದಿಯಾಗಿದೆ.

ಒಟ್ಟಿನಲ್ಲಿ, ಬಿಜೆಪಿ 'ಸೇವಾ-ಸುಶಾಸನ್-ಗರೀಬ್ ಕಲ್ಯಾಣ್' ಆಚರಣೆ ನಡೆಸುವಾಗ, ವಾಸ್ತವವಾಗಿ ಅದು ಜನಗಳನ್ನು ಮರುಳು ಮಾಡುತ್ತಿದೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ ಅದು ಈ ಎಂಟು ವರ್ಷಗಳಲ್ಲಿ ಕೆಲಸ ಮಾಡಿರುವುದು ಕಾರ್ಪೊರೇಟ್ ಮತ್ತು ಶ್ರೀಮಂತ ವಿಭಾಗಗಳ ಹಿತಾಸಕ್ತಿಗಳಿಗಾಗಿಯಷ್ಟೇ. ಬಡಜನರನ್ನು ಮಂದಿರ, ಮಸೀದಿ, ತಾಜಮಹಲ್, ಕುತುಬ್ ಮೀನಾರ್‌ಗಳ ವಿವಾದಗಳಲ್ಲಿ ಮುಳುಗಿಸಿ, 'ಕಾಶ್ಮೀರ್ ಫೈಲ್ಸ್' ಮುಂತಾದವುಗಳಿಂದ ಬೆರಗುಗೊಳಿಸಿ ಅವರ ಗಮನ ಅತ್ತಲೇ ಇರುವಂತೆ ಮಾಡಬಹುದು ಎಂದು ಅದು ಭಾವಿಸಿದಂತಿದೆ. ಆದರೆ ಜನಗಳ ಸಂಕಟಗಳ ಕೊಡ ತುಂಬುತ್ತಿದೆ, ಆಳುವ ಪಕ್ಷದ ಮೋಸದ ಆಟವನ್ನು ಅವರು ಅರಿತುಕೊಳ್ಳಲಾರಂಭಿಸಿದ್ದಾರೆ.

ಅರ್ಥವ್ಯವಸ್ಥೆ ನಿಜವಾಗಿಯೂ ಚೇತರಿಕೆಯ ಹಾದಿಯಲ್ಲಿದೆಯೇ?

ಅಮೃತ ಕಾಲವಿದು!


ಮೇ 31 ರಂದು ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿ (ಎನ್ಎಸ್ಒ) 2021-22ರ ಜಿಡಿಪಿ ಬೆಳವಣಿಗೆಯ ಅಧಿಕೃತ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಕಳೆದ ವಾರ ಈ ಅಂಕಣದಲ್ಲಿ 2021-22ರ ಕೊನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ 3.5%ಕ್ಕೆ ಇಳಿಯಬಹುದು ಎಂದು ಐಸಿಆರ್ಎ ಅಂದಾಜು ಮಾಡಿರುವುದಾಗಿ ಹೇಳಲಾಗಿತ್ತು. ಈಗ ಅಧಿಕೃತವಾಗಿ ಅದು 4.1% ಎಂದು ಹೇಳಲಾಗಿದೆ. ಅಂದರೆ ಒಟ್ಟು ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರ ಸತತವಾಗಿ ಇಳಿಯುತ್ತಲೇ ಬಂದಿದೆ. ಮೊದಲ ತ್ರೈಮಾಸಿಕದಲ್ಲಿ 20.1% ರಷ್ಟಿದ್ದ ದರ, ಎರಡನೇ ತ್ರೈಮಾಸಿಕದಲ್ಲಿ 8.4%ಕ್ಕೆ, ಮತ್ತು ಮೂರನೇ ತ್ರೈಮಾಸಿಕದಲ್ಲಿ 5.4%ಕ್ಕೆ ಇಳಿದಿತ್ತು.

ಒಟ್ಟಾರೆಯಾಗಿ, 2021-22ರ ಜಿಡಿಪಿ ಬೆಳವಣಿಗೆ ದರ 8.7% ಎಂದು ಹೇಳಲಾಗಿದೆ. ಈ ಮೊದಲು ಅದು ಫೆಬ್ರುವರಿ ತಿಂಗಳಲ್ಲಿ ಈ ದರ 8.9% ಇರಬಹುದು ಎಂದು ಅಂದಾಜು ಮಾಡಿತ್ತು. ನಿವ್ವಳ ಮೌಲ್ಯವರ್ಧನೆ(ಜಿವಿಎ) 8.3% ಇರಬಹುದು ಎಂದೂ ಅಂದಾಜು ಮಾಡಿತ್ತು. ಈಗ ಅದು 8.1% ಎಂದು ಹೇಳಿದೆ.

ಈ ಅಂಕಿ-ಅಂಶಗಳು ದೇಶದ ಅರ್ಥವ್ಯವಸ್ಥೆ ಪೂರ್ಣವಾಗಿ ಚೇತರಿಕೆ ಕಾಣುತ್ತಿದೆ ಎಂದು ದೃಢಪಡಿಸುತ್ತವೆ ಎಂದು ಕೇಂದ್ರ ಹಣಕಾಸು ಮಂತ್ರಾಲಯ ಹೇಳಿದೆ. ಮುಖ್ಯಧಾರೆಯ ಮಾಧ್ಯಮಗಳು ಅದನ್ನು ಪುನರುಚ್ಛರಿಸುತ್ತಿವೆ. ಆದರೆ ಬಹಳಷ್ಟು ನಿಷ್ಪಕ್ಷ ಅರ್ಥಶಾಸ್ತ್ರಜ್ಞರು ಇದನ್ನು ಒಪ್ಪುತ್ತಿಲ್ಲ. ಇದು ಅಂಕಿ-ಅಂಶಗಳ ಬಿಸಿಲ್ಗುದುರೆ ಎನ್ನುತ್ತಾರೆ ಅವರು. ಅದಕ್ಕೆ ಕಾರಣವೂ ಇದೆ.

ಏಕೆಂದರೆ **2020-21ರಲ್ಲಿ ಜಿಡಿಪಿ ಬೆಳವಣಿಗೆ ದರ (-)6.6% ಮತ್ತು ಜಿವಿಎ (-)4.8% ಇತ್ತು. 2019-20ರಲ್ಲಿ ಅಂದರೆ ಕೊವಿಡ್-ಪೂರ್ವ ಅವಧಿಯಲ್ಲಿ ಇವು ಅನುಕ್ರಮವಾಗಿ 3.7% ಮತ್ತು 3.8%. ಅಂದರೆ ಜಿಡಿಪಿ 10.3%ದಷ್ಟು ಭಾರೀ ಕುಸಿತದ ನಂತರ ಈಗ ಆ ಕುಸಿತವನ್ನೂ ಪೂರ್ಣವಾಗಿ ತುಂಬಿಲ್ಲ. ಜಿವಿಎ ವಿಷಯದಲ್ಲೂ ಇದೇ ಕತೆ.**

ಜಿಡಿಪಿ ಮತ್ತು ಜಿವಿಎ ಬೆಳವಣಿಗೆ ದರಗಳು (%)-2011-12ರ ಸ್ಥಿರ ಬೆಲೆಗಳಲ್ಲಿ



ಇಂತಹ ಸಂದರ್ಭದಲ್ಲಿ, ಒಟ್ಟು ಜಿಡಿಪಿಯನ್ನು ಹೋಲಿಸುವುದು ಮಾತ್ರವೇ ಅರ್ಥವ್ಯವಸ್ಥೆಯ ಬಗ್ಗೆ ಸರಿಯಾದ ಚಿತ್ರವನ್ನು ಕೊಡುತ್ತದೆ ಎನ್ನುತ್ತಾರೆ ಈ ಅರ್ಥಶಾಸ್ತಜ್ಞರು.

2021-22ರಲ್ಲಿ ಒಟ್ಟು ಜಿಡಿಪಿ ರೂ.147.36 ಲಕ್ಷ ಕೋಟಿ, 202021ರಲ್ಲಿ ರೂ.135.58 ಲಕ್ಷ ಕೋಟಿ ಮತ್ತು 2019-20ರಲ್ಲಿ ರೂ.145.16 ಲಕ್ಷ ಕೋಟಿ. ಅಂದರೆ **2019-20ಕ್ಕೆ ಹೋಲಿಸಿದರೆ ಎರಡು ವರ್ಷಗಳಲ್ಲಿ ಕೇವಲ 1.5% ಏರಿಕೆ, ವಾರ್ಷಿಕ ಏರಿಕೆ ದರ ಕೇವಲ 0.76%.**

ಜಿವಿಎ ದ ವಲಯವಾರು ಅಂಕಿ-ಅಂಶಗಳ ವಿಶ್ಲೇಷಣೆ ಇನ್ನೂ ಆತಂಕಕಾರಿ ಚಿತ್ರವನ್ನು ಕೊಡುತ್ತದೆ(ದಿ ಮಿರಾಜ್ ಆಫ್ ಇಕನಾಮಿಕ್ ರಿಕವರಿ, ವಿ.ಶ್ರೀಧರ್, ನ್ಯೂಸ್‌ಕ್ಲಿಕ್, ಜೂನ್3).

ಈ ಪರಿಸ್ಥಿತಿಯನ್ನು ಯಾವ ಅರ್ಥದಲ್ಲೂ ಆರ್ಥಿಕ ಚೇತರಿಕೆ ಎಂದು ವರ್ಣಿಸಲು ಸಆಧ್ಯವಿಲ್ಲ. ಹೆಚ್ಚೆಂದರೆ ಇದನ್ನು ಆರ್ಥಿಕ ಸ್ಥಗಿತತೆ ಎನ್ನಬಹುದಷ್ಟೇ ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ.ಅರುಣ್ ಕುಮಾರ್(ದಿ ಲೀಫ್‌ಲೆಟ್, ಮೇ 27).

ವಾಸ್ತವವಾಗಿ, ಅಸಂಘಟಿತ ವಲಯದಲ್ಲಿನ ಬೆಳವಣಿಗೆಗಳನ್ನು ಪರಿಗಣಿಸುವುದಾದರೆ ನಿಜವಾದ ಆರ್ಥಿಕ ಬೆಳವಣಿಗೆ ಇನ್ನೂ ಕಡಿಮೆ. ಈ ವಲಯದಲ್ಲಿನ ಕೃಷಿ ವಲಯವನ್ನು ಬಿಟ್ಟು ಉಳಿದ ಅಸಂಘಟಿತ ಕ್ಷೇತ್ರಗಳಲ್ಲಿನ ಸ್ವತಂತ್ರ ಅಂಕಿ-ಅಂಶಗಳು ಲಭ್ಯವಿರುವುದಿಲ್ಲ. ಅದಕ್ಕೆ ಸಂಘಟಿತ ಆರ್ಥಿಕ ವಲಯದ ಅಂದಾಜುಗಳನ್ನೇ ಬಳಸಲಾಗುತ್ತದೆ. ಆದರೆ ಇದು ಸರಿಯಾದ ಚಿತ್ರವನ್ನು ಕೊಡುವುದಿಲ್ಲ, ವಿಶೇಷವಾಗಿ 2016ರ ನೋಟು ರದ್ಧತಿಯ ನಂತರ, ಎನ್ನುವ ಪ್ರೊ. ಅರುಣ್ ಕುಮಾರ್, ಕೊವಿಡ್ ಕಾಲದಲ್ಲೂ ಲಾಕ್‌ಡೌನಿನಿಂದ ಅತ್ಯಂತ ಹೆಚ್ಚು ಕುಸಿತ ಕಂಡದ್ದು ಅಸಂಘಟಿತ ವಲಯ ಎಂದು ನೆನಪಿಸುತ್ತಾರೆ.

ಹೀಗೆ ಅಸಂಘಟಿತ ಆರ್ಥಿಕ ಕ್ಷೇತ್ರಗಳ ಇಳಿಕೆಯನ್ನು ಪರಿಗಣಿಸಿದರೆ, ಜಿಡಿಪಿ 2019-20ರಲ್ಲಿ ಇದ್ದುದಕ್ಕಿಂತಲೂ ಕಡಿಮೆಯಿದ್ದಿರಬೇಕು. ಅರ್ಥವ್ಯವಸ್ಥೆ ಈಗಲೂ ಕೊವಿಡ್-ಪೂರ್ವದ ಮಟ್ಟವನ್ನು ತಲುಪಿಲ್ಲ ಮಾತ್ರವೇ ಅಲ್ಲ. ಕೊವಿಡ್ ಬಾಧಿಸದೇ ಇರುತ್ತಿದ್ದರೆ, ಅರ್ಥವ್ಯವಸ್ಥೆ ಸುಮಾರು 4% ದರದಲ್ಲಿ ವೃದ್ದಿಯಾಗುತ್ತಿರಬೇಕಾಗಿತ್ತು. ಆದ್ದರಿಂದಲೇ ಹೆಚ್ಚೆಂದರೆ ನಮ್ಮ ಅರ್ಥವ್ಯವಸ್ಥೆ ಸ್ಥಗಿತತೆಯಲ್ಲಿದೆ ಎಂದಷ್ಟೇ ಹೇಳಬಹುದು.

ಎಪ್ರಿಲ್2022ರಲ್ಲಿ ಸಗಟು ಹಣದುಬ್ಬರ 15.08% ಮತ್ತು ಚಿಲ್ಲರೆ ಹಣದುಬ್ಬರ 7.8% ಎಂಬುದನ್ನು ಪರಿಗಣಿಸಿದರೆ ದೇಶದ ಅರ್ಥವ್ಯವಸ್ಥೆ 'ಸ್ಥಗಿತದುಬ್ಬರ' (ಸ್ಟಾಗ್‌ಫ್ಲೇಷನ್) ಸ್ಥಿತಿಯಲ್ಲಿದೆ ಎಂದೇ ಹೇಳಬೇಕಾಗುತ್ತದೆ. ಉಕ್ರೇನ್ ಯುದ್ಧದಿಂದ ಜಾಗತಿಕ ಅರ್ಥವ್ಯವಸ್ಥೆ ನಿಧಾನಗತಿಗೆ ಇಳಿದಿರುವ ಸಂದರ್ಭದಲ್ಲಿ ಪರಿಸ್ಥಿತಿ ಇನ್ನಷ್ಟು ಕಳವಳಕಾರಿಯಾಗಿದೆ, ವಿಶೇಷವಾಗಿ ನಮ್ಮ ಸಮಾಜದ ಬಡವಿಭಾಗಗಳಿಗೆ ಎನ್ನುತ್ತಾರೆ ಪ್ರೊ.ಅರುಣ್ ಕುಮಾರ್.

ಇಂತಹ ಸಂದರ್ಭದಲ್ಲಿ ರಿಜರ್ವ್ ಬಾಂಕ್ ಕ್ರಮಗಳಿಂದ ಏನೂ ಆಗದು, ಸರಕಾರವೇ ಕ್ರಮ ಕೈಗೊಳ್ಳಬೇಕು. **ಹಾಗಿದ್ದರೆ ಸರಕಾರ ಏನು ಮಾಡಬೇಕು**?

ಸರಕುಗಳ ಪೂರೈಕೆಗೆ ಇರುವ ಅಡ-ತಡೆಗಳನ್ನು ನಿವಾರಿಸಬೇಕು, ಸಟ್ಟಾಕೋರತನವನ್ನು ತಡೆಯಬೇಕು, ಪರೋಕ್ಷ ತೆರಿಗೆಗಳನ್ನು ಇಳಿಸಬೇಕು, ಇದರಿಂದ ಬಜೆಟಿನ ಹಣಕಾಸು ಕೊರತೆ ಹೆಚ್ಚುವುದಾದರೆ ಶ್ರೀಮಂತ ವಿಭಾಗಗಳ ಮೇಲಿನ ನೇರ ತೆರಿಗೆಗಳನ್ನು ಹೆಚ್ಚಿಸಬೇಕು ಎಂದು ಪ್ರೊ. ಅರುಣ್ ಕುಮಾರ್ ಹೇಳುತ್ತಾರೆ.

ಆದರೆ ಹಣದುಬ್ಬರ, ಏರುತ್ತಿರುವ ಬಡ್ಡಿದರಗಳು, ರೂಪಾಯಿಯ ಮೌಲ್ಯದಲ್ಲಿ ಇಳಿಕೆ ಮತ್ತು ಏರುತ್ತಿರುವ ನಿರುದ್ಯೋಗದ ಪರಿಸ್ಥಿತಿ ಇರುವಾಗಲೂ ಆರ್ಥಿಕ ಚೇತರಿಕೆ ಆರಂಭವಾಗಿದೆ ಎಂದು ಘೋಷಿಸಿರುವ ಸರಕಾರ "ಸೇವಾ-ಸುಶಾಸನ್-ಗರೀಬ್ ಕಲ್ಯಾಣ್"ನ ಘೋಷಣೆ ಕೊಟ್ಟಿರುವ ಸನ್ನಿವೇಶದಲ್ಲಾದರೂ ಇಂತಹ ಕ್ರಮಗಳನ್ನು ಕೈಗೊಳ್ಳುತ್ತದೆಯೇ? ಕಾದು ನೋಡಬೇಕು.

ಆರೋಗ್ಯ ವಲಯವನ್ನು ಬಲಗೊಳಿಸುವ ಇಚ್ಛೆ ಸರಕಾರಕ್ಕೆ ಇದ್ದಂತಿಲ್ಲ-ಸಂಸದೀಯ ಸ್ಥಾಯೀ ಸಮಿತಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 2022-23ರ ಬಜೆಟಿನಲ್ಲಿ ಕೊಟ್ಟಿರುವುದು ಒಟ್ಟು ಬಜೆಟ್ ಅಂದಾಜಿನ 2.1% ವಾದರೆ, ರಕ್ಷಣಾ ಇಲಾಖೆಗೆ ಕೊಟ್ಟಿರುವುದು 13.3% ಎಂದು ಸಂಸತ್ತಿನ ಆರೋಗ್ಯ ಮತ್ತು ಕಲ್ಯಾಣ ಕುರಿತಾದ ಸ್ಥಾಯೀ ಸಮಿತಿ ತನ್ನ 134 ನೇ ವರದಿಯಲ್ಲಿ ಟಿಪ್ಪಣಿ ಮಾಡಿದೆ.

ಭಾರತದಂತಹ ದೇಶದಲ್ಲಿ ಸಂಪನ್ಮೂಲಗಳನ್ನು ಹೊಂದಿಸುವುದು ಸವಾಲಿನ ಪ್ರಶ್ನೆಯೆಂಬುದೇನೋ ನಿಜ. ಆದರೆ ಇದು ಆರೋಗ್ಯ ವೆಚ್ಚಗಳನ್ನು ಹೆಚ್ಚಿಸದಿರಲು ಮತ್ತು ಆರೋಗ್ಯ ವಲಯಕ್ಕೆ ಕಡಿಮೆ ಆದ್ಯತೆ ಕೊಡಲು ಕಾರಣವಾಗಬಾರದು. 2021-22ರ ಪರಿಷ್ಕೃತ ಬಜೆಟಿನಲ್ಲಿ ಈ ಬಾಬ್ತು ರೂ.86000.65 ಕೋಟಿ, 2022-23ರಲ್ಲಿ ಇದರಲ್ಲಿ ಕೇವಲ 200 ಕೋಟಿ ರೂ.ಹೆಚ್ಚಳ ಮಾಡಲಾಗಿದೆ.

"ಸಾಂಕ್ರಾಮಿಕವು ಆರೋಗ್ಯ ಮೂಲರಚನೆಯ ಶೋಚನೀಯ ಸ್ಥಿತಿಯನ್ನು ಬಹಿರಂಗಕ್ಕೆ ತಂದಿತು ಮತ್ತು ಮೂಲರಚನೆಯ ಕಂದರವನ್ನು ತುಂಬಲು, ಆರೋಗ್ಯಪಾಲನೆ ಸೌಲಭ್ಯಗಳನ್ನು ಬಲಪಡಿಸಲು ಸರಕಾರ ಗಮನ ಕೇಂದ್ರೀಕರಿಸಬೇಕಾದ ಅಗತ್ಯವಿದೆ ಎಂದು ಕಂಡು ಬಂತು. ಸಾಂಕ್ರಾಮಿಕದ ಹಾವಳಿಗಳು ಆರೋಗ್ಯಪಾಲನೆ ಸೇವೆಗಳಲ್ಲಿ ನಗರ-ಗ್ರಾಮೀಣ ವಿಭಜನೆಯತ್ತ ಸರಕಾರ ಗಮನ ಕೊಡುವಂತೆ ಮಾಡುತ್ತದೆ ಎಂಬ ನಿರೀಕ್ಷೆ ಇತ್ತು".

ಆದರೆ ಹಾಗಾಗಿಲ್ಲ, ಕೇವಲ 0.2% ಹೆಚ್ಚಳ ಆರೋಗ್ಯ ವಲಯದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಾದ ತುರ್ತು ಅಗತ್ಯವನ್ನು ನಿಭಾಯಿಸುವ ಮನಸ್ಸು ಸರಕಾರಕ್ಕೆ ಇಲ್ಲ ಎಂದು ವರದಿ ಖೇದ ವ್ಯಕ್ತಪಡಿಸಿದೆ.

"ಜನಗಳನ್ನು ಬಡತನದತ್ತ ತಳ್ಳುವ ಮತ್ತು ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಛಿದ್ರಗೊಳಿಸುವ ಒಂದು ವಲಯವೆಂದರೆ ಆರೋಗ್ಯ. ವಿಪರೀತ ಆರೋಗ್ಯ ವೆಚ್ಚಗಳಿಂದಾಗಿ ಪ್ರತಿ ವರ್ಷ ಜನಸಂಖ್ಯೆಯ ಸರಾಸರಿ 4.16% ಬಡತನಕ್ಕೆ ಜಾರುತ್ತದೆ ಎಂದು ಡಬ್ಲ್ಯುಹೆಚ್ಒ ಮತ್ತು ವಿಶ್ವ ಬ್ಯಾಂಕ್ ವರದಿಗಳು ಹೇಳುತ್ತವೆ" ಎಂದಿರುವ ವರದಿ ಬಜೆಟ್ ಹಣನೀಡಿಕೆಯಲ್ಲಿ ಆರೋಗ್ಯ ವಲಯದ ಮಹತ್ವವನ್ನು ಕಡೆಗಣಿಸಬಾರದು, ಆರೋಗ್ಯಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದೆ.

ಈ ಸ್ಥಾಯೀ ಸಮಿತಿಯ 30 ಸದಸ್ಯರಲ್ಲಿ 13 ಆಳುವ ಪಕ್ಷದ ಸದಸ್ಯರಿದ್ದಾರೆ.

ಈ ನಡುವೆ ಪ್ರಕಟವಾಗಿರುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ(ಎನ್ಎಫ್ಹೆಚ್ಎಸ್)ಯ ಐದನೇ ಸುತ್ತಿನ ಪ್ರಕಾರ ದೇಶದಲ್ಲಿ 60% ದಷ್ಟು ಮಹಿಳೆಯರಿಗೆ ಆರೋಗ್ಯಪಾಲನೆ ಲಭ್ಯವಾಗಿಲ್ಲ. ಆಧಿವಾಸಿ ಮಹಿಳೆಯರಲ್ಲಂತೂ 70.9% ಮಂದಿಗೆ ಲಭ್ಯವಾಗಿಲ್ಲ. ಅಸಮರ್ಪಕ ಮೂಲರಚನೆಗಳು ಮತ್ತು ಆರೋಗ್ಯ ಸಿಬ್ಬಂದಿ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಎರಡು ಮುಖ್ಯ ಸಮಸ್ಯೆಗಳು ಎಂದು ಈ ಸರ್ವೆಯಲ್ಲಿ ಕಂಡು ಬಂದಿದೆ.

ಆರೋಗ್ಯ ಸೇವೆಗಳ ಲಭ್ಯತೆಯಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಬಹಳಷ್ಟು ಅಸಮಾನತೆಯಿದೆ, ಇದರಲ್ಲಿ ನಾಲ್ಕನೇ ಮತ್ತು ಐದನೇ ಸುತ್ತುಗಳ ನಡುವೆ ಬಹಳೇನೂ ಪ್ರಗತಿಯಾಗಿಲ್ಲ ಎಂದೂ ಸರ್ವೆ ತೋರಿಸಿರುವುದಾಗಿ ವರದಿಯಾಗಿದೆ.

ಆಧಾರ್ 'ದುರುಪಯೋಗ'ದ ಸಾಧ್ಯತೆಯೂ! ಮತ್ತು 'ತಪ್ಪು ವ್ಯಾಖ್ಯಾನ'ದ ಸಾಧ್ಯತೆಯೂ!!

ಮೇ 27 ರಂದು ಯುಐಡಿಎಐ(ಆಧಾರ್ ವ್ಯವಸ್ಥೆ ಕುರಿತ ಪ್ರಾಧಿಕಾರ)ದ ಬೆಂಗಳೂರು ಕಚೇರಿ ಆಧಾರ್‌ನ ಫೋಟೋ ಪ್ರತಿಗಳನ್ನು ಹೊಟೆಲ್, ಸಿನೆಮಾ ಹಾಲ್ ಮುಂತಾದಡೆಗಳಲ್ಲಿ ಕೊಡಬೇಡಿ, ಅದನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಜನರಿಗೆ ಎಚ್ಚರಿಕೆ ನೀಡಿತ್ತು. 'ಯೂಸರ್ ಲೈಸೆನ್ಸ್' ಪಡೆದಿರುವವರಿಗೆ ಮಾತ್ರ ಅದನ್ನು ಕೊಡಬಹುದು ಎಂದು ಅದು ಹೇಳಿದ್ದರೂ ಇಂತಹ ಲೈಸೆನ್ಸ್ ಪಡೆದಿದ್ದಾರೆ ಎಂದು ತಿಳಿದುಕೊಳ್ಳುವುದು ಹೇಗೆ ಎಂದು ಅದು ತಿಳಿಸಿರಲಿಲ್ಲ.

ಇದಾದ ಎರಡನೇ ದಿನವೇ ಕೇಂದ್ರ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಈ ಎಚ್ಚರಿಕೆಯನ್ನು ಹಿಂತೆಗೆದುಕೊಂಡಿತು. ಅದಕ್ಕೆ ಕೊಟ್ಟಿರುವ ಕಾರಣ: ಈ ಎಚ್ಚರಿಕೆಯನ್ನು ತಪ್ಪಾಗಿ ವ್ಯಾಖ್ಯಾನಿಸುವ ಸಾಧ್ಯತೆಯಿದೆ! ಜನಗಳು ತಮ್ಮ ಎಂದಿನ ವಿವೇಚನೆಯನ್ನು ಬಳಸಬೇಕು ಎಂದು ಹೇಳಿರುವ ಇಲಾಖೆ ಕೂಡ ಈ 'ಎಂದಿನ ವಿವೇಚನೆ' ಎಂದರೇನು ಎಂದು ಹೇಳಿಲ್ಲ!


ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಅಂಕೆಗಳನ್ನು ಮಾತ್ರ ತೋರಿಸುವ ಮುಸುಕಿನ ಆಧಾರ್ ಅನ್ನು ಬೇಕಾದರೆ ಕೊಡಬಹುದು ಎಂದು ಯುಐಡಿಎಐ ನ ಎಚ್ಚರಿಕೆ ಹೇಳಿತ್ತು. ಆದರೆ ಇದನ್ನು ಪಡೆಯುವುದು ಹೇಗೆ ಎಂದೂ ಹೇಳಿರಲಿಲ್ಲ.

ಯುಐಡಿಎಐನ ಈ ಹೇಳಿಕೆ ಅದರ ಮಾಜಿ ಮುಖ್ಯಸ್ಥರು ಮತ್ತು ಟೆಲಿಕಾಂ ನಿಯಂತ್ರಣ ಪ್ರಾಧಿಕಾರದ ಮಾಜಿ ಅಧ್ಯಕ್ಷ ಆರ್.ಎಸ್.ಶರ್ಮ ಆಧಾರ್ ಅನ್ನು ದುರುಪಯೋಗ ಪಡಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು 2018ರಲ್ಲಿ ಹಾಕಿದ್ದ ಸವಾಲಿಗೆ ತದ್ವಿರುದ್ಧವಾಗಿದೆ ಎಂಬುದನ್ನು ಇಲ್ಲಿ ಹಲವರು ಪ್ರಸ್ತಾಪಿಸಿದ್ದಾರೆ.

ಇನ್ನೊಂದೆಡೆಯಲ್ಲಿ ಮಹಾಲೆಕ್ಕ ಪರಿಶೋಧಕರ ಕಚೇರಿ ಎಪ್ರಿಲ್ ತಿಂಗಳಲ್ಲಿ ಆಧಾರ್ ನಲ್ಲಿ ಖಾಸಗಿತ್ವದ ಉಲ್ಲಂಘನೆಯ ಅಪಾಯ ಇದೆ ಎಂದು ಟಿಪ್ಪಣಿ ಮಾಡಿರುವುದಾಗಿಯೂ ವರದಿಯಾಗಿದೆ.


ಆದರೂ ಆಧಾರ್ ಪ್ರಾಧಿಕಾರ ಮತ್ತು ಕೇಂದ್ರ ಸರಕಾರದ ನಡುವೆ ಈ ಗೊಂದಲ ಏಕಿರಬಹುದು?

ಇದು ಈಗ ಮತ್ತೆ ಒತ್ತಿ ಹೇಳಿರುವ 'ಸುಶಾಸನ'ದ ವ್ಯಂಗ್ಯ ಎನ್ನುವ ಭಯವೇ?



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್

ದಿಲ್ಲಿಯಲ್ಲಿ ಮೇ 27ರಂದು ದೇಶದ ಅತ್ಯಂತ ದೊಡ್ಡ ದ್ರೋಣ್ ಉತ್ಸವವನ್ನು ಉದ್ಘಾಟಿಸುತ್ತ ಪ್ರಧಾನಿಗಳು ಆಳ್ವಿಕೆಯಲ್ಲಿ ದ್ರೋಣ್‌ಗಳ ಬಳಕೆ ಮತ್ತು ಮಹತ್ವವನ್ನು ಒತ್ತಿ ಹೇಳಿದರು.. ಇದರಿಂದ ದೇಶಾದ್ಯಂತ ಅಭಿವೃದ್ಧಿ ಕಾರ್ಯಗಳನ್ನು ಮುನ್ಸೂಚನೆ ಕೊಡದೆ ತಪಾಸಣೆ ನಡೆಸಲು ತನಗೆ ಸಾಧ್ಯವಾಗಿದೆ ಎಂದು ಅವರು ಹೇಳಿದರು-ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್, ವಾರ್ತಾಭಾರತಿ

‘ಅಂತಾರಾಷ್ಟ್ರೀಯ’ ಮಧ್ಯಮ ವರ್ಗದ ಉದಯದ ಪ್ರವೃತಿ



ಮೂರನೆಯ ಜಗತ್ತಿನ ಮೂಲದ ವ್ಯಕ್ತಿಗಳು ಮುಂದುವರಿದ ಜಗತ್ತಿನ ದೇಶಗಳಲ್ಲಿ ಉದಯೋನ್ಮುಖ ರಾಜಕಾರಣಿಗಳಾಗಿ ಮತ್ತು ಉದ್ಯಮಿಗಳಾಗಿ ಪ್ರಾಮುಖ್ಯತೆ ಪಡೆಯುತ್ತಿರುವುದೂ ಒಂದು ಹೊಸ ವಿದ್ಯಮಾನವೇ. ಇದು ಮುಂದುವರಿದ ಜಗತ್ತಿನ ದೇಶಗಳು ಮೂರನೆಯ ಜಗತ್ತಿನ ದೇಶಗಳ ಮಧ್ಯಮ ವರ್ಗದ ವ್ಯಕ್ತಿಗಳನ್ನು "ಗೌರವದಿಂದ" ಕಾಣುತ್ತಾರೆ ಎಂಬ ನಂಬಿಕೆಯ ನೆಲೆಯಲ್ಲಿ ಮೂರನೆಯ ಜಗತ್ತಿನ ಮಧ್ಯಮ ವರ್ಗದ ಮನವೊಲಿಸುವ ಪರಿಣಾಮವನ್ನೂ ಸಹ ಹೊಂದಿದೆ. ಒಂದು ಹೊಸ ಮತ್ತು "ನ್ಯಾಯಸಮ್ಮತ" ವಿಶ್ವ ವ್ಯವಸ್ಥೆಯು ಉದಯವಾಗುತ್ತಿದೆ, ಸಾಮ್ರಾಜ್ಯಶಾಹಿಯು ಇನ್ನು ಮುಂದೆ ಒಂದು ವಿದ್ಯಮಾನವಾಗಿ ಉಳಿಯದು ಎಂದು ನಂಬಿರುವ ಒಂದು ಹೊಸ ‘ಅಂತಾರಾಷ್ಟ್ರೀಯ’ಮಧ್ಯಮ ವರ್ಗ ಉದಯವಾಗುತ್ತಿರುವುದನ್ನು ಇದು ಸೂಚಿಸುತ್ತಿದೆಯೇ? ಇದರ ಪರಿಣಾಮಗಳೇನು? ಮುಖ್ಯವಾಗಿ, ದಬ್ಬಾಳಿಕೆಗೊಳಗಾದ ವರ್ಗಗಳೂ ಸಹ ಮಧ್ಯಮ ವರ್ಗದ ಈ ಸೈದ್ಧಾಂತಿಕ ನಿಲುವಿಗೆ ಮೌನವಾಗಿ ಶರಣಾಗಿರುವ ಒಂದು ಅಭೂತಪೂರ್ವ ಸನ್ನಿವೇಶದಲ್ಲಿ...

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**







ಬ್ರಿಟಿಷ್ ಪ್ರಧಾನ ಮಂತ್ರಿಯವರ ಅಧಿಕೃತ ನಿವಾಸದ ಪಕ್ಕದಲ್ಲಿಯೇ ಬ್ರಿಟನ್ನಿನ ಹಣಕಾಸು ಸಚಿವ ಭಾರತ ಮೂಲದ ರಿಷಿ ಸುನಕ್ ಅವರ ಅಧಿಕೃತ ನಿವಾಸವೂ ಇದೆ. ಬ್ರಿಟನ್‌ನ ಗೃಹ ಸಚಿವೆ ಪ್ರೀತಿ ಪಟೇಲ್ ಸಹ ಭಾರತ ಮೂಲದವರೇ. ಅಮೆರಿಕದ ಉಪಾಧ್ಯಕ್ಷೆ ಆಗಿರುವ ಕಮಲಾ ಹ್ಯಾರಿಸ್ ಅವರ ತಾಯಿ ಭಾರತದವರು ಮತ್ತು ತಂದೆ ಜಮೈಕಾದವರು. ಹೀಗೆ, ಅಂತಾರಾಷ್ಟ್ರೀಯ ವ್ಯಾಪಾರ–ಉದ್ಯಮ ಜಗತ್ತಿನಲ್ಲಿ ಇಂತಹ "ಯಶೋಗಾಥೆಗಳ" ಅನೇಕ ಗಮನಾರ್ಹ ಉದಾಹರಣೆಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಈ ವ್ಯಕ್ತಿಗಳು ತಮ್ಮ ಮೂಲ–ದೇಶಗಳಿಂದ ಬೇರುಗಳನ್ನು ಪೂರ್ಣವಾಗಿ ಕತ್ತರಿಸಿಕೊಂಡವರಲ್ಲ. ಉದಾಹರಣೆಗೆ, ರಿಷಿ ಸುನಕ್ ಅವರ ಪತ್ನಿ ಭಾರತದ ಪೌರರಾಗಿಯೇ ಇದ್ದಾರೆ. ಅಮೆರಿಕಾದ ವಿದೇಶಾಂಗ ಸಚಿರಾಗಿದ್ದ ಜೆಕ್ ಮೂಲದ ಮ್ಯಾಡೆಲಿನ್ ಆಲ್ಬ್ರೈಟ್ ಅವರನ್ನು ಹಿಂದೊಮ್ಮೆ ಜೆಕ್ ಗಣರಾಜ್ಯದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಪ್ರಸ್ತಾಪ ಮಾಡಲಾಗಿತ್ತು.

ಇವು ಅಭೂತಪೂರ್ವ ವಿದ್ಯಮಾನಗಳೇ. ಬೇರೊಂದು ದೇಶದ ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಕೆಲವು ವ್ಯಕ್ತಿಗಳು ತಾವು ನೆಲೆ ಕಂಡುಕೊಂಡ ದೇಶಗಳಲ್ಲಿ ಪ್ರಮುಖ ರಾಜಕೀಯ ಸ್ಥಾನಗಳನ್ನು ಅಲಂಕರಿಸಿರುವುದೂ ನಿಜವೇ. ಒಬ್ಬ ಯಹೂದಿ ಮತ್ತು ಇಟಾಲಿಯನ್ ಭಾಷಿಕ ಹಿನ್ನೆಲೆಯ ಬೆಂಜಮಿನ್ ಡಿಸ್ರೇಲಿ ಅವರು ಬ್ರಿಟನ್ನಿನ ಪ್ರಧಾನಿಯಾಗಿದ್ದರು ಎಂಬುದು ಈ ಮಾತಿಗೆ ಎದ್ದುಕಾಣುವ ಒಂದು ಉದಾಹರಣೆ. ಆದರೆ, ಮೂರನೆಯ ಜಗತ್ತು–ಮೂಲದ ವ್ಯಕ್ತಿಗಳು ಮುಂದುವರಿದ ಜಗತ್ತಿನ ದೇಶಗಳಲ್ಲಿ ಉದಯೋನ್ಮುಖ ರಾಜಕಾರಣಿಗಳಾಗಿ ಮತ್ತು ಉದ್ಯಮಿಗಳಾಗಿ ಪ್ರಾಮುಖ್ಯತೆ ಪಡೆಯುತ್ತಿರುವುದೂ ಒಂದು ಹೊಸ ವಿದ್ಯಮಾನವೇ. ಈ ವಿದ್ಯಮಾನವು ಆತಿಥೇಯ ದೇಶಗಳ "ತಾರತಮ್ಯವಿಲ್ಲದ" ನಡತೆಯನ್ನು ಜಾಹೀರುಪಡಿಸುವುದಷ್ಟೇ ಅಲ್ಲ; ಮುಂದುವರಿದ ಜಗತ್ತಿನ ದೇಶಗಳು ಮೂರನೆಯ ಜಗತ್ತಿನ ದೇಶಗಳ ಮಧ್ಯಮ ವರ್ಗದ ವ್ಯಕ್ತಿಗಳನ್ನು "ಗೌರವದಿಂದ" ಕಾಣುತ್ತಾರೆ ಎಂಬ ನಂಬಿಕೆಯ ನೆಲೆಯಲ್ಲಿ ಮೂರನೆಯ ಜಗತ್ತಿನ ಮಧ್ಯಮ ವರ್ಗದ ಮನವೊಲಿಸುವ ಪರಿಣಾಮವನ್ನೂ ಸಹ ಹೊಂದಿದೆ. ಮತ್ತು, ಒಂದು ಹೊಸ ಮತ್ತು "ನ್ಯಾಯಸಮ್ಮತ" ವಿಶ್ವ ವ್ಯವಸ್ಥೆಯು ಉದಯವಾಗುತ್ತಿದೆ ಮತ್ತು ಈ ಹೊಸ ಜಗತ್ತಿನಲ್ಲಿ ವ್ಯಕ್ತಿಯು ಯಶಸ್ಸನ್ನು ಸಾಧಿಸಲು ಆತನ/ಅವಳ ದೇಶ–ಮೂಲ ಮುಖ್ಯವಲ್ಲ ಎಂಬ ಭಾವನೆಯನ್ನು ಮೂಡಿಸುತ್ತದೆ. ಹಿಂದಿನ ವಸಾಹತುಶಾಹಿ ಆಳ್ವಿಕೆಯ ದಿನಗಳಲ್ಲಿ ಮಧ್ಯಮ ವರ್ಗವು ತಮ್ಮದೇ ದೇಶಗಳಲ್ಲಿ ತಮ್ಮೊಂದಿಗೆ ತಾರತಮ್ಯ ಮಾಡಲಾಗುತ್ತಿದೆ ಎಂಬ ನೋವನ್ನು ಹೊಂದಿತ್ತು. ಒಂದು ನಿರ್ದಿಷ್ಟ ಮಟ್ಟದ ಹುದ್ದೆಗಳಿಗಿಂತ ಮೇಲಿನ ಹುದ್ದೆಗಳಿಗೆ ಏರಲು ತಮಗೆ ಅವಕಾಶ ನೀಡಲೇ ಇಲ್ಲ ಎಂಬ ನೋವಿನ ಅನುಭವವು ವಸಾಹತುಶಾಹಿ ನೊಗವನ್ನು ಕಿತ್ತೊಗೆಯುವ ಅಗತ್ಯವನ್ನು ಅವರಿಗೆ ಮನಗಾಣಿಸಿತು. ಇದಕ್ಕೆ ವ್ಯತಿರಿಕ್ತವಾಗಿ, ಮೂರನೆಯ ಜಗತ್ತಿನ ದೇಶಗಳ ಮಧ್ಯಮ ವರ್ಗದ ಪ್ರಸ್ತುತ ಅನುಭವವು ತಮ್ಮನ್ನು ಮುಂದೆಯೂ "ಗೌರವ"ದಿಂದಲೇ ಕಾಣುತ್ತಾರೆ ಎಂಬ ಭಾವವನ್ನು ಅವರಲ್ಲಿ ಮೂಡಿಸಿದೆ. ಮತ್ತು, ಸಾಮ್ರಾಜ್ಯಶಾಹಿಯು ಇನ್ನು ಮುಂದೆ ಒಂದು ವಿದ್ಯಮಾನವಾಗಿ ಉಳಿಯದು ಎಂದೇ ಈ ಮಧ್ಯಮ ವರ್ಗವು ಎಣಿಸುತ್ತದೆ.

‘ಅನುಸರಿಸಿಕೊಂಡು ಹೋಗುವ’ ಸಿದ್ಧಾಂತದ ಪರಿಣಾಮಗಳು

ಆದರೆ ಈ ಗ್ರಹಿಕೆಯು ಮತ್ತೊಂದು ಗ್ರಹಿಕೆಗೆ ಪುಷ್ಟಿ ನೀಡುತ್ತದೆ. ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಮಾಜಿಕ–ಆರ್ಥಿಕ ಪ್ರಗತಿಗೆ ಏನಾದರೂ ಅಡೆ ತಡೆಗಳಿದ್ದರೆ, ಅವು ವ್ಯಕ್ತಿಯ ಹುಟ್ಟಿನ ಮೂಲದಿಂದ ಅಥವಾ ಚರ್ಮದ ಬಣ್ಣದಿಂದ ಉದ್ಭವಿಸುವುದಿಲ್ಲ. ಆದರೆ, "ತೊಂದರೆಯನ್ನಷ್ಟೇ ಉಂಟುಮಾಡುವ" "ಹಳೆಯ–ಶೈಲಿಯ" ಎಡಪಂಥೀಯ ಸೈದ್ಧಾಂತಿಕ ನಂಬಿಕೆಗಳಿಗೆ ಆತುಕೊಳ್ಳುವುದರಿಂದ ಉದ್ಭವಿಸುತ್ತವೆ. ಜಾತಿ ಅಥವಾ ಜನಾಂಗೀಯತೆ ಆಧಾರಿತ ತಾರತಮ್ಯಗಳು ಮರೆಯಾದಂತೆ ತೋರುವುದರಿಂದ, ವ್ಯಕ್ತಿಯು ತನ್ನ ವೃತ್ತಿಜೀವನದಲ್ಲಿ ಏಳಿಗೆ ಹೊಂದಬೇಕು ಎಂದಾದರೆ, ಇಂತಹ ಸೈದ್ಧಾಂತಿಕ ನಂಬಿಕೆಗಳನ್ನು ತ್ಯಜಿಸಬೇಕು. ಹೇಗಿದ್ದರೂ ಅವು ಸತ್ವಹೀನವಾಗಿವೆ ತಾನೇ. ಈ ರೀತಿಯ ಒಂದು ಗ್ರಹಿಕೆಯು ಮಧ್ಯಮ ವರ್ಗಗಳಲ್ಲಿ ಕಂಡುಬರುವ ಈ ‘ಅನುಸರಿಸಿಕೊಂಡು ಹೋಗುವ’ ಸಿದ್ಧಾಂತದ ತಳದಲ್ಲಿದೆ ಎಂಬುದನ್ನು ಸಮಕಾಲೀನ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯು ಅಸ್ತಿತ್ವದದಲ್ಲಿರುವ ಎಲ್ಲ ದೇಶಗಳಲ್ಲೂ ಕಾಣಬಹುದು. ಈ ಸೈದ್ಧಾಂತಿಕ ಮನೋಭಾವಕ್ಕೆ ಹೊಂದಿಕೊಳ್ಳದಿರುವುದು ಸತ್ವಹೀನವಂತೂ ಆಗಿದೆ, ಅದರಿಂದ ವೃತ್ತಿಜೀವನವೂ ಹಾನಿಗೊಳಗಾಗುತ್ತದೆ ಎಂದು ಭಾವಿಸಲಾಗುತ್ತಿದೆ. ಇದು ಹಲವು ರೀತಿಯಲ್ಲಿ ಪರಿಣಾಮ ಬೀರುತ್ತದೆ.

ಮೊದಲನೆಯ ಪರಿಣಾಮವೆಂದರೆ, ಮಧ್ಯಮವರ್ಗದ ಈ ಸೈದ್ಧಾಂತಿಕ ಮನೋಭಾವವು, ಸಮಾಜವನ್ನು ಒಂದು ಕ್ರಾಂತಿಕಾರಕವಲ್ಲದ ದಿಕ್ಕಿನಲ್ಲೂ ಸಹ ಬದಲಾಯಿಸುವ ಅದರ ಹುಮ್ಮಸ್ಸನ್ನು ಕುಗ್ಗಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನವ ಉದಾರವಾದಕ್ಕೆ ಬದ್ಧವಾಗಿರುವುದೇ ಮಧ್ಯಮ ವರ್ಗವನ್ನು ನಿರೂಪಿಸುವ ಈ ಸೈದ್ಧಾಂತಿಕ ಏಕರೂಪತೆಯ ತಿರುಳು. ಬಂಡವಾಳಶಾಹಿ ವ್ಯವಸ್ಥೆಯನ್ನು ಕಾರ್ಮಿಕರಿಗೂ ಹಿಡಿಸುವಂತೆ ಮಾಡುವ ಉದ್ದೇಶದಿಂದ, ಅರ್ಥವ್ಯವಸ್ಥೆಯಲ್ಲಿ ಸರ್ಕಾರದ ಮಧ್ಯಪ್ರವೇಶದ ಅಗತ್ಯದ ಬಗ್ಗೆ ಜಾನ್ ಮೇನಾರ್ಡ್ ಕೀನ್ಸ್ ಮತ್ತು ಇತರರು ಪ್ರತಿಪಾದಿಸಿದ "ಹೊಸ ಉದಾರವಾದ"ದ ಬಗ್ಗೆಯೂ ಮಧ್ಯಮ ವರ್ಗವು ಒಲವು ಹೊಂದಿಲ್ಲ. ಅಷ್ಟು ಮಟ್ಟಿನ "ಸಾಮಾಜಿಕ ಎಂಜಿನಿಯರಿಂಗ್" ಸಹ ಈಗ ಉದಯೋನ್ಮುಖವಾಗುತ್ತಿರುವ ಬಹುಪಾಲು ಮಧ್ಯಮ ವರ್ಗಕ್ಕೆ ಅನಗತ್ಯವಾಗಿ ತೋರುತ್ತದೆ. ಎರಡನೆಯ ಪರಿಣಾಮವೆಂದರೆ, ಮಧ್ಯಮ ವರ್ಗವು ಹೊಂದಿರುವ ಸೈದ್ಧಾಂತಿಕ ನಿಲುವಿನ ಏಕರೂಪತೆಗೆ ವ್ಯಕ್ತಿಯ ದೇಶ–ಮೂಲ ಅಥವಾ ನೆಲೆಸಿದ ಸ್ಥಳ ಇವುಗಳು ಅಡಚಣೆಯಾಗದ ನೆಲೆಯಲ್ಲಿ ಈ ಸೈದ್ಧಾಂತಿಕ ಅನುಸರಣೆಯು ಒಂದು "ಅಂತಾರಾಷ್ಟ್ರೀಯ" ಮಧ್ಯಮ ವರ್ಗದ ಉದಯವನ್ನು ಉತ್ತೇಜಿಸುತ್ತದೆ.

‘ಮೌನಸಮ್ಮತಿ’ಯ ಪ್ರಕ್ರಿಯೆ

ಮೂರನೆಯದಾಗಿ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ದಬ್ಬಾಳಿಕೆಗೊಳಗಾದ ವರ್ಗಗಳೂ ಸಹ ಮಧ್ಯಮ ವರ್ಗದ ಈ ಸೈದ್ಧಾಂತಿಕ ನಿಲುವಿಗೆ ಮೌನವಾಗಿ ಶರಣಾಗಿರುವ ಒಂದು ಅಭೂತಪೂರ್ವ ಸನ್ನಿವೇಶವನ್ನು ಕಾಣುತ್ತೇವೆ. ಬೂರ್ಜ್ವಾ ಮತ್ತು ಪುಟ್ಟ ಬೂರ್ಜ್ವಾ ವರ್ಗಗಳ ಶೈಕ್ಷಣಿಕ ವಿಶೇಷಾವಕಾಶ ಪಡೆದ ಮತ್ತು ಸಮಾಜ ಬದಲಾವಣೆಯ ಚಾರಿತ್ರಿಕ ಪ್ರಕ್ರಿಯೆಯನ್ನು ಸಮಗ್ರವಾಗಿ ನೋಡಲಾರಂಬಿಸಿದ ವ್ಯಕ್ತಿಗಳು ತಮ್ಮ ವರ್ಗ ಸವಲತ್ತುಗಳನ್ನು ತ್ಯಜಿಸಿ, ವರ್ಗ–ಮುಕ್ತರಾಗಿ, ಕಾರ್ಮಿಕರು ಮತ್ತು ರೈತರನ್ನು ಸಂಘಟಿಸುವಲ್ಲಿ ಒಂದು ಪ್ರವರ್ತಕ ಪಾತ್ರವನ್ನು ವಹಿಸುತ್ತಾರೆ ಎಂಬುದಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಕಮ್ಯೂನಿಸ್ಟ್ ಮ್ಯಾನಿಫೆಸ್ಟೋದಲ್ಲಿ ವಾದಿಸಿದ್ದರು. ಈ ಚಿಂತನಾಕ್ರಮವನ್ನು ಅನುಸರಿಸಿಯೇ ಲೆನಿನ್ ಹೀಗೆ ಹೇಳಿದ್ದರು: ವರ್ಗ–ಮುಕ್ತರಾದ ಕೆಲವು ಬುದ್ಧಿಜೀವಿಗಳು ಕೇವಲ ಟ್ರೇಡ್ ಯೂನಿಯನ್ ಪ್ರಜ್ಞೆಗಿಂತ ಭಿನ್ನವಾದ ಸಮಾಜವಾದಿ ಪ್ರಜ್ಞೆಯ ಬಗ್ಗೆ ದುಡಿಯುವ ವರ್ಗಕ್ಕೆ ಅರಿವು ಮೂಡಿಸುತ್ತಾರೆ. ಆದರೆ, ಬುದ್ಧಿಜೀವಿಗಳು ತಮ್ಮನ್ನು ತಾವು ಎಷ್ಟರಮಟ್ಟಿಗೆ ವರ್ಗ–ಮುಕ್ತಗೊಳಿಸಿಕೊಳ್ಳುತ್ತಾರೆ ಎಂಬುದು ಅವರ ಬೌದ್ಧಿಕ ನಂಬಿಕೆಗಳ ಮೇಲೆ ಅವಲಂಬಿತವಾಗಿಲ್ಲ; ಅದು "ಅನ್ಯಾಯದಿಂದ ಕೂಡಿದ" ವ್ಯವಸ್ಥೆಯು ಅವರ ವೈಯಕ್ತಿಕ ವೃತ್ತಿಜೀವನದಲ್ಲಿ ಎಷ್ಟರಮಟ್ಟಿಗೆ ಅಡಚಣೆಯಾಗಿತ್ತು ಎಂಬುದನ್ನು ಬುದ್ಧಿಜೀವಿಗಳಾಗಿ ಅವರು ಪಡೆದ ಅನುಭವದ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ, ವೈಯಕ್ತಿಕ ಪ್ರಗತಿಗೆ ಎದುರಾಗುವ ಅಡೆ ತಡೆಗಳ ನಿವಾರಣೆಯು ವರ್ಗ–ಮುಕ್ತ ಬುದ್ಧಿಜೀವಿಗಳ ಗುಂಪಿನ ಪ್ರಮಾಣದ ಮೇಲೂ ಪ್ರಭಾವ ಬೀರುತ್ತದೆ, ಆಮೂಲಕ ಕಾರ್ಮಿಕ ವರ್ಗಕ್ಕೆ ಕ್ರಾಂತಿಕಾರಿ ಸಿದ್ಧಾಂತವನ್ನು ಎಷ್ಟರ ಮಟ್ಟಿಗೆ ತರಲಾಗುತ್ತದೆ ಎಂಬ ಅಂಶದೊಂದಿಗೂ ಸಂಬಂಧ ಹೊಂದಿದೆ. ಇಂದು ಆಗುತ್ತಿರುವುದು ಇದೇ. ಮೈ ಬಣ್ಣದ ಆಧಾರದ ಮೇಲೆ ತಾರತಮ್ಯ ಮಾಡದೆಂದು ತೋರುವ ವ್ಯವಸ್ಥೆಯು ‘ನ್ಯಾಯಯುತ’ವಾಗಿದೆ ಎಂದು ಕಾಣಿಸಿಉವರ ಪರಿಣಾಮವಾಗಿ ಅದರ ಬಗ್ಗೆ ದಬ್ಬಾಳಿಕೆಗೊಳಗಾದವರಲ್ಲಿ ಮೌನಸಮ್ಮತಿಯನ್ನು ಉತ್ತೇಜಿಸುತ್ತದೆ. ಈ ವಿದ್ಯಮಾನವು ಸಮಕಾಲೀನ ನವ ಉದಾರವಾದಿ ಬಂಡವಾಳಶಾಹಿಯ ಒಂದು ಲಕ್ಷಣವೇ ಆಗಿದೆ ಎಂಬುದನ್ನು ಅನೇಕರು ಗಮನಿಸಿದ್ದಾರೆ.

ಈ ವಿದ್ಯಮಾನವು ನಮ್ಮನ್ನು ಸಮಸ್ಯೆಯ ತಿರುಳಿನತ್ತ ಕೊಂಡೊಯ್ಯುತ್ತದೆ. ನವ–ಉದಾರವಾದವು ಮೂರನೇ ಜಗತ್ತಿನ ರೈತರು ಮತ್ತು ಕಿರು ಉತ್ಪಾದಕರನ್ನು ಸದಾಕಾಲವೂ ದುರವಸ್ಥೆಗೆ ತಳ್ಳುತ್ತದೆ. ಅವರ ಜೀವನ ಮಟ್ಟವನ್ನು ಹದಗೆಡಿಸುತ್ತದೆ. ನವ–ಉದಾರವಾದವು ಕಾರ್ಮಿಕರನ್ನು ಸಂಪೂರ್ಣ ದುರ್ಗತಿಗೆ ತಳ್ಳುತ್ತದೆ: ಕಿರು ಉತ್ಪಾದನೆಯ ಮೇಲಿನ ಆಕ್ರಮಣದಿಂದಾಗಿ ಕಾರ್ಮಿಕರ ಮೀಸಲು ಪಡೆಯ (ಅಂದರೆ, ನಿರುದ್ಯೋಗಿಗಳ) ಹೆಚ್ಚಳವು ಸಕ್ರಿಯ ಉದ್ಯೋಗಿಗಳಿಗೂ ಮತ್ತು ಶ್ರಮ ಮೀಸಲು ಪಡೆಯಲ್ಲಿರುವವರಿಗೂ ನೋವುಂಟುಮಾಡುತ್ತದೆ. ಬಂಡವಾಳದ ಜಾಗತೀಕರಣವು ಪ್ರತಿಯೊಂದು ದೇಶದ ಕಾರ್ಮಿಕರ ಚೌಕಾಶಿಯ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಸಾರ್ವಜನಿಕ ವಲಯದ ಉದ್ಯಮಗಳ ಖಾಸಗೀಕರಣವೂ ಸಹ ಇದೇ ರೀತಿಯ ಪರಿಣಾಮವನ್ನು ಉಂಟುಮಾಡುತ್ತದೆ. ಹೀಗೆ, ನವ ಉದಾರವಾದದ ಆಳ್ವಿಕೆಯಲ್ಲಿ ಒಟ್ಟಾರೆಯಾಗಿ ದುಡಿಯುವ ಜನರ ಸ್ಥಿತಿ–ಗತಿಗಳು ಸಂಪೂರ್ಣವಾಗಿ ಹದಗೆಡುತ್ತವೆ. ಆದರೆ, "ಅಂತಾರಾಷ್ಟ್ರೀಯ" ಮಟ್ಟದಲ್ಲಿ ಮಧ್ಯಮ ವರ್ಗವಾಗಿ ಕಾಣಿಸಿಕೊಳ್ಳಬಯಸುವ ಈ ಮಧ್ಯಮ ವರ್ಗವು, ತಾರತಮ್ಯಗಳಿಗೆ ಅಂಜದೆ ವಿದೇಶಗಳಿಗೆ ವಲಸೆ ಹೋಗುವ ತನ್ನ ಸಾಮರ್ಥ್ಯದಿಂದಾಗಿ ಮತ್ತು ಸ್ವದೇಶದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವ ಮುಂದುವರಿದ ದೇಶಗಳ ಉತ್ಪಾದನಾ ಚಟುವಟಿಕೆಗಳ ಸ್ಥಳಾಂತರದಿಂದಾಗಿ, ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡಿದೆ. ಹಾಗಾಗಿ, ಮೂರನೆಯ ಜಗತ್ತಿನ ಬಂಡವಾಳಶಾಹಿ ಸಮಾಜಗಳಲ್ಲಿ ಒಂದು ಬಿರುಕು ಉಂಟಾಗಿದೆ. ಈ ಬಿರುಕು, ನವ ಉದಾರವಾದದಿಂದಾಗಿ ನರಳುತ್ತಿರುವ ದುಡಿಯುವ ಜನರು ಮತ್ತು ದೊಡ್ಡ ದೊಡ್ಡ ಬಂಡವಾಳಗಾರರ ನಡುವೆ ಮಾತ್ರವಲ್ಲ, ಪ್ರವರ್ಧಮಾನಕ್ಕೆ ಬರುತ್ತಿರುವ ಮಧ್ಯಮ ವರ್ಗದೊಂದಿಗೂ ಸಹ ಉಂಟಾಗಿದೆ. ಈ ಸಂಗತಿಯೇ ತುಳಿತಕ್ಕೊಳಗಾದವರು ಇವನ್ನೆಲ್ಲ ಮೌನವಾಗಿ ಒಪ್ಪಿಕೊಳ್ಳುವಂತೆ ಮಾಡುತ್ತದೆ.

ಮಧ್ಯಮ ವರ್ಗದ ಬಗ್ಗೆ ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ ಮೂರು ಎಚ್ಚರಿಕೆಯ ಕ್ರಮಗಳನ್ನು ಅನುಸರಿಸುವುದು ಉಚಿತವಾಗುತ್ತದೆ. ಮೊದಲನೆಯದಾಗಿ, ನಾನು ಇಲ್ಲಿ "ಮಧ್ಯಮ ವರ್ಗ" ಎಂಬ ಪದವನ್ನು ಅನೇಕ ವಿಧಗಳನ್ನು ಒಟ್ಟಿಗೇ ತುಂಬಿಡುವ ಬುಟ್ಟಿಯ ರೀತಿಯಲ್ಲಿ ಬಳಸಿದ್ದೇನೆ. "ಮಧ್ಯಮ ವರ್ಗಕ್ಕೆ" ಸೇರಿದವರು ಎಂದು ಸಾಮಾನ್ಯವಾಗಿ ಕರೆಯಬಹುದಾದವರಲಿಯ್ಲೂ ಸಹ ನವ ಉದಾರವಾದದ ಆಳ್ವಿಕೆಯಲ್ಲಿ

ಪುಟ 14 ಕ್ಕೆ

ಕೃಷಿ ಮತ್ತು ರೈತರಿಗೆ ಹೊಸ ಭರವಸೆ ಮೂಡಿಸಿದ ಕೇರಳ ಎಡರಂಗ ಸರ್ಕಾರ........

ಪುಟ 16 ರಿಂದ

ಬೀನ್ಸ್ ರೂ 34, ಟೊಮೆಟೊ ರೂ 8. ಬೆಂಡೆಕಾಯಿ ರೂ 20, ಎಲೆಕೋಸು ರೂ 11, ಕ್ಯಾರೆಟ್ ರೂ 21, ಆಲೂಗೆಡ್ಡೆ ರೂ 20, ಬೀನ್ಸ್ ರೂ 28, ಬೀಟ್ರೂಟ್ ರೂ 21 ಮತ್ತು ಬೆಳ್ಳುಳ್ಳಿ ರೂ 139. ಭವಿಷ್ಯದಲ್ಲಿ ಹೆಚ್ಚಿನ ಬೆಳೆಗಳನ್ನು ಪಟ್ಟಿಗೆ ಸೇರಿಸಲಾಗುತ್ತದೆ.

'ಸುಭಿಕ್ಷಾ ಕೇರಳಂ'

ಕೋವಿಡ್ ಸಾಂಕ್ರಾಮಿಕವು ರೈತರ ತೀವ್ರ ಸಂಕಷ್ಟಕ್ಕೆ ಗಮನಾರ್ಹವಾಗಿ ಕಾರಣವಾದಾಗ ಮತ್ತು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಅವರ ಸಂಕಷ್ಟಗಳ ಬಗ್ಗೆ ಸಂವೇದನಾರಹಿತ ಉದಾಸೀನತೆಯನ್ನು ತೋರಿದಾಗ, ಅದೇ ಸಂದರ್ಭದಲ್ಲಿ ಅವರ ಕಾರ್ಪೊರೇಟ್ ಆಪ್ತರಿಗೆ ಭಾರಿ ರಿಯಾಯಿತಿಗಳನ್ನು ನೀಡಿದಾಗ, ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರವು ತನ್ನ ಆದ್ಯತೆ ಎಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿತು. 'ಸುಭಿಕ್ಷಾ ಕೇರಳಂ' ಹೆಸರಿನ ಯೋಜನೆಯನ್ನು 2020–21 ರಲ್ಲಿ ಘೋಷಿಸಲಾಯಿತು ಮತ್ತು ಮೌಲ್ಯವರ್ಧನೆ, ಮಾರುಕಟ್ಟೆ ಪ್ರಕ್ರಿಯೆಗಾಗಿ ಕೃಷಿ, ಆಹಾರ ಭದ್ರತೆ ಮತ್ತು ಸಹಕಾರಿಗಳನ್ನು ಬಲಪಡಿಸಲು 3,600 ಕೋಟಿ ರೂ ಮೀಸಲಿಡಲಾಯಿತು. ಇದು ಆಹಾರದ ಕೊರತೆಯನ್ನು ಎದುರಿಸುವ ಗುರಿಯನ್ನು ಹೊಂದಿದೆ ಮತ್ತು ಕೇರಳ ರಾಜ್ಯ ಕೃಷಿ ಇಲಾಖೆಯ ಪಾಳು ಭೂಮಿಯನ್ನು ಫಾರ್ಮ್‌ಗಳಾಗಿ ಪರಿವರ್ತಿಸಲು ಪ್ರಾರಂಭಿಸಿದೆ; ಇದಕ್ಕಾಗಿ ಸುಮಾರು 25,000 ಹೆಕ್ಟೇರ್ ಗುರಿ ಹೊಂದಲಾಗಿದೆ. ಆಹಾರ ಉತ್ಪಾದನೆಯಲ್ಲಿ ರಾಜ್ಯದ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳುವುದು ಯೋಜನೆಯ ಉದ್ದೇಶವಾಗಿದೆ. ಇದನ್ನು ವಿವಿಧ ಸರ್ಕಾರಿ ಇಲಾಖೆಗಳ ಸಹಯೋಗದೊಂದಿಗೆ ಮತ್ತು ಜನರ ಸಹಭಾಗಿತ್ವದ ಮೂಲಕ ಜಾರಿಗೊಳಿಸಲಾಗಿದೆ. ವಿಶೇಷವಾಗಿ ಬಂಜರು ಭೂಮಿಯಲ್ಲಿ ಕೃಷಿಯನ್ನು ಉತ್ತೇಜಿಸಲು ಸಹಾಯಧನ ಮತ್ತು ಸಹಾಯವನ್ನು ನೀಡಲಾಗುತ್ತಿದೆ.

ಕೇರಳವು ಈಗಾಗಲೇ ರಾಜ್ಯಾದ್ಯಂತ ಸಹಕಾರಿ ಬ್ಯಾಂಕ್‌ಗಳ ಜಾಲವನ್ನು ಹೊಂದಿದ್ದು, ಎಡಪಕ್ಷಗಳು ಅದರ ಸಂಘಟನೆಯಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿವೆ. ನಿರೀಕ್ಷಿತವಾಗಿ 13 ಜಿಲ್ಲಾ ಸಹಕಾರಿ ಬ್ಯಾಂಕ್‌ಗಳನ್ನು ವಿಲೀನಗೊಳಿಸಿ 'ಕೇರಳ ಬ್ಯಾಂಕ್' ಅಥವಾ ಕೇರಳ ಸಹಕಾರಿ ಬ್ಯಾಂಕ್‌ನ ಸ್ಥಾಪನೆಯು ರೈತಾಪಿ ವರ್ಗಕ್ಕೆ ಹೆಚ್ಚಿನ ಸಹಾಯವನ್ನು ನೀಡುತ್ತಿದೆ. ಇತ್ತೀಚೆಗೆ ಅದು ಕೋಳಿ ಸಾಕಣೆದಾರರಿಗೆ 2000 ಕೋಳಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಲು ಸಹಾಯ ಮಾಡಲು 51 ಕೋಟಿ ರೂ.ಗಳ ಸಾಲವನ್ನು ವಿತರಿಸಿದೆ ಮತ್ತು ರೂ.1.5 ಲಕ್ಷದವರೆಗೆ ಯಾವುದೇ ಮೇಲಾಧಾರವಿಲ್ಲದೆ ಮತ್ತು ಶೇಕಡಾ 4 ರ ಬಡ್ಡಿದರದೊಂದಿಗೆ ಸಾಲವನ್ನು ನೀಡಲಾಗುತ್ತಿದೆ. ಕಿಸಾನ್ ಸಭಾವು ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆಗೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಲು ಉಪಕ್ರಮವನ್ನು ತೆಗೆದುಕೊಂಡಿದೆ. ಈ ಹಿಂದೆ ಉಲ್ಲೇಖಿಸಲಾದ ಮುಕ್ತ ವ್ಯಾಪಾರ ಒಪ್ಪಂದಗಳು ಹಾಗೂ ಭಾರತ–ಆಸಿಯಾನ್ ಎಫ್‌ಟಿಎ ವಾಣಿಜ್ಯ ಬೆಳೆಗಳ ಬೆಲೆ ಕುಸಿತಕ್ಕೆ ಕಾರಣವಾಗಿದ್ದರೂ ಸಹ, LDF ಸರ್ಕಾರವು ರೈತರನ್ನು ರಕ್ಷಿಸಲು, ಬೆಲೆಗಳನ್ನು ಸ್ಥಿರಗೊಳಿಸಲು ಮತ್ತು ಉತ್ತಮ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಂಡಿದೆ. ಮೌಲ್ಯವರ್ಧಿತ ಕೃಷಿ ಉತ್ಪನ್ನಗಳ ಉತ್ಪಾದನೆಗೆ ಕೇರಳ ಆಗ್ರೋ ಬ್ಯುಸಿನೆಸ್ ಕಂಪನಿ ಎಂಬ ಹೊಸ ಕಂಪನಿಯನ್ನು ಕಲ್ಪಿಸಲಾಗಿದೆ ಮತ್ತು ಕಂಪನಿಯ ಬಂಡವಾಳ ಹೂಡಿಕೆಗೆ ಆರಂಭಿಕ ಮೊತ್ತ 100 ಕೋಟಿಗಳನ್ನು ನಿಗದಿಪಡಿಸಲಾಗಿದೆ. ಬಹುಬೆಳೆ ಬೆಳೆಯುವ ಫಾರ್ಮ್‌ಗಳನ್ನು ಉತ್ತೇಜಿಸುವ ಯೋಜನೆಗೆ ರೂ.100 ಕೋಟಿಗಳನ್ನು ನಿಗದಿಪಡಿಸುವ ಮೂಲಕ 10 ಫುಡ್ ಪಾರ್ಕ್‌ಗಳನ್ನು ಸಹ ಬಜೆಟ್‌ನಲ್ಲಿ ಕಲ್ಪಿಸಲಾಗಿದೆ. ರಬ್ಬರ್ ರೈತರ ರಕ್ಷಣೆಗಾಗಿ ಇತ್ತೀಚಿನ ಬಜೆಟ್‌ನಲ್ಲಿ ರೂ.500 ಕೋಟಿಗಳನ್ನು ಮೀಸಲಿಡಲಾಗಿದೆ.

ಜನಸಾಮಾನ್ಯರಿಗೆ ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸುವಲ್ಲಿ ಕೇರಳವು ಮುಂಚೂಣಿಯಲ್ಲಿದೆ. ಇದಕ್ಕಾಗಿ ಕೇರಳದ 'ಕೃಷಿ ಕಾರ್ಮಿಕರ ಕಲ್ಯಾಣ ನಿಧಿ'ಯನ್ನು ಸ್ಥಾಪಿಸಿದೆ ಮತ್ತು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ತೊಡಗಿರುವ ರೈತರ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು 'ರೈತರ ಕಲ್ಯಾಣ ನಿಧಿ ಮಂಡಳಿ' ಅಥವಾ 'ಕೇರಳ ರೈತ ಕ್ಷೇಮಾಭಿವೃದ್ಧಿ ನಿಧಿ ಮಂಡಳಿ'ಯನ್ನು ರಚಿಸಿದೆ. ರೈತರಿಗೂ ಪಿಂಚಣಿ ಮತ್ತು ಆರ್ಥಿಕ ನೆರವು ನೀಡಲಾಗುತ್ತಿದೆ. ಈಗ 60 ವರ್ಷ ಮೇಲ್ಪಟ್ಟ ಪ್ರತಿ ರೈತರಿಗೂ ತಿಂಗಳಿಗೆ 1600 ರೂ ಪಿಂಚಣಿಯನ್ನು ನೀಡಲಾಗುತ್ತಿದೆ. ಇದನ್ನು ತಿಂಗಳಿಗೆ ಕನಿಷ್ಠ ರೂ.2,500 ಕ್ಕೆ ಹೆಚ್ಚಿಸಲು ಎಡರಂಗ ಸರ್ಕಾರ ಯೋಜಿಸಿದೆ.

ಆಹಾರ ಬೆಳೆಗೆ ಪ್ರೋತ್ಸಾಹ

ಕೇರಳದ ಒಟ್ಟು ಕೃಷಿ ಭೂಮಿ ಸುಮಾರು 25.69 ಲಕ್ಷ ಹೆಕ್ಟೇರ್ ಆಗಿದೆ. ಇದರಲ್ಲಿ ಆಹಾರ ಬೆಳೆ ಬೆಳೆಯುವ ಪ್ರಮಾಣ ಶೇ.11.03ರಷ್ಟಿದೆ. ಆಹಾರ ಬೆಳೆ ಬೆಳೆಯುವ ಪ್ರದೇಶವನ್ನು ಹೆಚ್ಚಿಸಲು ತೆಗೆದುಕೊಂಡ ವಿಭಿನ್ನ ಕ್ರಮಗಳು ಸಹಾಯ ಮಾಡುತ್ತಿದೆ. ಕೇರಳಕ್ಕೆ ಪ್ರತಿ ದಿನ 87 ಲಕ್ಷ ಲೀಟರ್ ಹಾಲು ಅಗತ್ಯವಿದೆ. ಶೇಕಡ 95 ಕ್ಕಿಂತ ಹೆಚ್ಚು ಅಗತ್ಯವನ್ನು ಕೇರಳದಲ್ಲಿಯೇ ಉತ್ಪಾದಿಸಲಾಗುತ್ತದೆ. ಒಟ್ಟಾರೆ, ರಾಜ್ಯದಲ್ಲಿ ಉತ್ಪಾದನಾ ಸಹಕಾರಿ ಸಂಘವು ಸುಮಾರು 3,400 ಪ್ರಾಥಮಿಕ ಹಾಲು ಸಹಕಾರಿ ಸಂಘಗಳಲ್ಲಿ ಸುಮಾರು 10 ಲಕ್ಷ ಡೈರಿ ರೈತರನ್ನು ಹೊಂದಿದೆ. ಗುಣಮಟ್ಟದ ಆಧಾರದ ಮೇಲೆ ರೈತರು ಪ್ರತಿ ಲೀಟರ್ ಹಾಲಿಗೆ ರೂ.35 ರಿಂದ 42 ರೂಗಳನ್ನು ಪಡೆಯುತ್ತಿದ್ದಾರೆ. ಸಾಂದ್ರೀಕೃತ ಜಾನುವಾರು ಆಹಾರವನ್ನು ಒದಗಿಸುವಂತಹ ವಿವಿಧ ಪ್ರೋತ್ಸಾಹಕಗಳನ್ನು ಜಾರಿಗೊಳಿಸಲಾಗಿದೆ. ಜಾನುವಾರು ಆಹಾರ ಪೂರಕಗಳಾದ ಖನಿಜ ಮಿಶ್ರಣ, ವಿಟಮಿನ್ ಎ ಜೊತೆಗೆ ಹಸಿರು ಹುಲ್ಲು/ಮೇವನ್ನು 1345 ರೂ ಇದ್ದ 50 ಕೆಜಿ ಚೀಲವನ್ನು ಸಬ್ಸಿಡಿಯಲ್ಲಿ 400 ರೂಗೆ ಕೊಡಲಾಗುತ್ತಿದೆ. ಜಾನುವಾರುಗಳಿಗೆ ಲಸಿಕೆ ಮತ್ತು ವಿಮೆಯನ್ನು ಖಾತರಿಪಡಿಸುವಲ್ಲಿ ಸರ್ಕಾರವು ಮಧ್ಯಪ್ರವೇಶಿಸುತ್ತಿದೆ.

1995 ರಿಂದ ಚಾಲ್ತಿಯಲ್ಲಿರುವ 25 ಪ್ರಮುಖ ಬೆಳೆಗಳನ್ನು ಒಳಗೊಂಡಿರುವ ಬೆಳೆ ವಿಮಾ ಯೋಜನೆಯನ್ನು 2016–17 ರಲ್ಲಿ ಬೆಳೆ ನಷ್ಟದ ಪರಿಹಾರವನ್ನು ಹೆಚ್ಚಿಸುವ ಮೂಲಕ ಪುನರ್ರಚಿಸಲಾಗಿದೆ. ನೋಂದಣಿ ಶುಲ್ಕ ಮತ್ತು ಪ್ರೀಮಿಯಂ ಮತ್ತು ಸರ್ಕಾರದ ಕೊಡುಗೆಯ ಮೂಲಕ ಭಾಗವಹಿಸುವ ರೈತರ ಕೊಡುಗೆಗಳೊಂದಿಗೆ ಬೆಳೆ ವಿಮಾ ನಿಧಿಯನ್ನು ನಿರ್ವಹಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ಬೆಳೆಗಳ ಜೊತೆಗೆ, ಸಣ್ಣ ಹಣ್ಣುಗಳ ಜೇನುಸಾಕಣೆ ಮತ್ತು ಪುಷ್ಪ ಕೃಷಿಯನ್ನು ಸಹ ಯೋಜನೆಯ ಅಡಿಯಲ್ಲಿ ಸೇರಿಸಲಾಗುವುದು. 2021–22ರ ಅವಧಿಯಲ್ಲಿ ಈ ಯೋಜನೆಗೆ 20 ಕೋಟಿ ರೂಗಳನ್ನು ಮೀಸಲಿಡಲಾಗಿದೆ. ಕೇರಳ ಸರ್ಕಾರವು ಕೇರಳದಲ್ಲಿ ನಗರ ಕೃಷಿಯನ್ನು ವ್ಯಾಪಕವಾಗಿ ಉತ್ತೇಜಿಸಲು ಯೋಜಿಸುತ್ತಿದೆ. "ಹರಿತ ನಗರಿ" [ಹಸಿರು ನಗರ] ಯೋಜನೆಯನ್ನು ನಗರಗಳಲ್ಲಿ ಜಾರಿಗೊಳಿಸಲಾಗಿದೆ.

ಕೇರಳದಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳು 2020 ರಲ್ಲಿ 8.38 ರಿಂದ 2021 ರಲ್ಲಿ 9.44 ಕ್ಕೆ ಬೆಳವಣಿಗೆಯನ್ನು ದಾಖಲಿಸಿದೆ. ಎಲ್‌ಡಿಎಫ್ ಸರ್ಕಾರವು ಕೃಷಿ ವಲಯದ ವೆಚ್ಚವನ್ನು ಹೆಚ್ಚಿಸಿದೆ. ಬಿಜೆಪಿ ಸರ್ಕಾರವು ಕೃಷಿ ಹೂಡಿಕೆಯಿಂದ ಹಿಂದೆ ಸರಿಯುತ್ತಿರುವಾಗ, ಕೇರಳವು ರೈತರು ಮತ್ತು ಕೃಷಿ ಕಾರ್ಮಿಕರೊಂದಿಗೆ ದೃಢವಾಗಿದೆ ಎಂದು ಘೋಷಿಸುವ ವಿಭಿನ್ನ ಮಾರ್ಗವನ್ನು ಆರಿಸಿಕೊಂಡಿದೆ. ಬಿಜೆಪಿ ಸರಕಾರ ತಂದಿರುವ 3 ರೈತ ವಿರೋಧಿ ಕಾಯ್ದೆಗಳ ವಿರುದ್ಧ ರಾಜ್ಯ ವಿಧಾನ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದು, ಸಾರ್ವಜನಿಕ ವಲಯದಲ್ಲಿ ಹಾಗೂ ಸಹಕಾರಿ ಸಂಸ್ಥೆಗಳ ಮೂಲಕ ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆಯನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಈ ನೀತಿಗಳು ರಾಜ್ಯದಲ್ಲಿ ಕೃಷಿ ಸಂಕಷ್ಟ ಮತ್ತು ಆತ್ಮಹತ್ಯೆಗಳ ಕರಾಳ ಗತಕಾಲದಿಂದ ಪರಿವರ್ತನೆಗೆ ಕಾರಣವಾಯಿತು ಮತ್ತು ಎಡ ಪರ್ಯಾಯವು ಕೇರಳದ ರೈತರು ಮತ್ತು ಕೃಷಿಯಲ್ಲಿ ಭರವಸೆ ಮೂಡಿಸಿದೆ. ಹೊಸ ಆತ್ಮವಿಶ್ವಾಸವನ್ನು ಸೃಷ್ಟಿಸಲಾಗಿದೆ ಮತ್ತು ಇತರ ರಾಜ್ಯಗಳು ಇದರಿಂದ ಪಾಠಗಳನ್ನು ಕಲಿಯಬಹುದು.

ಕೊಲಂಬಿಯ: ಎಡ ಅಭ್ಯರ್ಥಿ ಪೆತ್ರೊ ಗೆ ಮೊದಲ ಸುತ್ತಿನ ಜಯ

ಲ್ಯಾಟಿನ್ ಅಮೆರಿಕದ ಕೊಲಂಬಿಯದಲ್ಲಿ ಮೇ 29ರಂದು ಅಧ್ಯಕ್ಷೀಯ ಚುನಾವಣೆಗಳು ನಡೆದಿದ್ದು ಎಡ ಪಂಥೀಯ ಒಕ್ಕೂಟ 'ಹಿಸ್ಟಾರಿಕ್ ಪ್ಯಾಕ್ಟ್' (ಚಾರಿತ್ರಿಕ ಒಪ್ಪಂದ) ನ ಅಭ್ಯರ್ಥಿ ಗುಸ್ತಾವೊ ಪೆತ್ರೊ ಮೊದಲ ಸುತ್ತಿನಲ್ಲಿ ಶೇ.40.3 (80 ಲಕ್ಷ) ಮತ ಗಳಿಸುವ ಮೂಲಕ ಮೊದಲ ಸ್ಥಾನದಲ್ಲಿದ್ದಾರೆ. ಮೊದಲ ಸುತ್ತಿನ ಜಯ ಗಳಿಸಿದ್ದಾರೆ. ರೊಡೊಲ್ಫೊ ಹೆರ್ನಾಂಡೀಸ್ ಶೇ.28.1 (ಸುಮಾರು 60 ಲಕ್ಷ) ಮತ ಗಳಿಸಿ ಎರಡನೆಯ ಸ್ಥಾನದಲ್ಲಿದ್ದಾರೆ. ಎರಡನೆಯ ಸ್ಥಾನದಲ್ಲಿರುತ್ತಾರೆ ಎಂದು ನಿರೀಕ್ಷಿಸಲಾಗಿದ್ದ ಫೆಡೆರಿಕೊ ಗುಟಿಯರೇಸ್ ಶೇ.23.9 (ಸುಮಾರು 50 ಲಕ್ಷ) ಮತ ಗಳಿಸಿ ಮೂರನೆಯ ಸ್ಥಾನದಲ್ಲಿದ್ದಾರೆ. ಕೊಲಂಬಿಯದ ಚುನಾವಣಾ ನಿಯಮಗಳ ಪ್ರಕಾರ ಯಾರೂ ಶೇ.50 ಮತ ಗಳಿಸದಿದ್ದರೆ ಎರಡನೆಯ ಸುತ್ತಿನ ಮತದಾನ ನಡೆಯುತ್ತದೆ. ಮೊದಲ ಎರಡು ಸ್ಥಾನದಲ್ಲಿದ್ದವರು ಎರಡನೆಯ ಸುತ್ತಿಗೆ ಅಭ್ಯರ್ಥಿಗಳಾಗುತ್ತಾರೆ. ಹಾಗಾಗಿ ಪೆತ್ರೊ ಮತ್ತು ಹೆರ್ನಾಂಡೀಸ್ ಎರಡನೆಯ ಸುತ್ತಿಗೆ ಹೋಗಿದ್ದಾರೆ. ಜೂನ್ 19ರಂದು ಎರಡನೆಯ ಸುತ್ತಿನ ಮತದಾನ ನಡೆಯಲಿದೆ.

ಇತರ ಲ್ಯಾಟಿನ್ ಅಮೆರಿಕದ ದೇಶಗಳಂತಲ್ಲದೆ, ಕೊಲಂಬಿಯ ಅದರ 200ಕ್ಕೂ ಹೆಚ್ಚು ವರ್ಷಗಳ ಸ್ವತಂತ್ರ ಇತಿಹಾಸದಲ್ಲಿ ಎಂದೂ ಪ್ರಗತಿಪರ ಎಡಪಂಥೀಯ ಸರಕಾರಗಳನ್ನು ಕಂಡಿದ್ದಿಲ್ಲ. ಯಾವತ್ತೂ ಯು.ಎಸ್ ನ ಕೈಗೊಂಬೆಗಳಾದ ಬಲಪಂಥೀಯ ಅಥವಾ ಮಿಲಿಟರಿ ಸರ್ವಾಧಿಕಾರಿಗಳೇ ಇಲ್ಲಿ ಆಡಳಿತ ನಡೆಸಿದ್ದಾರೆ. ಭ್ರಷ್ಟಾಚಾರ ಮತ್ತು ಪಾರಾ ಮಿಲಿಟರಿ ದಬ್ಬಾಳಿಕೆ ತಾಂಡವವಾಡುತ್ತಿತ್ತು. ಅದರ ವಿರುದ್ಧ ಎಡ ಗೆರಿಲ್ಲಾ ಯುದ್ಧ ಅನಿವಾರ್ಯವಾಗಿತ್ತು. ಆದರೆ ದೇಶ ಯು.ಎಸ್ ಬೆಂಬಲಿತ ಸರಕಾರಿ ಸೈನ್ಯ, ಪಾರಾ ಮಿಲಿಟರಿ ಪಡೆ ಮತ್ತು ಎಡ ಗೆರಿಲ್ಲಾ ಗಳ ನಡುವಿನ ರಣರಂಗವಾಗಿತ್ತು. ಕೆಲವು ವರ್ಷಗಳ ಹಿಂದೆ ಶಾಂತಿ ಒಪ್ಪಂದವಾಗಿದ್ದರೂ ಸರಕಾರ ತಾನು ಒಪ್ಪಿದ ಷರತ್ತುಗಳನ್ನು ಪೂರೈಸದೆ ಶಾಂತಿಸ್ಥಾಪನೆ ಪೂರ್ಣ ಸಫಲವಾಗಿರಲಿಲ್ಲ. ಹಾಗಾಗಿ ಆ ದೇಶದ ಇತಿಹಾಸದಲ್ಲೇ ಮೊದಲ ಎಡಪಂಥೀಯ ಸರಕಾರವನ್ನು ಎದುರು ನೋಡುತ್ತಿದೆ.

ಮೊದಲ ಸುತ್ತಿನ ಎರಡೂ ಬಲಪಂಥೀಯ ಅಭ್ಯರ್ಥಿಗಳು ಉಗ್ರ ಬಲಪಂಥೀಯ ಮಾಜಿ ಅಧ್ಯಕ್ಷ (2002–10) ಅಲ್ವರೊ ಉರಿಬೆ ಯ ಮತ್ತು ಆತನ ಶಿಷ್ಯ ಪ್ರಸ್ತುತ ಅಧ್ಯಕ್ಷ ಇವಾನ್ ಡುಕ್ ಸಹಚರರು. ಹೆರ್ನಾಂಡೀಸ್ ರೀಯಲ್ ಎಸ್ಟೇಟ್ ಕುಳ ಮತ್ತು ಮೆಗಾ ಮನೆಮಾಲಿಕ. ಮೂರನೆಯ ಸ್ಥಾನ ಪಡೆದ 'ಟೀಮ್ ಫಾರ್ ಕೊಲಂಬಿಯ'ದ ಗುಟಿಯರೇಸ್ ಮೊದಲು ಯು.ಎಸ್ ಮತ್ತು ಉರಿಬೆ ಯ ಮುಖ್ಯ ಬಲಪಂಥೀಯ ಅಭ್ಯರ್ಥಿಯಾಗಿದ್ದು ಪ್ರಚಾರ ಜೋರಾದಂತೆ ಅವರ ಸಾಧ್ಯತೆ ತಣ್ಣಗಾದ್ದರಿಂದ ಹೆರ್ನಾಂಡೀಸ್ ನ್ನು ಮುಂದಕ್ಕೆ ತಂದರು ಎನ್ನಲಾಗಿದೆ. ಈಗ ಬಲಪಂಥೀಯ ಮತಗಳೆಲ್ಲ ಹೆರ್ನಾಂಡೀಸ್ ಸುತ್ತ ಕ್ರೋಢೀಕೃತವಾಗಲಿದೆ.

ಎಡ ಅಭ್ಯರ್ಥಿ ಪೆತ್ರೊ ಕ್ರಾಂತಿಕಾರಿ ಎಪ್ರಿಲ್ 19 ಚಳುವಳಿಯ ನಾಯಕರಾಗಿದ್ದು, ರಾಜಧಾನಿ ಬೊಗೊಟಾದ ಚುನಾಯಿತ ಮೇಯರ್ ಮತ್ತು ಎರಡು ಬಾರಿ ಎಡ ಅಧ್ಯಕ್ಷೀಯ ಅಭ್ಯರ್ಥಿಯಾಗಿದ್ದರು. 'ಶಾಂತಿ ಮತ್ತು ಪ್ರಜಾಸತ್ತೆ ಸ್ಥಾಪನೆ' ತನ್ನ ಆದ್ಯತೆ ಎಂದು ಪೆತ್ರೊ ಹೇಳಿದ್ದಾರೆ. ಎಡ ಅಭ್ಯರ್ಥಿಯ ಜಯದ ಸಾಧ್ಯತೆ ಹೆಚ್ಚಿದ್ದು ಅದನ್ನು ವಿಫಲಗೊಳಿಸಲು ಯು.ಎಸ್ ಮತ್ತು ಕೊಲಂಬಿಯ ಸರಕಾರಗಳು ಮತ್ತು ಆಳುವ ವರ್ಗಗಳು ಶತಪ್ರಯತ್ನ ಮಾಡುತ್ತಿವೆ. ಎಡ ಅಭ್ಯರ್ಥಿ ಗೆ ಕೊಲೆ ಬೆದರಿಕೆ ಹಾಕಲಾಗಿದೆ. ಇದು ಬರಿಯ ಒಣ ಬೆದರಿಕೆಯಲ್ಲ. ಹಿಂದೆ ವಿರೋಧ ಪಕ್ಷಗಳ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಕಂಡಾಗೆಲ್ಲ ನಾಲ್ಕು ಅಧ್ಯಕ್ಷೀಯ ಅಭ್ಯರ್ಥಿಗಳ ಹತ್ಯೆಮಾಡಲಾಗಿದೆ. ಹಿಂಸಾಚಾರ ಸೃಷ್ಟಿಸಿ ಕೆಲವು ಕಡೆ ಪ್ರಚಾರಕ್ಕೆ ಹೋಗದಂತೆ ಮಾಡಲಾಗಿದೆ.



ಎಡ ಅಧ್ಯಕ್ಷೀಯ ಅಭ್ಯರ್ಥಿ ಪೆತ್ರೊ ಮತ್ತು ಉಪಾಧ್ಯಕ್ಷೀಯ ಅಭ್ಯರ್ಥಿ ಫ್ರಾನ್ಸಿಯ ಮಾರ್ಕ್ವೇಝ್

'ಅಂತಾರಾಷ್ಟ್ರೀಯ' ಮಧ್ಯಮ ವರ್ಗದ ಉದಯದ ಪ್ರವೃತ್ತಿ.........

ಪುಟ 13 ರಿಂದ

ನರಳುತ್ತಿರುವವರು ಅಪಾರ ಸಂಖ್ಯೆಯಲ್ಲಿದ್ದಾರೆ. ಆದಾಗ್ಯೂ, ಮಧ್ಯಮ ವರ್ಗದ ಗಣನೀಯ ಸಂಖ್ಯೆಯ ಜನರು, ಅದರಲ್ಲೂ ವಿಶೇಷವಾಗಿ ಅದರ ಮೇಲಣ ಸ್ತರದವರು, ನವ–ಉದಾರವಾದಿ ಆಳ್ವಿಕೆಯಲ್ಲಿ ಗಮನಾರ್ಹ ಪ್ರಯೋಜನ ಪಡೆಯುತ್ತಾರೆ. ವಿಶಾಲ ಮಧ್ಯಮ ವರ್ಗದ ಒಂದು ಭಾಗವಾಗಿರುವ ಈ ಮೇಲಣ ಸ್ತರದ ಮಂದಿಯನ್ನು ನಿರೂಪಿಸಲು "ಮಧ್ಯಮ ವರ್ಗ" ಎಂಬ ಪದವನ್ನು ನಾನು ಅನುಕೂಲಕ್ಕಾಗಿ ಬಳಸಿದ್ದೇನೆ. ಎರಡನೆಯದಾಗಿ, ಈ ಮೇಲಣ ಸ್ತರದ ಮಂದಿಯ ಗುಂಪಿನಲ್ಲೂ ಸಹ, ಈ ಹಿಂದೆ ಗಮನಿಸಿದ ಸೈದ್ಧಾಂತಿಕ ನಿಲುವಿನ ಏಕರೂಪತೆಯತ್ತ ವಾಲುವ ಪ್ರವೃತ್ತಿಯು ಕೇವಲ ಒಂದು ಪ್ರವೃತ್ತಿಯೇ. ಈ ಪ್ರವೃತ್ತಿಯು ಈ ಗುಂಪಿನ ಪ್ರತಿಯೊಬ್ಬರ ಮೇಲೂ ಪರಿಣಾಮ ಬೀರುವುದಿಲ್ಲ. ಈ ಗುಂಪಿನಲ್ಲೂ ಪ್ರಗತಿಶೀಲ ಸಾಮಾಜಿಕ ಬದಲಾವಣೆಯ ಕಲ್ಪನೆಗೆ ಬದ್ಧರಾಗಿ ಉಳಿಯುವ ಜನರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ನಿಜ, ವರ್ಷಗಳ ಹಿಂದಿದ್ದ ಪರಿಸ್ಥಿತಿಗೆ ಹೋಲಿಸಿದರೆ ಅವರ ಸಂಖ್ಯೆ ಕಡಿಮೆಯಾಗಿದೆ. ಮೂರನೆಯದಾಗಿ, ಉಳಿದವರಲ್ಲಿಯೂ ಸಹ ಸೈದ್ಧಾಂತಿಕ ಏಕರೂಪತೆಯನ್ನು ಬೆಳೆಸುವ ಉದ್ದೇಶದ ಬೋಧನೆಯ ಪ್ರವೃತ್ತಿಯು ಒಂದು ಶಾಶ್ವತ ವಿದ್ಯಮಾನವೇನಲ್ಲ. ನವ ಉದಾರವಾದದ ಬಿಕ್ಕಟ್ಟು ಆಳಗೊಳ್ಳುತ್ತಿರುವುದರಿಂದ, ಈ ವಿಭಾಗವೂ ಸಹ ತನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವ ಸಾಧ್ಯತೆಯಿದೆ: ಮಾರ್ಕ್ಸ್‌ನ ಭಾಷೆಯನ್ನು ಬಳಸುವುದಾದರೆ, ಆಳಗೊಳ್ಳುತ್ತಿರುವ ಬಿಕ್ಕಟ್ಟು ಅವರ ತಲೆಯಲ್ಲಿ "ದ್ವಂದ್ವಾತ್ಮಕ ನಗಾರಿ" ಬಾರಿಸುತ್ತದೆ. ಆದರೆ, ನವ ಉದಾರೀಕರಣದ ಬಗ್ಗೆ ಮೇಲಣ ಸ್ತರದ ಗುಂಪು ಹೊಂದಿರುವ ಉತ್ಸಾಹವು ಸದ್ಯಕ್ಕಂತೂ ಕ್ಷೀಣಿಸಿದಂತೆ ಕಾಣುತ್ತಿಲ್ಲ.

ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ರೂಪದಲ್ಲಿ..

"ಮಧ್ಯಮ ವರ್ಗ" ಮತ್ತು ದುಡಿಯುವ ಜನರ ನಡುವಿನ ಬಿರುಕು ನಿರ್ದಿಷ್ಟವಾಗಿ ಪ್ರಕಟಗೊಂಡಿರುವ ಒಂದು ಕ್ಷೇತ್ರವೆಂದರೆ, ತೃತೀಯ ಜಗತ್ತಿನ ದೇಶಗಳ ಮಾಧ್ಯಮಗಳ ಮನೋಭಾವ. ಖಚಿತವಾಗಿ ಹೇಳಬೇಕೆಂದರೆ, ದೊಡ್ಡ ದೊಡ್ಡ ಬಂಡವಾಳಗಾರರ ಒಡೆತನದ ಮತ್ತು ಅವರಿಂದ ನಿಯಂತ್ರಿಸಲ್ಪಡುವ ಮಾಧ್ಯಮಗಳು ತಮ್ಮ ಮಾಲೀಕರ ಸೈದ್ಧಾಂತಿಕ ನಿಲುವನ್ನು ಅಂದರೆ, ನವ–ಉದಾರವಾದವನ್ನು ಗಣನೀಯವಾಗಿ ಪ್ರತಿಬಿಂಬಿಸುತ್ತವೆ. ಈ

ಆಸ್ಟ್ರೇಲಿಯಾ ದ 'ಟ್ರಂಪ್'ಗೆ ಪರಾಭವ 'ಎರಡು ಪಕ್ಷ ವ್ಯವಸ್ಥೆ'ಯ ಕೊನೆ ?


ಲೇಬರ್ ನಾಯಕ ಅಲ್ಬನೀಸ್ ಮತ್ತು ಸೋತ ಮಾರಿಸನ್

ಜಗದ ಸುತ್ತ

ವಸಂತರಾಜ ಎನ್.ಕೆ.

ಆಸ್ಟ್ರೇಲಿಯದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ 'ಆಸ್ಟ್ರೇಲಿಯದ ಟ್ರಂಪ್' ಎಂದೇ ಕುಖ್ಯಾತರಾಗಿದ್ದ ಮತ್ತು ಮೂರು ಬಾರಿ ಪ್ರಧಾನಿಯಾಗಿದ್ದ ಸ್ಕಾಟ್ ಮಾರಿಸನ್ ಪರಾಭವ ಹೊಂದಿದ್ದಾರೆ. ಅವರ ನಾಯಕತ್ವದ ಲಿಬರಲ್/ನ್ಯಾಶನಲ್ ಕೂಟ, 151 ಸೀಟುಗಳಲ್ಲಿ ಕೇವಲ 58 ಸೀಟು ಗಳಿಸಿದೆ. ಕಳೆದ ಬಾರಿಗಿಂತ 19 ಸೀಟು ಕಳೆದುಕೊಂಡಿದೆ. ಲೇಬರ್ 77 ಸೀಟುಗಳನ್ನು ಗಳಿಸಿ ನಿಚ್ಚಳ ಬಹುಮತ ಸಾಧಿಸಿದೆ. ಗ್ರೀನ್ ಪಕ್ಷ, ಪಕ್ಷೇತರರರು ಮತ್ತು ಇತರ ಸಣ್ಣ ಪಕ್ಷಗಳು ಹಿಂದೆಂದಿಗಿಂತಲೂ ಅತ್ಯಧಿಕ 14 ಸೀಟು ಗೆಲ್ಲುವ ಮತ್ತು 10 ಸೀಟು ಹೆಚ್ಚಳ ಸಾಧಿಸುವ ಮೂಲಕ ಆಸ್ಟ್ರೇಲಿಯದಲ್ಲಿ 'ಎರಡು ಪಕ್ಷ/ಕೂಟ ವ್ಯವಸ್ಥೆ'ಯ ಕೊನೆಯಾಗಿದೆ, 'ಮೂರನೆಯ ಶಕ್ತಿ'ಯ ಉದಯವಾಗಿದೆ ಎಂದು ಹೇಳಲಾಗುತ್ತಿದೆ.

ಹೀಗಾಗಿ ಇದು ಲೇಬರ್ ವಿಜಯಕ್ಕಿಂತ ಹೆಚ್ಚಾಗಿ ಲಿಬರಲ್/ನ್ಯಾಶನಲ್ ಕೂಟದ ಮತ್ತು ಮಾರಿಸನ್ ಅವರ ಸೋಲು ಎಂದೇ ಹೇಳಬೇಕಾಗಿದೆ. ಲೇಬರ್ ಪ್ರಾಶಸ್ತ್ಯದ ಮತಗಳ ಆಧಾರದಲ್ಲಿ ಬಹುಮತ ಗಳಿಸಿದರೂ, ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ಶೇ.32.7 ಮತ ಮಾತ್ರ ಗಳಿಸಿದೆ, ಕಳೆದ ಬಾರಿಗಿಂತ ಶೇ.0.7 ಮತ ಕಳೆದುಕೊಂಡಿದೆ. ಆಳುವ ಕೂಟ ಶೇ.36 ಮತ ಗಳಿಸಿದರೂ, ಶೇ.5.5 ಮತ ಕಳೆದುಕೊಂಡಿದೆ. ಅಂದರೆ ಮೂರನೆಯ ಶಕ್ತಿಗಳು ಶೇ.31 ರಷ್ಟು ಮತವನ್ನು ಗಳಿಸಿವೆ. ಅದರ ಬಹುಪಾಲು ಗ್ರೀನ್ ಪಕ್ಷ (ಶೇ.12) ಮತ್ತು ಪಕ್ಷೇತರರಿಗೆ (ಶೇ.5.3) ಹೋಗಿದೆ.

ಆಸ್ಟ್ರೇಲಿಯದ ಮತ ವ್ಯವಸ್ಥೆಯಲ್ಲಿ ಮತದಾರರು ಮತಪತ್ರದಲ್ಲಿರುವ ಎಲ್ಲ ಅಭ್ಯರ್ಥಿಗಳಿಗೂ ಅವರ ಆಯ್ಕೆಯಂತೆ ಪ್ರಾಶಸ್ತ್ಯ (1, 2...1 ಮೊದಲ ಪ್ರಾಶಸ್ತ್ಯ ಇತ್ಯಾದಿ) ಕೊಟ್ಟು ಮತ ಹಾಕಬೇಕು. ಯಾವುದೇ ಅಭ್ಯರ್ಥಿ ಮೊದಲ ಪ್ರಾಶಸ್ತ್ಯದಲ್ಲಿ ಶೇ.50 ಮತ ಗಳಿಸದಿದ್ದರೆ ಉಳಿದ ಪ್ರಾಶಸ್ತ್ಯಗಳನ್ನು ಪರಿಶೀಲಿಸಲಾಗುವುದು.

ಪಾರ್ಲಿಮೆಂಟಿನ ಮೇಲ್ ಸದನ ಸೆನೆಟ್ ಗೆ ಚುನಾವಣೆ ನಡೆದ 40 ಸೀಟುಗಳಲ್ಲಿ ಲೇಬರ್ 15, ಲಿಬರಲ್ ಕೂಟ 14 ಸೀಟುಗಳನ್ನು ಗೆದ್ದಿದೆ. ಗ್ರೀನ್ 6 ಸೀಟುಗಳನ್ನು ಗೆದ್ದಿದೆ. ಲಿಬರಲ್ ಕೂಟ 3 ಸೀಟುಗಳನ್ನು ಕಳೆದುಕೊಂಡಿದ್ದು, ಗ್ರೀನ್ 3 ಸೀಟುಗಳನ್ನು ಹೆಚ್ಚುವರಿಯಾಗಿ ಗೆದ್ದಿದೆ. ಈಗಿನ ಸೆನೆಟ್ ನ ಒಟ್ಟು 76 ಸೀಟುಗಳಲ್ಲಿ ಲೇಬರ್ 26, ಲಿಬರಲ್ 31 ಮತ್ತು ಗ್ರೀನ್ 12 ಸೀಟು ಹೊಂದಿವೆ. ಇಲ್ಲೂ 'ಮೂರನೆಯ ಶಕ್ತಿ' 19 ಸೀಟುಗಳನ್ನು ಹೊಂದಿದೆ.

ಮಾರಿಸನ್ ನೀತಿ, ಶೈಲಿಗಳ ಸೋಲು ಮಾತ್ರವಲ್ಲ

ಪ್ರಧಾನಿ ಮಾರಿಸನ್ ಮೂರು ಬಾರಿ ಸತತ ಪ್ರಧಾನಿಯಾಗಿದ್ದು ವಿವಾದಿತರಾಗಿದ್ದು ಸಾಕಷ್ಟು ಅಪಖ್ಯಾತಿ ಗಳಿಸಿದ್ದರು. ಮಾರಿಸನ್ ಮೊದಲಿನಿಂದಲೂ 'ಟ್ರಂಪ'ರಂತೆ 'ಹವಾಮಾನ ಬದಲಾವಣೆ'ಯನ್ನು ಮತ್ತು ಅದರ ನಿವಾರಣೆಗೆ ಗಂಭೀರ ಕ್ರಮಗಳ ಅಗತ್ಯವಿದೆ ಎಂಬುದನ್ನು ನಿರಾಕರಿಸುವ ಧೋರಣೆಯನ್ನು ಹೊಂದಿದ್ದವರು. ದೇಶಧಲ್ಲಿ ಇತ್ತೀಚೆಗೆ ಭಾರೀ ಹಾನಿ–ಸಂಕಷ್ಟ ತಂದಿದ್ದ ಕಾಡ್ಗಿಚ್ಚು ಮತ್ತು ನೆರೆ ಗಳು 'ಹವಾಮಾನ ಬದಲಾವಣೆ'ಯ ಪರಿಣಾಮವೆಂಬುದು ಸ್ಪಷ್ಟ. ಆದರೆ ಮಾರಿಸನ್ ಅದಕ್ಕೆ 'ಕ್ಯಾರೇ' ಎನ್ನಲಿಲ್ಲ. ಅಭಿವೃದ್ಧ ದೇಶಗಳಲ್ಲಿ ಒಂದಾದ ಆಸ್ಟ್ರೇಲಿಯ ಕಲ್ಲಿದ್ದಲು ಆಧಾರಿತ ಸ್ಥಾವರಗಳನ್ನು ಕಡಿಮೆ ಮಾಡುತ್ತಾ 'ಹಸಿರು ಪರಿಸರ–ಸ್ನೇಹಿ ಇಂಧನ'ಗಳತ್ತ ಹೋಗಬೇಕೆಂಬ ಸಾಮಾನ್ಯ ಬೇಡಿಕೆಯನ್ನು ಧಿಕ್ಕರಿಸಿದ್ದರು. ಅವರು ಕಲ್ಲಿದ್ದಲನ್ನು ಪಾರ್ಲಿಮೆಂಟಿನಲ್ಲಿ ಪ್ರದರ್ಶಿಸುವ ಮೂಲಕ ತಮ್ಮ ಧಿಕ್ಕಾರ ಪ್ರದರ್ಶಿಸಿದ್ದರು ಕೂಡಾ. ಭಾರೀ ಹಾನಿ–ಸಂಕಷ್ಟ ತಂದಿದ್ದ ಕಾಡ್ಗಿಚ್ಚು ಮತ್ತು ನೆರೆ ಪ್ರಕೋಪಗಳು ತೀವ್ರವಾಗಿದ್ದಾಗ ಹವಾಯಿ ದ್ವೀಪದಲ್ಲಿ 'ರಜಾ ಮಜಾ'ದಲ್ಲಿದ್ದು ಮರಳಲು ನಿರಾಕರಿಸುವ ಮೂಲಕ ತೀವ್ರ ಆಕ್ರೋಶಕ್ಕೆ ಕಾರಣರಾಗಿದ್ದರು. ಕೊರೊನಾ ಅವಧಿಯಲ್ಲಿ ಅಭಿವೃದ್ಧ ದೇಶಗಳಲ್ಲಿಯೇ ಅತ್ಯಂತ ಕಟುವಾದ ಅತಾರ್ಕಿಕ ಲಾಕ್ ಡೌನ್ ಹೇರುವ ಮೂಲಕವೂ ಜನತೆಯ ತೀವ್ರ ಆಕ್ರೋಶಕ್ಕೆ ತುತ್ತಾಗಿದ್ದರು. ಇಂತಹ ವರ್ತನೆಗಳ ವಿರುದ್ಧ ಟೀಕೆಗೆ 'ನಾನು ಬುಲ್ ಡೋಜರ್' ಥರ 'ಯಾವುದನ್ನು ಲೆಕ್ಕಿಸುವುದಿಲ್ಲ' ಎಂದು ಹೇಳಿಕೆ ಕೊಟ್ಟು 'ಆಸ್ಟ್ರೇಲಿಯದ ಟ್ರಂಪ್' ಎಂಬ ಬಿರುದು ಗಳಿಸಿದ್ದರು. ಫ್ರಾನ್ಸ್ ನ ಸಬ್ ಮೇರಿನ್ ಕಾಂಟ್ರಾಕ್ಟ್ ರದ್ದು ಮಾಡಿ, ಫ್ರೆಂಚ್ ಸರಕಾರದ ಜತೆಗೆ ಬಹಿರಂಗ ಕಿತ್ತಾಟ, ಚೀನಾದ ಜತೆ ಘನಿಷ್ಠವಾದ ಸಂಬಂಧ ಬಿಗಡಾಯಿಸಿಕೊಂಡು ಅದರ ವಿರುದ್ಧ ತರಾತುರಿಯಲ್ಲಿ 'ಔಕಸ್' ಮಿಲಿಟರಿ ಕೂಟಕ್ಕೆ ಸೇರಿದ ಅವರ ವಿದೇಶ ನೀತಿ ಸಹ ವ್ಯಾಪಕವಾಗಿ ಟೀಕೆಗೆ ಒಳಗಾಗಿತ್ತು.

'ಹವಾಮಾನ ಬದಲಾವಣೆ'ಯನ್ನು ತಡೆಯುವತ್ತ ದೇಶ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರೀನ್ ಪಕ್ಷ ಮತ್ತು ಪರಿಸರ ಚಳುವಳಿ ವ್ಯಾಪಕ ಪ್ರಚಾರ–ಪ್ರಕ್ಷೋಭೆ ನಡೆಸಿತ್ತು. ಇದು ಪ್ರಮುಖ ಚುನಾವಣಾ ವಿಷಯವಾಗಿ ಮೂಡಿಬಂತು. ಅದು ಲಿಬರಲ್ ಕೂಟಕ್ಕೆ ಪೂರ್ಣವಾಗಿ ಮಾರಕವಾಗಿತ್ತು. ಲೇಬರ್ ಪಕ್ಷ ಮಾರಿಸ್ ಸರಕಾರದ ಹವಾಮಾನ ಮತ್ತಿತರ ಧೋರಣೆಗಳನ್ನು ವಿರೋಧಿಸಿದ್ದರೂ, ನವೀಕರಿಸುವ ಇಂಧನಗಳಲ್ಲಿ ಹೂಡಿಕೆ ಮಾಡಬೇಕು ಎಂದು ಪ್ರತಿಪಾದಿಸಿದ್ದರೂ, ಅದೂ ಸಾಕಷ್ಟು ಮತ ಮತ್ತು ಸೀಟುಗಳನ್ನು ಗ್ರೀನ್ ಮತ್ತು ಪಕ್ಷೆತರರಿಗೆ ಕಳೆದುಕೊಂಡಿತು. ಲಿಬರಲ್ ಕೂಟ 9 ಸೀಟುಗಳನ್ನು, ಲೇಬರ್ 2 ಸೀಟುಗಳನ್ನು ಗ್ರೀನ್ ಮತ್ತು ಪಕ್ಷೇತರರಿಗೆ ಕಳೆದುಕೊಂಡಿತು. ಲಿಬರಲ್ ಕೂಟ 12 ಸೀಟುಗಳನ್ನು ಲೇಬರ್ ಗೆ ಕಳೆದುಕೊಂಡಿತು. ಹೆಚ್ಚಿನ ಮಹಾನಗರಗಳ ಮುಖ್ಯ ಸೀಟುಗಳನ್ನು ಗ್ರೀನ್ ಮತ್ತು ಪಕ್ಷೇತರರು ಗೆದ್ದುಕೊಂಡಿದ್ದಾರೆ ಎನ್ನಲಾಗಿದೆ. ಗೆದ್ದ ಪಕ್ಷೇತರರಲ್ಲಿ ಹೆಚ್ಚಿನವರು ಪರಿಸರ ಚಳುವಳಿಯಿಂದ ಬಂದವರು ಎಂದು ಹೇಳಲಾಗಿದೆ.

ಚೀನಾ ಕಾರ್ಡ್ ವಿಫಲ

ಮಾರಿಸನ್ ತಮ್ಮ ಮತ್ತು ತಮ್ಮ ಕೂಟ ಸಾಕಷ್ಟು ಜನಪ್ರಿಯತೆ ಕಳೆದುಕೊಂಡಿದ್ದನ್ನು ಕಂಡು 'ಚೀನಾ ಕಾರ್ಡ್' ಬಳಸಲು ಪ್ರಯತ್ನಿಸಿದರು. ಲೇಬರ್ ಪಕ್ಷ ಅದರಲ್ಲೂ ಅದರ ನಾಯಕ ಆಂಟೊನಿ ಅಲ್ಬನೀಸ್ ಗೆ ಚೀನಾ ಹಣಕಾಸು ಮತ್ತಿತರ ಬೆಂಬಲ ನೀಡುತ್ತಿದೆ. ಅಲ್ಬನೀಸ್ ಚೀನಾ–ಪರ. ಅವರು ಆಯ್ಕೆಯಾದರೆ ಚೀನಾ ಸರಕಾರದ ಮೇಲೆ ನೇರ ಹತೋಟಿ ಹೊಂದಿರುತ್ತದೆ ಎಂದು ಆಪಾದಿಸಿದರು. ಚೀನಾ ಕಮ್ಯುನಿಸ್ಟ್ ಪಕ್ಷ ಲೇಬರ್ ಮತ್ತು ಅಲ್ಬನೀಸ್ ಗೆಲ್ಲಿಸಬೇಕೆಂದು ನಿರ್ಧರಿಸಿದೆ. ಷಿ ಪೆಂಗ್ ಆಸ್ಟ್ರೇಲಿಯದ ಚುನಾವಣೆಗಳಲ್ಲಿ ಮತ ಚಲಾಯಿಸುತ್ತಿರುವ 'ಫೋಟೋಶಾಪ್' ಪೋಸ್ಟರುಗಳ ಮೂಲಕ ತೀವ್ರ ಅಪಪ್ರಚಾರ ನಡೆಸಿತು. ಲೇಬರ್ ಸ್ವಲ್ಪ ಮತಗಳನ್ನು ಇದರಿಂದ ಕಳೆದುಕೊಂಡಿರುವ ಸಾಧ್ಯತೆಯಿದೆ. ಆದರೆ ಅದು ಅಂತಿಮವಾಗಿ ಲಿಬರಲ್ ಕೂಟಕ್ಕೆ ಪ್ರಯೋಜನವಾಗಲಿಲ್ಲ ಎಂಬುದು ಫಲಿತಾಂಶ ನೋಡಿದರೆ ಸ್ಪಷ್ಟ. ಮಾರಿಸನ್ ಸರಕಾರದ ವಿದೇಶಾಂಗ ನೀತಿ ವೈಫಲ್ಯಗಳು ಸಹ ದೊಡ್ಡ ಚುನಾವಣಾ ವಿಷಯವಾಗುವುದನ್ನು ತಪ್ಪಿಸಿದವೇನೋ.

ಲೇಬರ್ ಪಕ್ಷ ಈಗ ನಿಚ್ಚಳ ಬಹುಮತ ಪಡೆದಿದ್ದು ಅಧಿಕಾರ ವಹಿಸಿಕೊಂಡಿದೆ. ಚುನಾವಣಾ ಫಲಿತಾಂಶ ಪ್ರಕಟವಾಗುವಾಗಲೇ ಕ್ವಾಡ್ ಶೃಂಗಸಭೆ ದಿನ ನಿಗದಿಯಾಗಿದ್ದು, ಪ್ರಧಾನಿ ಅಲ್ಬನೀಸ್ ಶೃಂಗಸಭೆಗೆ ತೆರಳಬೇಕಾಯಿತು. ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆಯಿತ್ತಂತೆ ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ಗಂಭೀರ ಕ್ರಮಕೈಗೊಳ್ಳಲು, ನವೀಕರಿಸುವ ಇಂಧನಗಳಲ್ಲಿ ಹೂಡಿಕೆ ಮಾಡಲು ಸರಕಾರ ಬದ್ಧವಾಗಿದೆ ಎಂದು ಘೋಷಿಸಿದ್ದಾರೆ. ಆದರೆ ಗ್ರೀನ್ ಒತ್ತಾಯಿಸುವಂತೆ ಈಗಿರುವ ಕಲ್ಲಿದ್ದಲು ಸ್ಥಾವರಗಳನ್ನು ಅಥವಾ ಹೊಸ ಕಲ್ಲಿದ್ದಲು ಗಣಿಗಳನ್ನು ನಿಲ್ಲಿಸುವ ನೀತಿಯನ್ನು ಒಪ್ಪಿಕೊಂಡಿಲ್ಲ. ದೇಶದ ಆದಿವಾಸಿಗಳಿಗೆ ಹಕ್ಕನ್ನು ಮನ್ನಿಸುವ ಅವರ ಪುನರ್ವಸತಿಗೆ ಕರೆ ಕೊಡುವ 'ಉರುಲು ಘೋಷಣೆ'ಯ ಅಂಶಗಳನ್ನು ಜಾರಿ ಮಾಡುವುದಾಗಿಯೂ ಘೋಷಿಸಿದ್ದಾರೆ. ಹಿಂದಿನ ಸರಕಾರದ ನಿರ್ಧಾರಗಳು, ಅಮೆರಿಕದ ಸರಕಾರದ ಮತ್ತು ಜಾಗತಿಕ ಮಾಧ್ಯಮಗಳ ಚೀನಾ–ದ್ವೇಷದ ಪ್ರಚಾರಗಳ ಒತ್ತಡದಿಂದಾಗಿ ಚೀನಾದ ಕುರಿತು ಮತ್ತು ಸಾಮಾನ್ಯ ವಿದೇಶ ನೀತಿಗಳಲ್ಲಿ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯಾವಿಲ್ಲ. ಆದರೆ ಅಮೆರಿಕಕ್ಕೆ ಬೆಂಬಲ, ಚೀನಾ–ದ್ವೇಷ ಗಳ ತೀಕ್ಷ್ಣತೆಗಳು ಕಡಿಮೆಯಾಗಬಹುದು.

ಈ ಚುನಾವಣಾ ಫಲಿತಾಂಶಗಳಲ್ಲಿ ಕಂಡಂತೆ ಎರಡು ಪಕ್ಷ ವ್ಯವಸ್ಥೆ ಶಿಥಿಲವಾಗುತ್ತಿರುವುದು, ಗ್ರೀನ್ ಮತ್ತಿತರ ಹಲವು ಹೊಸ ರಾಜಕೀಯ ಶಕ್ತಿಗಳು ಮೂಡಿಬರುತ್ತಿರುವುದು ಯುರೋಪಿನ ಮತ್ತಿತರ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಒಟ್ಟು ರಾಜಕೀಯ ಬೆಳವಣಿಗೆಗಳಿಗೆ ಅನುಗುಣವಾಗಿಯೇ ಇದೆ. ಇದು ಎರಡನೆಯ ಮಹಾಯುದ್ಧದ ನಂತರ ನವ–ಉದಾರವಾದದ ಆರಂಭದ ವರೆಗಿನ ಹಲವು ದಶಕಗಳಲ್ಲಿ ಸಮಾಜವಾದಿ ಬಣದ ಒತ್ತಡದಿಂದ 'ಕಲ್ಯಾಣ ರಾಜ್ಯ'ದ ನೀತಿಗಳು ಜಾರಿಯಲ್ಲಿದ್ದ ಅವಧಿಯಲ್ಲಿ ಹೆಚ್ಚಿನ ನೀತಿಗಳಲ್ಲಿ ವ್ಯತ್ಯಾಸಗಳೂ ಬದಲಾವಣೆಗಳೂ ಇಲ್ಲದ ಎರಡು–ಪಕ್ಷ ವ್ಯವಸ್ಥೆ ಜಾರಿಗೆ ಬಂದಿತ್ತು. ಆದರೆ ನವ–ಉದಾರವಾದದ ಆಕ್ರಮಣಕಾರಿ ನೀತಿಗಳು, 'ಕಲ್ಯಾಣ ರಾಜ್ಯ' ಕಳಚಿ ಬೀಳುತ್ತಿರುವುದು ಮತ್ತು ಜನತೆಯ ಮೇಲೆ ಅದರ ಕಟು ಪರಿಣಾಮಗಳು ಹೆಚ್ಚಿದಂತೆ ಈ ವ್ಯವಸ್ಥೆ ಶಿಥಿಲವಾಗಲಾರಂಭಿಸಿದೆ. 'ಪ್ರಗತಿಪರ ಮತ್ತು ಉಗ್ರ ಬಲಪಂಥೀಯ ಶಕ್ತಿಗಳು ಸೇರಿದಂತೆ ಮೂರನೆಯ ಶಕ್ತಿ'ಗಳು ಗಟ್ಟಿಗೊಳ್ಳುತ್ತಿರುವುದು ಎಲ್ಲೆಡೆ ಕಂಡು ಬಂದಿದೆ. ಆಸ್ಟ್ರೇಲಿಯದಲ್ಲಿ ಸಹ ಇದು ಆರಂಭವಾಗಿದೆ ಎಂಬುದು ಸ್ಪಷ್ಟ. ●



'ಷಿ ಪೆಂಗ್ ಲೇಬರ್ ಗೆ ಮತ ಚಲಾಯಿಸುತ್ತಿರುವ' ಲಿಬರಲ್ ಕೂಟದ ಪೋಸ್ಟರ್

ಮಾಧ್ಯಮಗಳು ದುಡಿಮೆಗಾರ–ವಿರೋಧಿ ನಿಲುವು ತಳೆಯುತ್ತವೆ. ಮಧ್ಯಮ ವರ್ಗವು ಹೊಂದಿರುವ ನವ ಉದಾರವಾದ–ಪರ ಧೋರಣೆಯೂ ಮಾಧ್ಯಮಗಳ ನಿಲುವಿಗೆ ಪೂರಕವಾಗಿದೆ. ಮಾಧ್ಯಮಗಳ ಕಾರ್ಯ–ನಿರ್ವಹಣೆಗಾಗಿ ಸಿಬ್ಬಂದಿಯನ್ನು ಒದಗಿಸುವ ಈ ಮಧ್ಯಮ ವರ್ಗವು ದುಡಿಯುವ ಜನರ ಪ್ರತಿರೋಧಗಳಿಗೆ ಸಹಾನುಭೂತಿ ವ್ಯಕ್ತಪಡಿಸುವುದಿಲ್ಲ ಮತ್ತು ಮಾಧ್ಯಮಗಳೂ ಸಹ ಅಂತಹ ಪ್ರತಿರೋಧಗಳನ್ನು ವರದಿ ಮಾಡುವುದೂ ಇಲ್ಲ. ಅದಕ್ಕಿಂತಲೂ ಹೆಚ್ಚಾಗಿ, ಸೌಮ್ಯವಾಗಿ ಹೇಳುವುದಾದರೆ, ಜನಾಂಗೀಯ ಅಥವಾ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೊಡುವ ಕಿರುಕುಳದ ಬಗ್ಗೆ ಮಾಧ್ಯಮಗಳು ಜಾಣ–ಕುರುಡರಾಗುತ್ತವೆ. ಬಿಕ್ಕಟ್ಟಿನಿಂದ ಪೀಡಿತವಾಗಿರುವ ನವ ಉದಾರವಾದವು "ದ್ವೇಷ"ದೊಂದಿಗೆ ಕೈ ಮಿಲಾಯಿಸಿದಾಗಲೂ ಮಧ್ಯಮ ವರ್ಗವು ಅಲ್ಪಸಂಖ್ಯಾತರ ವಿರುದ್ಧ "ಬಹುಸಂಖ್ಯಾತರ ಪಾರಮ್ಯ" ಸಾಧನೆ ಮತ್ತು ದ್ವೇಷದ ವಿರುದ್ಧ ಹೋರಾಡುವುದಿಲ್ಲ.

ಭಾರತದಲ್ಲಿ "ಬಹುಸಂಖ್ಯಾತರ ಪಾರಮ್ಯ" ಮತ್ತು ನವ ಉದಾರವಾದಿ ವ್ಯವಸ್ಥೆಯ ನಡುವಿನ ಒಡನಾಟವು ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ರೂಪವನ್ನು ಪಡೆಯುತ್ತದೆ ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡುವುದನ್ನೇ ಒಂದು ಕೆಲಸವಾಗಿ ಮಾಡಿಕೊಳ್ಳುತ್ತದೆ. ಇಡೀ ಸಾಮಾಜಿಕ ಸಂಕಥನವು ಜನರ ಲೌಕಿಕ ಸಮಸ್ಯೆಗಳಾದ ಅನ್ನ, ಬಟ್ಟೆ ಮತ್ತು ವಸತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮರೆಮಾಚುವ ಉದ್ದೇಶದಿಂದ ದುಡಿಯುವ ಜನರನ್ನು "ಕೋಮು" ಆಧಾರದ ಮೇಲೆ ವಿಭಜಿಸುವ ಮೂಲಕ ದೊಡ್ಡ ದೊಡ್ಡ ಬಂಡವಾಳಗಾರರು ದುಡಿಯುವ ಜನರ ಆಕ್ರೋಶಕ್ಕೆ ಗುರಿಯಾಗದಂತೆ ಅವರನ್ನು ರಕ್ಷಿಸುವುದೇ ಈ ಮೈತ್ರಿಕೂಟದ ಉದ್ದೇಶವಾಗಿದೆ. ರೂಪಾಯಿಯ ವಿನಿಮಯ ಮೌಲ್ಯವು ಅಭೂತಪೂರ್ವ ಮಟ್ಟದಲ್ಲಿ ಕುಸಿದಿರುವಾಗ, ಸಗಟು ಬೆಲೆಗಳ ಹಣದುಬ್ಬರವು ಶೇ. 15 ಕ್ಕಿಂತಲೂ ಹೆಚ್ಚಿಗೆ ಇರುವಾಗ, ಗ್ರಾಹಕ ಬೆಲೆ ಹಣದುಬ್ಬರವು ಶೇ.8ರ ಸಮೀಪದಲ್ಲಿರುವಾಗ, ಮತ್ತು ನಿರುದ್ಯೋಗವು ಸ್ವಾತಂತ್ರ್ಯದ ನಂತರ ಎಂದೂ ಕಾಣದಷ್ಟು ಹೆಚ್ಚಿನ ಮಟ್ಟದಲ್ಲಿರುವಾಗ, ಈ ಎಲ್ಲವನ್ನೂ ಬದಿಗೊತ್ತಿದ ಮಾಧ್ಯಮಗಳು, ವಾರಣಾಸಿಯ ಜ್ಞಾನವಾಪಿ ಮಸೀದಿಯ ಆವರಣದಲ್ಲಿ ಶಿವಲಿಂಗ ಕಂಡುಬಂತು ಎಂಬುದರ ಬಗ್ಗೆಯೇ ಬಡಬಡಾಯಿಸುತ್ತಿದ್ದವು. ಈ ವಿದ್ಯಮಾನವು ದೇಶದ ಸಾರ್ವಜನಿಕ ಸಂಕಥನದಲ್ಲಿ ಕೋಮುವಾದಿ–ಫ್ಯಾಸಿಸ್ಟ್ ವಿಷವನ್ನು ಎಷ್ಟರಮಟ್ಟಿಗೆ ತುಂಬಲಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ವಿಷ ತುಂಬುವ ದುಷ್ಕಾರ್ಯದಲ್ಲಿ ಪೂರಕವಾಗಿ ಮಧ್ಯಮ ವರ್ಗವು ತನ್ನ ಮೌನದ ಮೂಲಕ ಭಾಗವಹಿಸಿದೆ ಅಥವಾ ಈ ದುಷ್ಕಾರ್ಯದಲ್ಲಿ ಸದ್ದಿಲ್ಲದೆ ಭಾಗವಹಿಸಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಜನರಿಗೆ ಕೋಮುವಾದಿ–ಫ್ಯಾಸಿಸ್ಟ್ ವಿಷ ಉಣಿಸುವ ಈ ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ವಿರುದ್ಧ ಹೊರಾಟ ನಡೆಸಬೇಕಾಗುತ್ತದೆ. ಈ ಹೋರಾಟವು ನವ–ಉದಾರವಾದಿ ಕಾರ್ಯಸೂಚಿಯ ಆಚೆಗೂ ದೃಷ್ಟಿ ಹಾಯಿಸಬೇಕಾಗುತ್ತದೆ. ಅದರಾಚೆಗಿನ ಒಂದು ಪರ್ಯಾಯ ಕಾರ್ಯಸೂಚಿಯನ್ನು ದುಡಿಯುವ ಜನರ ಮುಂದಿಟ್ಟು ಅವರನ್ನು ಹೋರಾಡುವಂತೆ ಹುರಿದುಂಬಿಸುವ ಕಾರ್ಯವನ್ನು "ವರ್ಗ–ಮುಕ್ತ"ವಾಗಿ ಉಳಿದಿರುವ ಮಧ್ಯಮ ವರ್ಗದ ಘಟಕಗಳು ಕೈಗೊಳ್ಳಬೇಕಾಗುತ್ತದೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 6-12, 2022 Price: Rs. 10/- Date of Publication: 3 JUNE 2022 RNI No. KARKAN /2006/17926 Posted on 06-06-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕೃಷಿ ಮತ್ತು ರೈತರಿಗೆ ಹೊಸ ಭರವಸೆ ಮೂಡಿಸಿದ ಕೇರಳ ಎಡರಂಗ ಸರ್ಕಾರ

ಎಚ್.ಆರ್. ನವೀನ್ ಕುಮಾರ್

(ಅಖಿಲ್ ಕೆ.ಎಂ ಮತ್ತು ವಿಜೂ ಕೃಷ್ಣನ್‌ರವರ Left Alternative Generates Hope for Kerala's Farmers and Agriculture ಲೇಖನವನ್ನು ಆಧರಿಸಿದ್ದು)

2006 ರಲ್ಲಿ, ಎಲ್‌ಡಿಎಫ್ ಸರ್ಕಾರವು ಭತ್ತಬೆಳೆಗಾರರಿಗೆ ದೊಡ್ಡ ಪ್ರೋತ್ಸಾಹದ ಬೋನಸ್ ಅನ್ನು ನೀಡಿತು. ಕೇಂದ್ರ ಸರ್ಕಾರವು ಭತ್ತಕ್ಕೆ ಘೋಷಿಸಿದ ಎಂಎಸ್‌ಪಿ ಕ್ವಿಂಟಾಲ್ ರೂ.570. ಇದು ಕೇರಳದ ರೈತನಿಗೆ ಕೃಷಿ ವೆಚ್ಚವನ್ನೂ ಖಚಿತಪಡಿಸುವುದಿಲ್ಲ. ಎಲ್‌ಡಿಎಫ್ ಸರ್ಕಾರವು 2006 ರಲ್ಲಿ ಕ್ವಿಂಟಲ್‌ಗೆ ರೂ.707 ರಂತೆ ಖರೀದಿಸಿತು ಮತ್ತು 2011 ರ ಹೊತ್ತಿಗೆ ಅದು ಕ್ವಿಂಟಲ್‌ಗೆ ರೂ.1,400 ಕ್ಕೆ ಏರಿತು. ಆದರೆ ಕೇಂದ್ರೀಯ ಎಂಎಸ್‌ಪಿ ಕೇವಲ ಕ್ವಿಂಟಲ್‌ಗೆ ರೂ.1000 ಮಾತ್ರ ಆಗಿತ್ತು. ಕೇಂದ್ರವು ಘೋಷಿಸಿದ 2020–21 ಬೆಳೆ ವರ್ಷಕ್ಕೆ ಭತ್ತದ ಎಂಎಸ್‌ಪಿ ಕ್ವಿಂಟಲ್ ರೂ 1868 ಆಗಿತ್ತು, ಇದೇ ಸಂದರ್ಭದಲ್ಲಿ ಕೇರಳದಲ್ಲಿ ಭತ್ತವನ್ನು ಕ್ವಿಂಟಾಲ್‌ಗೆ ರೂ.2800 ರಂತೆ ಖರೀದಿಸಲಾಯಿತು.

ಜಾಗತೀಕರಣ ಮತ್ತು ನವಉದಾರೀಕರಣ ಆರ್ಥಿಕ ನೀತಿಗಳಿಂದಾಗಿ ಕಳೆದ ಮೂರು ದಶಕಗಳಿಂದ ಭಾರತದ ಕೃಷಿಯು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ನೀತಿಗಳಿಂದಾಗಿ ಕೃಷಿ ಲಾಭದಾಯಕವಲ್ಲ ಎಂದು ನಿರ್ಧರಿಸಿ ಒಂದು ಕಡೆ ಕೃಷಿಯಿಂದ ರೈತರು ವಿಮುಖರಾದರೆ ಮತ್ತೊಂದೆಡೆ ಇದೇ ರೈತರು ಮಾಡಿದ ಸಾಲಗಳನ್ನು ತೀರಿಸಲಾಗದೆ ಆತ್ಮಹತ್ಯೆಯ ದಾರಿಯನ್ನು ಹಿಡಿದಿದ್ದಾರೆ. ಇದಕ್ಕೆ ಮುಖ್ಯ ಕಾರಣ ಸರ್ಕಾರಗಳು ಕೃಷಿ ಮೇಲಿನ ಅನುದಾನವನ್ನು ಕಡಿತಗೊಳಿಸಿದ್ದು, ಸರಿಯಾದ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಿ ಬೆಲೆಗಳನ್ನು ನಿಯಂತ್ರಿಸದಿರುವುದು, ಅತ್ಯಂತ ದುಬಾರಿ ಬಡ್ಡಿದರದ ಸಾಲ, ಗಗನಕ್ಕೇರಿದ ಉತ್ಪಾದನಾ ವೆಚ್ಚ, ಇವುಗಳ ಜೊತೆಗೆ ರೈತರಿಗೆ ನಷ್ಟವನ್ನು ಉಂಟುಮಾಡಿ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ನೀತಿಗಳನ್ನು ಅನುಸರಿಸಿದ್ದು. ದೇಶದಲ್ಲಿರುವ ಇಂತಹದ್ದೇ ಪರಿಸ್ಥಿತಿ 2006 ರಲ್ಲಿ ಎಡರಂಗ ಸರ್ಕಾರ ಕೇರಳದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಇತ್ತು.

ಸಾಂಬಾರ ಪದಾರ್ಥಗಳು, ಗೋಡಂಬಿ, ತೆಂಗು, ಅಡಿಕೆ, ಕೋಕೋ, ಚಹಾ, ಕಾಫಿ ಮತ್ತು ರಬ್ಬರ್‌ನಂತಹ ವಾಣಿಜ್ಯ ಬೆಳೆಗಳು ಶೇ 80 ಕ್ಕಿಂತ ಹೆಚ್ಚು ಬೆಳೆ ಬೆಳೆಯುವ ಪ್ರದೇಶವನ್ನು ಹೊಂದಿರುವ ಅಪರೂಪದ ರಾಜ್ಯ ಕೇರಳ. ಭತ್ತವು ರಾಜ್ಯದ ಇತರ ಪ್ರಮುಖ ಬೆಳೆಯಾಗಿದೆ. ಆದರೆ, ಇದು ತನ್ನ ಅಗತ್ಯತೆಗಳ ಪ್ರಮುಖ ಪಾಲನ್ನು ಇತರ ರಾಜ್ಯಗಳ ಮೇಲೆ ಅವಲಂಬಿತವಾಗಿದೆ. ಶ್ರೀಲಂಕಾದೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ವಯನಾಡ್, ಇಡುಕ್ಕಿ ಮತ್ತು ಇತರ ಜಿಲ್ಲೆಗಳು ಅನೇಕ ಆತ್ಮಹತ್ಯೆಗಳಿಗೆ ಸಾಕ್ಷಿಯಾಗಿದ್ದವು, ಚಹಾ, ಕಾಫಿ ಮತ್ತು ಮಸಾಲೆಗಳ ಅಗ್ಗದ ಆಮದುಗಳು ಕೇರಳದ ರೈತರಿಗೆ ಏಕಕಾಲದಲ್ಲಿ ಬೆಲೆ ಕುಸಿತಕ್ಕೆ ಕಾರಣವಾಯಿತು. ರೈತರ ಎಲ್ಲಾ ಸಂಘಟನೆಗಳನ್ನು ಒಟ್ಟುಗೂಡಿಸಿ ಕೇರಳ ರೈತ ಸಂಘ (ಎಐಕೆಎಸ್) ದ ನೇತೃತ್ವದಲ್ಲಿ ಸಮಸ್ಯೆ ಆಧಾರಿತ ಐಕ್ಯ ಹೋರಾಟಗಳಿಂದ ಸಾಲ ಮನ್ನಾ ಮತ್ತು ಋಣಭಾರ ಆಯೋಗದ ಸ್ಥಾಪನೆಯ ಬೇಡಿಕೆಯನ್ನು ಮುಂದಿಟ್ಟವು.

ಕೃಷಿಯನ್ನು ಕಾರ್ಯಸಾಧ್ಯ ಮತ್ತು ಲಾಭದಾಯಕವಾಗಿಸುವುದು

2006 ರಲ್ಲಿ ಅಧಿಕಾರಕ್ಕೆ ಬಂದ ವಿ.ಎಸ್.ಅಚ್ಯುತಾನಂದನ್ ನೇತೃತ್ವದ ಎಡರಂಗ ಸರ್ಕಾರವು ಮೂರು ಆಯಾಮಗಳ ಕಾರ್ಯತಂತ್ರದೊಂದಿಗೆ ಕೃಷಿ ಬಿಕ್ಕಟ್ಟನ್ನು ನಿವಾರಿಸಲು ಪ್ರಯತ್ನಿಸಿತು. ಈ ಕಾರ್ಯತಂತ್ರವು ಸಾಲದಲ್ಲಿರುವ ರೈತರಿಗೆ ತುರ್ತು ಪರಿಹಾರವನ್ನು ಒದಗಿಸುವುದು, ಕೃಷಿ ಬೆಲೆಗಳನ್ನು ಸ್ಥಿರಗೊಳಿಸುವುದು ಮತ್ತು ಕೃಷಿ ಉತ್ಪಾದಕತೆ ಮತ್ತು ಆದಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದು ಸಾಲ ಪರಿಹಾರ ಆಯೋಗವನ್ನು ಸ್ಥಾಪಿಸಿತು ಮತ್ತು ರೈತರಿಗೆ ವಿವಿಧ ಸಬ್ಸಿಡಿಗಳನ್ನು ನೀಡಿತು. ಋಣಮುಕ್ತ ಆಯೋಗವು ರೈತರ ಸಾಲ ಮನ್ನಾ ಮಾಡಿ ಅವರನ್ನು ಸಾಲದ ಬಲೆಯಿಂದ ಪಾರು ಮಾಡಿದೆ. ರೈತರ ಆಂದೋಲನವು ಉತ್ಪಾದನೆಯಲ್ಲಿ ಮಧ್ಯಪ್ರವೇಶಿಸಲು ರೈತರನ್ನು ಸಾಮೂಹಿಕವಾಗಿ ಸಂಘಟಿಸುವ ಅಗತ್ಯವನ್ನು ಸ್ಪಷ್ಟಪಡಿಸಿತು. ಲಾಗುವಾಡುಗಳ ಬಳಕೆಯನ್ನು ಉತ್ತಮಗೊಳಿಸುವುದು, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು ಮತ್ತು ಕೃಷಿ ಉತ್ಪನ್ನವನ್ನು ಖಚಿತಪಡಿಸಿಕೊಳ್ಳಲು ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆಯ ಮಧ್ಯಸ್ಥಿಕೆಗಾಗಿ ನಿರಂತರ ಮಧ್ಯ ಪ್ರವೇಶ ಮಾಡಿ ಬಂದ ಲಾಭವನ್ನು ರೈತರಿಗೆ ವಿತರಿಸುವ ವ್ಯವಸ್ಥೆ ಕಲ್ಪಿಸಲಾಯಿತು. 2006, 2016 ಮತ್ತು 2021ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಎಲ್‌ಡಿಎಫ್ ಸರಕಾರಗಳ ಅವಧಿಯಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ ರೈತರು ಆತ್ಮಹತ್ಯೆಯಂತಹ ಯೋಚನೆಯಿಂದ ಹೊರಬಂದು ಮುಖದಲ್ಲಿ ಮತ್ತೆ ನಗುವನ್ನು ಕಾಣವಂತಾಯಿತು.

ಕೃಷಿಯ ಆದಾಯ ಕುಸಿಯಲು ಕಾರಣವಾದ ಪ್ರಮುಖ ಸಮಸ್ಯೆಯೆಂದರೆ, ಉತ್ಪಾದನೆಯ ವೆಚ್ಚಗಳು ನಿರಂತರವಾಗಿ ಏರಿಕೆಯಾಗುತ್ತಿದ್ದು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗುತ್ತಿಲ್ಲ, ಇದರಿಂದಾಗಿ ಕೃಷಿಯು ಸೊರಗಿದೆ. ಕೃಷಿಯನ್ನು ಕಾರ್ಯಸಾಧ್ಯವಾಗಿ ಮಾಡುವುದು ಹೇಗೆ? ಇದು ವಿವಿಧ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರಗಳು ಹೆಚ್ಚಿನ ಆದ್ಯತೆ ನೀಡಿದ ವಿಷಯವಾಗಿದೆ. ಸಬ್ಸಿಡಿ ಒದಗಿಸುವ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು, ಹೆಚ್ಚಿನ ಇಳುವರಿಯ ತಳಿಗಳೊಂದಿಗೆ ಉತ್ಪಾದಕತೆಯನ್ನು ಹೆಚ್ಚಿಸುವುದು, ಲಾಭದಾಯಕ ಬೆಲೆಯಲ್ಲಿ ಸಂಗ್ರಹಣೆಯನ್ನು ಖಾತ್ರಿಪಡಿಸುವುದು



ಮತ್ತು ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ ಮೂಲಕ ಉತ್ಪತ್ತಿಯಾಗುವ ಹೆಚ್ಚುವರಿಯ ಪಾಲನ್ನು ರೈತರಿಗೆ ವಿತರಿಸುವುದು. ಎಮ್.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಅನುಸರಿಸಿ ರೈತರಿಗೆ ಉತ್ತಮ ಆದಾಯವನ್ನು ಖಚಿತಪಡಿಸಲು ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇಕಡ 50 ರಷ್ಟು ಹೆಚ್ಚು ಬೆಲೆಯನ್ನು ಖಾತರಿಪಡಿಸುವುದು.

ಭತ್ತ ಬೆಳೆಗೆ ಪ್ರೋತ್ಸಾಹ

ಅಕ್ಕಿಯು ಕೇರಳಿಯರ ಪ್ರಧಾನ ಆಹಾರವಾಗಿದೆ; ಆದರೆ ಕೇರಳವು ತನ್ನ ಅವಶ್ಯಕತೆಗಳನ್ನು ಪೂರೈಸಲು ಇತರ ರಾಜ್ಯಗಳ ಮೇಲೆ ಅವಲಂಬಿತವಾಗಿದೆ. ಏಕೆಂದರೆ ಭತ್ತದ ಜಮೀನುಗಳು ಕಣ್ಮರೆಯಾಗುತ್ತಿವೆ ಮತ್ತು ಕ್ರಮೇಣ ಒಟ್ಟಾರೆ ಕೃಷಿ ಆಧಾರಿತ ಭೂಮಿಯೂ ಕಡಿಮೆಯಾಗುತ್ತಿದೆ. 2006 ರಲ್ಲಿ, ಎಲ್‌ಡಿಎಫ್ ಸರ್ಕಾರವು ಭತ್ತಬೆಳೆಗಾರರಿಗೆ ದೊಡ್ಡ ಪ್ರೋತ್ಸಾಹದ ಬೋನಸ್ ಅನ್ನು ನೀಡಿತು. ಕೇಂದ್ರ ಸರ್ಕಾರವು ಭತ್ತಕ್ಕೆ ಘೋಷಿಸಿದ ಎಂಎಸ್‌ಪಿ ಕ್ವಿಂಟಾಲ್ ರೂ.570. ಇದು ಕೇರಳದ ರೈತನಿಗೆ ಕೃಷಿ ವೆಚ್ಚವನ್ನೂ ಖಚಿತಪಡಿಸುವುದಿಲ್ಲ. ಎಲ್‌ಡಿಎಫ್ ಸರ್ಕಾರವು 2006 ರಲ್ಲಿ ಕ್ವಿಂಟಲ್‌ಗೆ ರೂ.707 ರಂತೆ ಖರೀದಿಸಿತು ಮತ್ತು 2011 ರ ಹೊತ್ತಿಗೆ ಅದು ಕ್ವಿಂಟಲ್‌ಗೆ ರೂ.1,400 ಕ್ಕೆ ಏರಿತು. ಆದರೆ ಕೇಂದ್ರೀಯ ಎಂಎಸ್‌ಪಿ ಕೇವಲ ಕ್ವಿಂಟಲ್‌ಗೆ ರೂ.1000 ಮಾತ್ರ ಆಗಿತ್ತು. ಕೇಂದ್ರವು ಘೋಷಿಸಿದ 2020–21 ಬೆಳೆ ವರ್ಷಕ್ಕೆ ಭತ್ತದ ಎಂಎಸ್‌ಪಿ ಕ್ವಿಂಟಲ್ ರೂ 1868 ಆಗಿತ್ತು, ಇದೇ ಸಂದರ್ಭದಲ್ಲಿ ಕೇರಳದಲ್ಲಿ ಭತ್ತವನ್ನು ಕ್ವಿಂಟಾಲ್‌ಗೆ ರೂ.2800 ರಂತೆ ಖರೀದಿಸಲಾಯಿತು. 2006 ರಲ್ಲಿ ಭತ್ತದ ಕೃಷಿಯನ್ನು ಉತ್ತೇಜಿಸಲು ಗಮನ ನೀಡಲಾಯಿತು. ಇತ್ತೀಚಿನ ಬಜೆಟ್‌ನಲ್ಲಿ ಇದನ್ನು ಕ್ವಿಂಟಲ್‌ಗೆ ರೂ.2820 ಕ್ಕೆ ಹೆಚ್ಚಿಸಲಾಗಿದೆ. ಆದರೆ ಕೇಂದ್ರೀಯವಾಗಿ ನಿಗದಿಪಡಿಸಿದ ಎಂಎಸ್‌ಪಿ ಕೇವಲ ಕ್ವಿಂಟಲ್ ಗೆ ರೂ.1940 ಆಗಿದೆ. ಹೆಚ್ಚುವರಿಯಾಗಿ 2020 ರಲ್ಲಿ ಭತ್ತದ ಬೆಳೆಗಾರರಿಗೆ ಹೆಕ್ಟೇರ್ ರೂ.2000 ರಾಯಲ್ಟಿಯನ್ನು ಘೋಷಿಸಲಾಯಿತು, ಪರಿಸರ ವ್ಯವಸ್ಥೆಗಳ ಸಂರಕ್ಷಣೆಯಲ್ಲಿ ಭತ್ತದ ಗದ್ದೆಗಳು ನೀಡುತ್ತಿರುವ ಕೊಡುಗೆಗಳನ್ನು ಗುರುತಿಸಲು ಇತ್ತೀಚಿನ ಬಜೆಟ್‌ನಲ್ಲಿ ಇದನ್ನು ಹೆಕ್ಟೇರ್‌ಗೆ ರೂ.3000 ಕ್ಕೆ ಹೆಚ್ಚಿಸಲಾಗಿದೆ.

2008 ರಲ್ಲಿ ಭತ್ತದ ಗದ್ದೆಗಳನ್ನು ಇತರ ಉದ್ದೇಶಗಳಿಗಾಗಿ ಪರಿವರ್ತಿಸುವುದರಿಂದ ರಕ್ಷಿಸಲು 'ಕೇರಳ ಭತ್ತದ ಭೂಮಿ ಮತ್ತು ಜೌಗು ಪ್ರದೇಶಗಳ ಸಂರಕ್ಷಣಾ ಕಾಯ್ದೆ'ಯನ್ನು ಅಂಗೀಕರಿಸಲಾಯಿತು. ಭತ್ತದ ಕೃಷಿ ಉತ್ತೇಜನಕ್ಕೆ ವಿಶೇಷ ಒತ್ತು ನೀಡಿ ಹಿಂಗಾರು ಭೂಮಿ ಬಳಕೆಗೆ ಉತ್ತೇಜನ ನೀಡುವುದು, ಮಹಿಳಾ ಸ್ವಸಹಾಯ ಸಂಘಗಳು, ಕುಟುಂಬಶ್ರೀಗಳಿಗೆ ಗುತ್ತಿಗೆಗೆ ಅವಕಾಶ ನೀಡುವುದು ಇತ್ಯಾದಿ. 2021–22ರ ಬಜೆಟ್‌ನಲ್ಲಿ ಭತ್ತದ ಅಭಿವೃದ್ಧಿಗೆ ರೂ.116.14 ಕೋಟಿಗಳನ್ನು ಮೀಸಲಿಡಲಾಗಿದೆ. 'ಸುಭಿಕ್ಷಾ ಕೇರಳಂ' ಅಡಿಯಲ್ಲಿ ಪಾಳು ಭೂಮಿಯಲ್ಲಿ ಭತ್ತ ಬೆಳೆಯಲು ರೂ. 3 ಕೋಟಿ ಮೀಸಲಿಡಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಕುಟುಂಬಶ್ರೀ, ಕಂಅಖ, ಈಕಔಗಳು ಮತ್ತು ಐಖಉಆ ಸಂಸ್ಥೆಗಳ ಸಕ್ರಿಯ ಒಳಗೊಳ್ಳುವಿಕೆಯಿಂದ ಭತ್ತದ ಹಿಂಡಿಗಳನ್ನು ಸುಸ್ಥಿರ ಕೃಷಿಯ ಅಡಿಯಲ್ಲಿ ತರಲಾಗುವುದು. ಕುಟುಂಬಶ್ರೀ 74,640 ಜಂಟಿ ಹೊಣೆಗಾರಿಕೆ ಗುಂಪುಗಳ ಅಡಿಯಲ್ಲಿ ಸಂಘಟಿತವಾಗಿರುವ ಸುಮಾರು 3.42 ಲಕ್ಷ ಮಹಿಳಾ ರೈತರಿಗೆ ಭೂಮಿಯನ್ನು ಸಾಗುವಳಿ ಮಾಡಲು ಗುತ್ತಿಗೆ ನೀಡಲಾಗಿದೆ ಮತ್ತು ಅವರು 33,259 ಹೆಕ್ಟೇರ್‌ನಲ್ಲಿ ಭತ್ತ ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಈ ನೀತಿಗಳ ಪರಿಣಾಮವಾಗಿ, ರಾಜ್ಯದಲ್ಲಿ ಭತ್ತದ ಕೃಷಿಯು 1.7 ಲಕ್ಷ ಹೆಕ್ಟೇರ್‌ನಿಂದ 2.3 ಲಕ್ಷ ಹೆಕ್ಟೇರ್‌ಗಳಿಗೆ ಏರಿದೆ.

ಈ 'ರೈತ ಕೇಂದ್ರಿತ' ವಿಧಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಗ್ರಾಮ ಪಂಚಾಯತ್‌ಗಳ ಮೂಲಕ ರೈತರಿಗೆ ನೀಡುವ ಸಹಾಯಧನಗಳು ಭಾರತದಲ್ಲಿ ಸಾಟಿಯಿಲ್ಲದ್ದಾಗಿದೆ. ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಕೃಷಿ ಸಾಮಗ್ರಿಗಳು, ಕಾರ್ಮಿಕ ಮತ್ತು ನೀರಾವರಿ ಸೇರಿದಂತೆ ಕೃಷಿ ವೆಚ್ಚಗಳು ತೀವ್ರವಾಗಿ ಹೆಚ್ಚಳವಾದ್ದರಿಂದ 2020 ರಲ್ಲಿ ಸಬ್ಸಿಡಿಗಳನ್ನು ಪರಿಷ್ಕರಿಸಲಾಯಿತು.

ಕೆಲವು ಬೆಳೆಗಳಿಗೆ (ಹೆಕ್ಟೇರ್‌ಗೆ) ಸಹಾಯಧನಗಳು ಈ ಕೆಳಗಿನಂತಿವೆ:

ಭತ್ತ (ವರ್ಷಕ್ಕೆ ಒಂದು ಕೊಯ್ಲು) – ರೂ, 22,000
ತರಕಾರಿಗಳು – ರೂ, 25,000
ತಂಪಾದ ಋತುವಿನ ತರಕಾರಿಗಳು –ರೂ. 30,000
ಬೇಳೆ ಕಾಳುಗಳು– ರೂ. 20,000
ಮರಗೆಣಸು ಮತ್ತು ಇತರ ಗೆಡ್ಡೆಗಳು– ರೂ. 30,000
ಬಾಳೆ – ರೂ.30.000

ಹಿಂಗಾರು ಭೂಮಿಯನ್ನು ಭತ್ತದ ಕೃಷಿಗೆ ಪರಿವರ್ತಿಸಲು ಪ್ರೋತ್ಸಾಹವೂ ಇದೆ, ಉದಾಹರಣೆಗೆ, ಕರಿವೆಲ್ಲೂರ್–ಪೆರಳಂ ಗ್ರಾಮ ಪಂಚಾಯತ್‌ಗಳು ಹೆಕ್ಟೇರ್‌ಗೆ ರೂ.17,000 ಸಹಾಯಧನವನ್ನು ನೀಡುತ್ತದೆ. ಪ್ರತಿ ಪಂಚಾಯತ್‌ಗಳು ರೈತರಿಗೆ ಸಹಾಯ ಮಾಡಲು ಇದೇ ರೀತಿಯ ಯೋಜನೆಗಳು ಮತ್ತು ವಿವಿಧ ಸಬ್ಸಿಡಿಗಳನ್ನು ಹೊಂದಿವೆ. ಇತ್ತೀಚಿನ ಬಜೆಟ್‌ನಲ್ಲಿ ರಾಜ್ಯದಲ್ಲಿ ಭತ್ತದ ಕೃಷಿ ಅಭಿವೃದ್ಧಿಗೆ 76 ಕೋಟಿರೂ ಮೀಸಲಿಡಲಾಗಿದೆ. ಗುಂಪುಗಳಿಗೆ ಕೃಷಿ ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಖರೀದಿಸಲು ರೂ 50 ಲಕ್ಷದವರೆಗೆ ಸಾಲ ನೀಡುವ ಯೋಜನೆಯನ್ನು ಪ್ರಾರಂಭಿಸಲಾಯಿತು. ತರಕಾರಿ ಕೃಷಿ ಮಧ್ಯಪ್ರವೇಶಕ್ಕೆ ಕಳೆದ ಬಾರಿ 19 ಕೋಟಿ ರೂ ಮೀಸಲಿದ್ದು ಈ ವರ್ಷ 39 ಕೋಟಿ ಮೀಸಲಿಡಲಾಗಿದೆ. 2015–16ಕ್ಕೆ ಹೋಲಿಸಿದರೆ, ಕೇರಳದಲ್ಲಿ ತರಕಾರಿ ಉತ್ಪಾದನೆಯು 2018–19 ರಲ್ಲಿ 6.5 ಲಕ್ಷ ಮೆಟ್ರಿಕ್ ಟನ್‌ಗಳಿಂದ 12.12 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿತು, ನಂತರ ಅದು 2020 ರಲ್ಲಿ 15 ಲಕ್ಷ ಮೆಟ್ರಿಕ್ ಟನ್‌ಗೆ ಏರಿತು ಮತ್ತು ಕೃಷಿಯನ್ನು 24,000 ಹೆಕ್ಟೇರ್‌ಗೆ ವಿಸ್ತರಿಸಲಾಯಿತು, 35 ಲಕ್ಷ ಟನ್‌ಗಳಷ್ಟು ಹೆಚ್ಚಳವನ್ನು ದಾಖಲಿಸಿದೆ. ಕಳೆದ ಎಲ್‌ಡಿಎಫ್ ಸರ್ಕಾರದ ಅವಧಿಯಲ್ಲಿ 78 ಲಕ್ಷ ತರಕಾರಿ ಬೀಜದ ಕಿಟ್‌ಗಳನ್ನು ಮತ್ತು 248 ಲಕ್ಷ ಗಿಡಗಳನ್ನು ಉಚಿತವಾಗಿ ವಿತರಿಸಿದೆ ಮತ್ತು ಮಳೆ ಆಶ್ರಯ, ಹನಿ ನೀರಾವರಿ ಸೌಲಭ್ಯಗಳಂತಹ ಇತರ ಬೆಂಬಲವನ್ನು ನೀಡಿದೆ. ಉತ್ಪಾದಿಸಿದ ತರಕಾರಿಗಳ ದೊಡ್ಡ ಭಾಗವು ಕೀಟನಾಶಕ ಮುಕ್ತವಾಗಿದ್ದು, ಕಿಸಾನ್ ಸಭಾದಂತಹ ಸಂಸ್ಥೆಗಳು ಅವುಗಳ ಕೃಷಿಯಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತಿವೆ. ಕಳೆದ ಎಲ್‌ಡಿಎಫ್ ಸರ್ಕಾರ 16 ತರಕಾರಿಗಳು ಮತ್ತು ಹಣ್ಣುಗಳಿಗೆ ಮೂಲ ಬೆಲೆಯನ್ನು ಘೋಷಿಸಿತು. ಈ ಉಪಕ್ರಮವು ದೇಶದಲ್ಲೇ ಮೊದಲನೆಯದು. ರಾಜ್ಯ ಕೃಷಿ ಬೆಲೆ ಮಂಡಳಿ ನಡೆಸಿದ ಅಧ್ಯಯನದ ಆಧಾರದ ಮೇಲೆ ಉತ್ಪಾದನಾ ವೆಚ್ಚವನ್ನು ಲೆಕ್ಕಹಾಕಿ ಜೊತೆಗೆ ಶೇ.20ರಷ್ಟು ಸೇರಿಸಿ ಮೂಲ ಬೆಲೆ ನಿಗದಿಪಡಿಸಲಾಗಿದೆ. ಪ್ರತಿ ಕಿಲೋಗ್ರಾಂನ ಮೂಲ ಬೆಲೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ. ಬಾಳೆಹಣ್ಣು ರೂ 24–30, ಅನಾನಸ್ ರೂ 15, ಬೂದಕುಂಬಳಕಾಯಿ ರೂ 9, ಸೌತೆಕಾಯಿ ರೂ 8, ಹಾಗಲಕಾಯಿ ರೂ 30, ಸೀಬೆಕಾಯಿ ರೂ 30, ದಾರದ ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**